Mr. SPEAKER.—I have gone through the press reports. Hon. Chief Minister has not made any such policy statement.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಈ ದಿನ ಬೆಳಿಗ್ಗೆ ಪತ್ರಿಕೆಯನ್ನು ಓದಿದ ತಕ್ಷಣ ಕಾವೇರಿ ನೀರಿನ ವಿಷಯದಲ್ಲಿ ಕೇಂದ್ರ ಸರ್ಕಾರದವರು ಅವರ ನಿಲುವನ್ನು ಮತ್ತು ಮದ್ರಾಸ್ ಸರ್ಕಾರದವರು ಅವರ ನಿಲುವನ್ನು ತೆಗೆದುಕೊಳ್ಳುವಾಗ, ನಮ್ಮ ನಿಲುವು ಅದರ ಬಗ್ಗೆ ಏನು ಎಂಬುದನ್ನು ನಾವು ಮಾನ್ಯ ಮುಖ್ಯಮಂತ್ರಿಗಳಿಂದ ಈಗ ತಿಳಿದುಕೊಳ್ಳಬೇಕು.

Mr. SPEAKER.—I have gone through the papers. I do not think any such statement has been made by the Chief Minister, or any other Minister.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಬಂದಾಗ ನನಗೆ ಕೆಲವು ಪ್ರಶ್ನೆಗಳನ್ನು ವಿವರಗಳಿಗಾಗಿ ಕೇಳುವುದಕ್ಕೆ ತಾವು ಅವಕಾಶವನ್ನು ಕೊಡಬೇಕೆಂದು ಕೇಳುತ್ತೇನೆ.

Mr. SPEAKER.—I have already stated that I will ask the Chief Minister to make a statement. Sri G. M. Manjunathaiah may begin the debate.

BUDGET ESTIMATES FOR 1970-71

General Discussion

(Debate continued)

ಶ್ರೀ ಜಿ. ಎಂ. ಮಂಜುನಾಥಯ್ಯ (ಸೋಮವಾರಪೇಟೆ).—ಅಧ್ಯಕ್ಷರೇ, ಈ ವರ್ಷದ ಬಡ್ಜೆಟ್‌ನ್ನು ವಿರೋಧಿಸುತ್ತಾ ನನ್ನ ಕೆಲವು ಮಾತುಗಳನ್ನು ಹೇಳಬೇಕೆಂದು ಇಚ್ಛೆಪಡುತ್ತೇನೆ. ಈಗ ಸುಮಾರು 22 ವರ್ಷಗಳಿಂದಲೂ ನಮಗೆ ಸ್ವಾತಂತ್ರ್ಯ ಬಂದಲಾಗಾಯಿತು ಸೋಷಿಯಾಲಿಸ್ಟಿಕ್ ಪ್ಯಾಟ್ರನ್ ಮೇಲೆ ಈ ಒಂದು ಬಡ್ಜೆಟ್ಟನ್ನು ಮಂಡಿಸುತ್ತಿದ್ದಾರೆ. ಇಷ್ಟರವರೆಗೂ ಆಗಿರತಕ್ಕಂಥ ಲೆಕ್ಕವನ್ನು ತೆಗೆದುಕೊಂಡರೆ ನಾವು ಈ ತರಹದ ಬಡ್ಜೆಟ್ಟನ್ನು ಬದಲಾಯಿಸಬೇಕಾದ ಅಗತ್ಯ ಇದೆ ಎನ್ನುವುದು ನಮಗೆ ಮನದಟ್ಟಾಗುತ್ತದೆ. ಯಾವಾಗಲೂ ಒಂದು ದೇಶ ಮುಂದುವರಿಯಬೇಕಾದರೆ ಉದಾಹರಣೆಗೆ ವೆಸ್ಟ್ ಜರ್ಮನಿ, ಜಪಾನ್ ತೆಗೆದುಕೊಂಡರೆ ಅದು ಸೋಷಿಯಾಲಿಸ್ಟಿಕ್ ಪ್ಯಾಟ್ರನ್‌ನಿಂದ ಅಲ್ಲ ಪ್ರೈವೇಟ್ ಎಂಟರ್‌ಪ್ರೈಸ್‌ನಿಂದಾಗಿ ಮುಂದಕ್ಕೆ ಹೋಗುವುದು ಸಾಧ್ಯ ಇದೆ ಎಂದು ನಮಗೆ ಮನವರಿಕೆಯಾಗುತ್ತೆ. ನಮ್ಮ ದೇಶದಲ್ಲೂ ನಾವು ಸೋಷಿಯಾಲಿಸಮ್ ಕಾರ್ಯಗತ ಮಾಡಬೇಕಾದರೆ ನಮ್ಮ ದೇಶದಲ್ಲಿ ಮೊದಲು ವೆಲ್ತ್ wealth ಉಂಟುಮಾಡಬೇಕಾಗಿದೆ. ವೆಲ್ತ್ ಬಂದನಂತರ, ನಮ್ಮ ದೇಶ ಸುಭಿಕ್ಷವಾದ ನಂತರ ಸೋಷಿಯಾಲಿಸ್ಟಿಕ್ ಅಭ್ಯಾಸ ಮಾಡಬೇಕು. ಅಲ್ಲಿಯವರೆಗೂ ಅಂದರೆ ದೇಶದಲ್ಲಿ ವೆಲ್ತ್ ತುಂಬುವವರೆಗೂ ನಮ್ಮ ದೇಶದ ಪ್ರತಿಯೊಂದು ಭಾಗವೂ ಮುಂದುವರಿದು ಹೋಗಬೇಕಾಗುತ್ತದೆ. ಮುಂದುವರಿಯುವುದಕ್ಕೆ ಅವಕಾಶ ಮಾಡಿಕೊಡಬೇಕಾದರೆ ಪ್ರೈವೇಟ್ ಎಂಟರ್‌ಪ್ರೈಸನ್ನು ಬಲಪಡಿಸಬೇಕು ಎಂದು ಹೇಳಬೇಕಾಗಿದೆ. ಇನ್ನೊಂದು ಉದಾಹರಣೆಗಾಗಿ ಎಂ. ಎಸ್. ಆರ್. ಟಿ. ಸಿ. ವಿಚಾರ ತೆಗೆದುಕೊಳ್ಳೋಣ. ಜನತೆಯ ಹಿತದೃಷ್ಟಿಯಿಂದ ಈ ಎಂ. ಎಸ್. ಆರ್. ಟಿ. ಸಿ. ನ್ಯಾಷನಲೈಸೇಷನ್ ಆದಮೇಲೆ ಜನತೆಗೆ ಸುಖ ಸಿಕ್ಕಿದೆಯೇ ಎಂದು ನೋಡುವುದಾದರೆ, ಬಸ್ಸಿನಲ್ಲಿ ಪ್ರಯಾಣ ಮಾಡುವವರಿಗೆ ಮೊದಲಿಗಿಂತಲೂ ಹೆಚ್ಚು ಸುಖ ಸಿಕ್ಕಿದ್ದರೆ ಈ ಬಸ್ ರಾಷ್ಟ್ರೀಕರಣಕ್ಕೆ ಅವರು ಬೆಂಬಲ ಕೊಡುತ್ತಿದ್ದರು. ಆದರೆ ಈವೊತ್ತಿನ ದಿವಸ ಬಸ್‌ನಲ್ಲಿ ಪ್ರಯಾಣ ಮಾಡುವಂಥ ಪ್ರತಿಯೊಬ್ಬ ಮನುಷ್ಯನನ್ನು ಕೇಳಿದರೂ ಕೂಡ ನಾವು ತೊಂದರೆಗೀಡಾಗಿದ್ದೇವೆ ಎಂದು ಹೇಳುತ್ತಾರೆಯೇ ಹೊರತು ನಾವು ಸುಖವಾಗಿದ್ದೇವೆ ಎನ್ನುವುದನ್ನು ಯಾರೂ ಹೇಳುವುದಿಲ್ಲ. ಈಗ ಬಂದಿರುವಂಥ ಅನುಭವದ ಮೇಲೆ ನಾವು ಮುಂದಿನ ಕಾರ್ಯವನ್ನು ರೂಪಿಸಿಕೊಳ್ಳಬೇಕಾಗಿದೆ. ಅದು ಏನೆಂದರೆ ಈ ನ್ಯಾಷನಲೈಸೇಷನ್ನು ಬಹಳಮಟ್ಟಿಗೆ ಕಡಿಮೆ ಮಾಡಬೇಕಾಗಿದೆ.

[MR. DEPUTY SPEAKER in the Chair]

ಎಲ್ಲವನ್ನೂ ನ್ಯಾಷನಲೈಸೇಷನ್ ಮಾಡಬೇಕಾದ ಆವಶ್ಯಕತೆ ಇಲ್ಲ. ಆದುದರಿಂದ ಪ್ರೈವೇಟ್ ಎಂಟರ್‌ಪ್ರೈಸ್‌ನವರು ಚೆನ್ನಾಗಿ ಮಾಡಬಹುದಾದವುಗಳನ್ನು ಅವರಿಗೇ ಬಿಡಬೇಕಾದ್ದು ಸೂಕ್ತ ಎಂದು ಸೂಚಿಸುತ್ತೇನೆ.

ನಮ್ಮ ದೇಶದಲ್ಲಿ ಆಹಾರ ಪ್ರಗತಿ ಬಹಳ ಹಿಂದುಳಿದಿದೆ. ಚೆನ್ನಾಗಿ ವ್ಯವಸಾಯ ಮಾಡುವಂಥ ಪ್ರಗತಿಪರ ವ್ಯವಸಾಯಗಾರರಲ್ಲಿ ಇರುವಂಥ ಭೂಮಿಯನ್ನು ತುಂಡ ತುಂಡು ಮಾಡಿ ಹಂಚಿ ಈ ನಮ್ಮ ವ್ಯವಸಾಯವನ್ನು ಅಧೋಗತಿಗೆ ತರುವಂಥ ಕೆಲಸ ಸರಕಾರ ಮಾಡುತ್ತಿದೆ. ಒಬ್ಬನಿಗೆ ಇಂತಿಷ್ಟೇ ಎಕರೆ ಇರಬೇಕೆಂದು ಒಂದು ಸೀಲಿಂಗ್ ಲಿಮಿಟ್ ಮಾಡುತ್ತಿದ್ದಾರೆ. ಕೇರಳ ಮತ್ತು ಬೇರೆ ಕಡೆಗಳಲ್ಲ ಸೀಲಿಂಗ್ ಲಿಮಿಟ್ಟನ್ನು ಪುನಃ ಕಡಿಮೆ ಮಾಡಿದ್ದಾರೆ. ಈ ಮನೆಯಲ್ಲೂ ಕೂಡ ಸೀಲಿಂಗ್ ಲಿಮಿಟ್ಟನ್ನು ಕಡಿಮೆ ಮಾಡಬೇಕು ಎಂದು ಕೆಲವರು ಹೇಳಿದ್ದಾರೆ. ಹಾಗೆ ಮಾಡುತ್ತಾ ಹೋದರೆ ದೇಶದಲ್ಲಿ ಸ್ಟೇಬಿಲಿಟಿ (stability) ಉಳಿಯುತ್ತದೆಯೇ ? ಈ ರೀತಿ ಆದರೆ ರೈತರು ತಮ್ಮ ತಮ್ಮ ಕೆಲಸ ಮಾಡಿಕೊಂಡು ದೇಶದ ಆರ್ಥಿಕ ಸ್ಥಿತಿಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕಾಗುತ್ತದೆಯೇ? ಮತ್ತು ದೇಶದ ಆಹಾರ ಸಮಸ್ಯೆ ಪರಿಹಾರವಾಗುವಷ್ಟು ರೈತರು ಹೆಚ್ಚು ಬೆಳೆಸುತ್ತಾರೆಯೇ ಎನ್ನುವುದನ್ನು ನಾವು ತಿಳಿಯಬೇಕಾಗಿದೆ. ನಮ್ಮ ದೇಶದಲ್ಲಿ ಅತಿ ಮುಖ್ಯವಾಗಿ ಬೇಕಾದದ್ದು ಭೂಮಿಯ ಹಂಚಿಕೆಯಲ್ಲಿ ಟೆನೆಂಟ್ಸ್‌ಗಳಿಗೆ ಅಂದರೆ ಒಕ್ಕಲುಗಳಿಗೆ ಮೊದಲು ಭದ್ರತೆ ಕೊಡಬೇಕು. ಅಂದರೆ ತಾನು ಸಾಗು ಮಾಡುವ ಭೂಮಿ ಸ್ವಂತ ಭೂಮಿ ಅನ್ನುವ ಹಾಗೆ ಭದ್ರತೆ ಇದ್ದರೆ ಅದರಿಂದ ಎಷ್ಟೋ ಭೂಸುಧಾರಣೆಯಾದಂತೆ ಆಗುತ್ತೆ. ಸಾಗುವಳಿ ಮಾಡುವ ಹಕ್ಕನು ಇನ್ನೊಬ್ಬನಿಗೆ ಮಾರಲು, ಅಥವಾ ವಂಶಪಾರಂಪರ್ಯವಾಗಿ ಮಾಡಿಕೊಂಡು ಹೋಗುವ ಹಕ್ಕು ಟೆನೆಂಟಿಗೆ ಇರಬೇಕು. ಈ ರೀತಿ ಮಾಡಿದರೆ ಮಾತ್ರ ವ್ಯವಸಾಯ ರಂಗದಲ್ಲಿ ಪ್ರಗತಿಯನ್ನು ಸಾಧಿಸಬಹುದು. ಈ ದಿವಸ ಚಿಕ್ಕ ಚಿಕ್ಕ ಹಿಡುವಳಿದಾರರು ತಮ್ಮ ತಮ್ಮ ಭೂಮಿಯನ್ನು ಬಿಟ್ಟು ಕೊಟ್ಟು ತಮ್ಮ ಹಕ್ಕನ್ನು ಕಳೆದುಕೊಂಡು ಭೂ ಮಾಲೀಕನು ನಿರ್ಗತಿಕನಾಗುವ ಪರಿಸ್ಥಿತಿ ಬಂದಿದೆ. ಈ ಬಗ್ಗೆ ಕೆಲವು ಜಿಲ್ಲೆಗಳಲ್ಲಿ ಚಿಕ್ಕ ಚಿಕ್ಕ ರೈತರು ಒಂದು ದೊಡ್ಡ ಚಳುವಳಿಯನ್ನೇ ಹೂಡಿದ್ದು ತಮ್ಮ ಗಮನಕ್ಕೂ ಬಂದಿದೆ. ಮೈಸೂರು ಸಂಸ್ಥಾನದಲ್ಲಿ ಆಹಾರೋತ್ಪತ್ತಿ ಸುಧಾರಣೆ ಆಗುವ ಪರಿಸ್ಥಿತಿ ಬರುತ್ತಿರುವಾಗ ಭೂಸುಧಾರಣೆ ಕಾನೂನು ಅಪ್ರಗತಿದಾರಿ ಹಿಡಿಯುವ ರೀತಿ ಯೋಚನೆ ಮಾಡಿ ಕಾನೂನು ಮಾಡಬೇಕು. ಇಲ್ಲವಾದರೆ ಸಣ್ಣ ಪುಟ್ಟ ಹಿಡುವಳಿದಾರರು ಏನು ಇದ್ದಾರೋ ಅವರು ಇದರಿಂದಾಗಿ ಹೀನಸ್ಥಿತಿಗೆ ಬರುತ್ತಾರೆ. ಆದುದರಿಂದ ಸರ್ಕಾರದವರು ಅವರ ಯೋಗಕ್ಷೇಮವನ್ನೂ ವಿಚಾರಣೆ ಮಾಡಿ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸೂಚಿಸಬಯಸುತ್ತೇನೆ.

ಇನ್ನು ನಮ್ಮ ದೇಶದ ಪಕ್ಕದ ಭಾಗವಾದ ಕಾಸರಗೋಡಿನವರು ಈಗಾಗಲೆ ಡೆಲ್ಲಿಗೆ ನಿಯೋಗ ಹೋಗಿದ್ದಾರೆ. ಅವರ ಕಷ್ಟವನ್ನು ಪ್ರಧಾನಮಂತ್ರಿಗಳ ಗಮನಕ್ಕೂ ತಂದಿದ್ದಾರೆ. ಅದರಿಂದ ಮಹಾಜನ್ ಕಮೀಷನ್ ರಿಪೋರ್ಟನ್ನು ಸಂಪೂರ್ಣವಾಗಿ ಕಾರ್ಯಗತ ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಕಾಸರಗೋಡಿನ ಜನತೆಯನ್ನು ಕೈಬಿಡವುದಿಲ್ಲ ಎನ್ನುವ ಭರವಸೆಯನ್ನು ಮುಖ್ಯ ಮಂತ್ರಿಗಳು ಕೊಡಬೇಕು ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈ ವ್ಯವಸಾಯ ಕಂದಾಯದ ವಿಚಾರದಲ್ಲಿ ಹೇಳುವುದಾದರೆ ನಮ್ಮ ಕೊಡಗು ಒಂದರಲ್ಲೇ ಒಂದು ಕೋಟಿ ರೂಪಾಯಿಗೂ ಮಿಕ್ಕಿ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸನ್ನು ಕೊಡುತ್ತಿದ್ದೇವೆ. ಇಷ್ಟು ಸಣ್ಣ ಜಿಲ್ಲೆ ಇಷ್ಟೊಂದು ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸ್ ಕೊಡುವುದು, ಬೇರೆ ಯಾವ ಜಿಲ್ಲೆಯೂ ಈ ರೀತಿ ಕೊಡುತ್ತಾ ಇಲ್ಲ. ಏತಕ್ಕೆಂದರೆ ಅಲ್ಲಿನ ಜನ ತುಂಬಾ ಆಧುನಿಕ ಪ್ರಯೋಗಗಳನ್ನು ಪ್ರಯೋಗಿಸಿ ಉತ್ಪತ್ತಿಯನ್ನು ಹೆಚ್ಚು ಮಾಡಿ ತೆರಿಗೆಗಳನ್ನು ಕೂಡ ದೊಡ್ಡ ರೂಪದಲ್ಲಿ ಕೊಡುತ್ತಿದ್ದಾರೆ. ಆದರೆ ಅಲ್ಲಿನ ವ್ಯವಸಾಯಗಾರರಿಗೆ ಏನು ಪ್ರಯೋಜನ ಮಾಡಿಕೊಡುತ್ತಿದ್ದೇವೆ ಎನ್ನುವುದನ್ನು ಸರಕಾರ ವಿಚಾರಿಸಬೇಕು. ಕೊಡಗು ಬೆಟ್ಟಗುಡ್ಡಗಳ ಹಳ್ಳಿಗಳಿಂದ ತುಂಬಿದಂಥ ಒಂದು ಪ್ರದೇಶ. ಅಲ್ಲಿಗೆ ರಸ್ತೆ ಮತ್ತು ಸೇತುವೆಗಳು ಆಗಬೇಕಾದಷ್ಟು ಆಗದೆ ಹೋದರೆ, ಅಲ್ಲಿಯ ಜನರ ವ್ಯವಸಾಯ ಸಾಗಾಣಿಕೆಗೆ ಉತ್ತೇಜನ ಕೊಡದೆ ಹೋದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಅವರು ಬೆಳೆದಂಥ ಸಾಮಾನುಗಳನ್ನು ಮಾರ್ಕೆಟ್ಟುಗಳಿಗೆ ತರುವುದಕ್ಕೆ ರಸ್ತೆಗಳು ಸೇತುವೆಗಳು ಇಲ್ಲದೆ ತುಂಬಾ ತೊಂದರೆಯಾಗಿದೆ. ನಮ್ಮ ಉತ್ತರ ಕೊಡಗಿನಲ್ಲಿ ಗರುವಾಲೆ, ಸುರ್ಲಬ್ಬಿ ಅನ್ನುವ ಪ್ರದೇಶದಲ್ಲಿ ಸರಿಯಾದ ರಸ್ತೆಗಳು ಇಲ್ಲದೆ ಬೆಳೆದಂಥ ಸಾಮಾನುಗಳನ್ನು, ಅಂದರೆ ತರಕಾರಿ ಮುಂತಾದವುಗಳನ್ನು ಮಳೆಗಾಲದಲ್ಲಿ ಸಾಗಿಸುವುದಕ್ಕೆ ಕಷ್ಟವಾಗಿ ತಲೆಮೇಲೆ ಹೊತ್ತುಕೊಂಡು ಬಂದು ಸಂತೆಯಲ್ಲಿ ತಂದು ಮಾರುವಂಥ ಸ್ಥಿತಿ ಇದೆ. ಅಂಥ ಕಡೆ ರಸ್ತೆ ಸೇತುವೆ ಮಾಡಬೇಕಾಗಿದೆ

(ಶ್ರೀ ಜಿ. ಎಂ. ಮಂಜುನಾಥಯ್ಯ)

ಅದು ಅತಿ ಜರೂರಾಗಿ ಆಗಬೇಕಾಗಿದೆ. ಇನ್ನೊಂದು ಕಡೆ ನೆಲ್ಲಿಹುದುಕೇರಿ ಎಂಬಲ್ಲಿ ಒಂದು ಫುಟ್ ಬ್ರಿಡ್ಜ್ (foot bridge) ಆಗಬೇಕೆಂದು ಹಲವು ವರ್ಷಗಳಿಂದ ಕೇಳುತ್ತಲೇ ಬರುತ್ತಿದ್ದೇವೆ. ಅದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೂ, ಡಿಪಾರ್ಟ್‌ಮೆಂಟಿಗೂ ಕಾಗದ ಬರೆದಿದ್ದೇವೆ. ಅವರು ಆ ಕೆಲಸವನ್ನು ಪ್ರಾರಂಭ ಮಾಡುವಂತೆ ಕಾಣುವುದಿಲ್ಲ. ಇಂತಹ ಚಿಕ್ಕ ಕೆಲಸಗಳಿಗೂ ಗಮನ ಕೊಡದೆ ಟ್ಯಾಕ್ಸ್ ಮಾತ್ರ ಎಷ್ಟರಮಟ್ಟಿಗೆ ಹಾಕುತ್ತಾರೆ ಎನ್ನುವುದು ವ್ಯಸನಕರ.

ಕೊಡಗಿನ ಫಾರೆಸ್ಟ್ ಉತ್ಪತ್ತಿಯಿಂದ ಸೇಲ್ಸ್‌ಟ್ಯಾಕ್ಸ್‌ನಿಂದ ಟ್ಯಾಕ್ಸ್‌ಗಳು ಹೆಚ್ಚಾಗಿ ಬರುತ್ತಿವೆ. ನನ್ನ ಹತ್ತಿರ ಡಿಸ್ಟ್ರಿಕ್ಟ್‌ವಾರ್ ಲೆಕ್ಕ ಇಲ್ಲ. ಒಟ್ಟಿನಲ್ಲಿ ಮೂರು ಕೋಟಿ ರೂಪಾಯಿಗೆ ಕಡಿಮೆ ಇಲ್ಲದೆ ಟ್ಯಾಕ್ಸ್ ಉತ್ಪತ್ತಿ ಇರಬಹುದು ಎಂದು ಊಹಿಸಬಹುದು. ಆದರೆ ಅಲ್ಲಿಯ ಅಭಿವೃದ್ಧಿಗೆ ಒಂದು ಕೋಟಿ ರೂಪಾಯಿ ಕೂಡ ಖರ್ಚು ಮಾಡದೇ ಹೋದರೆ ದೇಶದ ಜನ ಎಷ್ಟುಮಟ್ಟಿಗೆ ಅಸಮಾಧಾನಪಟ್ಟುಕೊಳ್ಳುತ್ತಾರೆ ಎನ್ನುವುದನ್ನು ಸರಕಾರ ಯೋಚಿಸಬೇಕಾಗಿದೆ. ದಯವಿಟ್ಟು ಈ ಸಣ್ಣ ಜಿಲ್ಲೆಯವರು ಇನ್ನಷ್ಟು ಪ್ರಗತಿ ಸಾಧಿಸಿ ಮೈಸೂರು ದೇಶದ ಬೊಕ್ಕಸಕ್ಕೆ ಕಾಂಟ್ರಿಬ್ಯೂಟ್ ಮಾಡುವ ಹಾಗೆ ಅವರಿಗೆ ಉತ್ತೇಜನ ಕೊಡಬೇಕು. ಅವರಿಗೆ ರಸ್ತೆಗಳು, ಸೇತುವೆಗಳು ಮುಂತಾದ ಸೌಕರ್ಯಗಳನ್ನು ಆದಷ್ಟು ಜಾಗ್ರತೆ ಒದಗಿಸಬೇಕೆಂದು ನಾನು ಹೇಳುತ್ತೇನೆ.

9–00 A.M.

ತೆರಿಗೆಯ ವಿಚಾರದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕುವುದರಿಂದ ನಮ್ಮ ಕಾಫಿ ತೋಟದ ಮೇಲೆ ಹೆಚ್ಚಿಗೆ ಭಾರ ಬೀಳುತ್ತದೆ. ಕೊಡಗು ಬೇರೆ ಇದ್ದಾಗಲೇ ಅಲ್ಲಿ ಕಾಫಿ ತೋಟದ ಮೇಲೆ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬಂತು. ಅಲ್ಲಿನ ಜನಗಳಿಗೆ ಟ್ಯಾಕ್ಸ್ ಕೊಡುವ ಅಭ್ಯಾಸ ಮೊದಲಿನಿಂದಲೂ ಇತ್ತು. ಆಗ ಶೇಕಡ 25ರಷ್ಟು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಇತ್ತು. ಅದು ಈಗ ಮೈಸೂರು ರಾಜ್ಯದಲ್ಲಿ ಶೇಕಡಾ 40ಕ್ಕೆ ಏರಿತು. ದೇಶದಲ್ಲಿ ಎಮರ್ಜೆನ್ಸಿ ಬಂದಾಗ ಸೂಪರ್ ಟ್ಯಾಕ್ಸ್ ಬಂದು ಶೇಕಡಾ 60ಕ್ಕೆ ಏರಿತು. ಹೀಗೆ ಇಷ್ಟೊಂದು ತೆರಿಗೆಯನ್ನು ನಾವು ನಮಗೆ ಬರುವ ನಿವ್ವಳ ಉತ್ಪತ್ತಿಯಲ್ಲಿ ಕೊಡಬೇಕಾಗುತ್ತದೆ. ಇದು ಕಾಫಿ ಬೆಳೆಗಾರರಿಗೆ ತುಂಬಾ ಆತಂಕಕಾರಿಯಾಗಿದೆ. ಆದ್ದರಿಂದ ಸೂಪರ್ ಟ್ಯಾಕ್ಸನ್ನು ಆದಷ್ಟು ಜಾಗ್ರತೆ ವಜಾ ಮಾಡಬೇಕೆಂದು ನಾನು ಮಾನ್ಯ ಹಣಕಾಸಿನ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದಕ್ಕೆ ಮಾನ್ಯ ಹಣಕಾಸಿನ ಸಚಿವರು ಈ ಚರ್ಚೆಗೆ ಉತ್ತರ ಕೊಡುವ ಕಾಲದಲ್ಲಿ ಜವಾಬು ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸಿನಿಂದ ಸೂಪರ್ ಟ್ಯಾಕ್ಸನ್ನು ವಜಾ ಮಾಡಬೇಕೆಂದು ನಾನು ಹೇಳುತ್ತೇನೆ. ಈಗ ಸ್ಪ್ರಿಂಕ್ಲರ್ ಇರಿಗೇಷನ್ (sprinkler irrigation) ಕಾಫಿ ತೋಟದಲ್ಲಿಯೂ ಶುರುವಾಗುತ್ತಿದೆ. ಈಗ ಕಾಫಿಯ ಫಸಲು ಮಳೆಯನ್ನು ಹೊಂದಿಕೊಂಡು ಅದರ ಆಧಾರದ ಮೇಲೆ ಕಾಫಿಯನ್ನು ಬೆಳೆಯಲಾಗುತ್ತಿದೆ. ಮಳೆಯು ಹದವರಿತು ಕಾಲಕ್ಕೆ ಸರಿಯಾಗಿ ಬಾರದೇ ಹೋದರೆ ಅದರಿಂದ ಕಾಫಿ ಬೆಳೆಗಾರರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಮಳೆಯನ್ನು ಅವಲಂಬಿಸದೆ ಕಾಫಿ ಬೆಳೆಯಲ್ಲಿ ಸ್ಪ್ರಿಂಕ್ಲರ್ ಇರಿಗೇಷನ್ನಿನಿಂದ ಹೆಚ್ಚು ಫಸಲು ತೆಗೆಯುವ ಸಾಧ್ಯತೆ ಇದೆ. ಸ್ಪ್ರಿಂಕ್ಲರ್ ಇರಿಗೇಷನ್ನಿನಿಂದ ಒಂದು ಎಕರೆಗೆ 12 ಹಂಡ್ರಡ್‌ವೇಟ್ ಕಾಫಿ ಉತ್ಪತ್ತಿ ಬಂದಿದೆ. ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಲ್ಲಿ ಕಾಫಿ ಬೆಳೆಗಾರರು ಹೆಚ್ಚು ಜನರು ಸ್ಪ್ರಿಂಕ್ಲರ್ ಇರಿಗೇಷನ್ ಮಾಡುತ್ತಿದ್ದಾರೆ. ಆದ್ದರಿಂದ ಸ್ಪ್ರಿಂಕ್ಲರ್ ಇರಿಗೇಷನ್‌ಗೆ ಮೆಷಿನರಿಗಳಿಗೂ ಸಹ ಸ್ಪ್ರೇ ಮಾಡತಕ್ಕ ಮೆಷಿನರಿಗಳಿಗೆ ಕೊಡುತ್ತಿರುವ ಡಿಪ್ರಿಸಿಯೇಷನ್ ಅಲೋಯನ್ಸ್ ಕೊಡಬೇಕು ಈ ರೀತಿ ಸ್ಪ್ರಿಂಕ್ಲರ್ ಇರಿಗೇಷನ್‌ಗೆ ಹೆಚ್ಚಾಗುವಂತೆ ಸರ್ಕಾರದವರು ಡಿಪ್ರಿಷಿಯೇಷನ್ ಅಲೋಯನ್ಸ್‌ನ ಮೂಲಕ ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ. ಸ್ಪ್ರಿಂಕ್ಲರ್ ಇರಿಗೇಷನ್, ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ವಿಚಾರಗಳು ಇತ್ಯಾದಿಗಳ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡುತ್ತೇವೆ ಎಂದು ಹೇಳುವುದರ ಬದಲು ಸರ್ಕಾರದವರೇ ಮುಂದೆ ಹೋಗಿ ಈ ಸ್ಪ್ರಿಂಕ್ಲರ್ ಇರಿಗೇಷನ್ ಬಗ್ಗೆ ಕಾಫಿ ಬೆಳೆಗಾರರಿಗೆ ಸೌಲಭ್ಯವನ್ನು ಒದಗಿಸಿಕೊಡುವ ಬಗ್ಗೆ ಒಂದು ಅಡ್ಮಿನಿಸ್ಟ್ರೇಟೀವ್ ಆರ್ಡರನ್ನು ಮಾಡಬೇಕೆಂದು ನಾನು ಮಾನ್ಯ ಹಣಕಾಸಿನ ಮಂತ್ರಿಗಳಲ್ಲಿ ವಿನಂತಿ ಮಾಡಕೊಳ್ಳುತ್ತೇನೆ.

ಇತ್ತೀಚಿಗೆ ಹಲವಾರು ತರುಣ ಇಂಜಿನಿಯರುಗಳು ಪರೀಕ್ಷೆಯಲ್ಲಿ ಪಾಸಾಗಿ ಡಿಗ್ರಿಗಳನ್ನು ಪಡೆದುಕೊಂಡು ಕೆಲಸವಿಲ್ಲದೆ ತೊಂದರೆಗೆ ಈಡಾಗಿದ್ದಾರೆ. ಅಂಥವರು ಸ್ವಂತವಾಗಿ ಯಾವುದಾದರೂ ಕೈಗಾರಿಕೆಯನ್ನು ಸ್ಟಾರ್ಟ್ ಮಾಡುವುದಕ್ಕೆ ಸರ್ಕಾರದವರು ಬಂಡವಾಳವನ್ನು ಕೊಟ್ಟು

ಅವರಿಗೆ ಸ್ವಂತವಾಗಿ ಉದ್ಯೋಗ ದೊರಕಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಇದರ ಜೊತೆಗೆ ಆ ಇಂಜಿನಿಯರುಗಳಿಗೆ ಮೊದಲು ಸ್ವಾವಲಂಬನೆಗೆ ಸಹಾಯವಾಗುವಂತಹ ಇಂಡಸ್ಟ್ರಿಯಲ್ ಟ್ರೈನಿಂಗ್ ಕೊಡಬೇಕು. ಅವರು ಸ್ವಂತವಾಗಿ ಫ್ಯಾಕ್ಟರಿಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಅವರಿಗೆ ಉತ್ತೇಜನ ಕೊಟ್ಟು ಅವರಿಗೆ ಬಂಡವಾಳವನ್ನು ಕೊಟ್ಟು ಅವರಿಗೆ ಸಹಾಯ ಮಾಡಿ ಈ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನನಗೆ ಕೊಟ್ಟಿರುವ ಸಮಯ ತೀರಿದ್ದರಿಂದ ಇನ್ನು ಬಾಕಿ ವಿಚಾರಗಳನ್ನು ಈ ಸಭೆಯ ಮುಂದೆ ಡಿಮ್ಯಾಂಡ್‌ಗಳು ಬಂದಾಗ ಮಾತನಾಡುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಅರ್ಥ ಮಂತ್ರಿಗಳು ಈ ಸಭೆಯಮುಂದೆ ಮಂಡಿಸಿರತಕ್ಕ ಬಡ್ಜೆಟ್ಟನ್ನು ಸ್ವಾಗತ ಮಾಡುತ್ತಾ ನಾನು ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಮತ್ತು ಈ ಆಯವ್ಯಯಪಟ್ಟಿ ಇವೆರಡನ್ನೂ ನೋಡಿದರೆ ನಮ್ಮ ಸರ್ಕಾರದವರು ರಿಸೋರ್ಸಸ್ ಬಗ್ಗೆ ಯಾವ ಪ್ರಕಾರ ನಿರ್ಪಾಟನ್ನು ಮಾಡಿದೆ ಎಂಬುದನ್ನು ವಿಚಾರ ಮಾಡಿನೋಡಿದರೆ ನನಗೆ ಸ್ವಲ್ಪ ವ್ಯಥೆಯಾಗುತ್ತದೆ. ಯಾವುದೇ ಸರ್ಕಾರವಾಗಲೀ ತೆರಿಗೆಯನ್ನು ಹಾಕದೆ ಸರ್ಕಾರವನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ತೆರಿಗೆಯನ್ನು ಹಾಕಿ ಹಣವನ್ನು ಒದಗಿಸಿಕೊಳ್ಳಬೇಕಾಗುತ್ತದೆ. ದೇಶದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಾದರೆ ಒಂದೇ ವರ್ಷದಲ್ಲಿ ಎಲ್ಲಾ ಕಾರ್ಯಗಳನ್ನೂ ಮಾಡುವುದಕ್ಕಾಗುವುದಿಲ್ಲ. ಇದು ಎಲ್ಲರೂ ಒಪ್ಪತಕ್ಕ ಮಾತು. ಇವೊತ್ತು ನಾವು ನಮ್ಮ ಬಡ್ಜೆಟ್ಟನ್ನು ನೋಡಿದರೆ ನಮ್ಮ ಸರ್ಕಾರದವರು ಒಂದು ಕೆಟ್ಟ ಕಾನೂನು ಮಾಡಿ ನಮ್ಮ ರಿಸೋರ್ಸನ್ನು ಬೆಳೆಸಿದ್ದಾರೆ. ಇದನ್ನು ನೋಡಿದರೆ ಸ್ವಲ್ಪ ವ್ಯಥೆಯಾಗುತ್ತದೆ. ನಮ್ಮ ದೇಶ ಒಂದು ಧರ್ಮ ಪ್ರಧಾನವಾದ ದೇಶ ಎಂದು ಒಂದು ವೈಶಿಷ್ಟ್ಯ ಇದೆ. ಇವೊತ್ತು ನಮ್ಮ ದೇಶದಲ್ಲಿ ಜನರು ಊಟ ಮಾಡಿ ಅವರಿಗೆ ಹಾಕಿಕೊಳ್ಳುವುದಕ್ಕೆ ಬಟ್ಟೆ ಸಿಕ್ಕಿದರೆ ಸಾಕು, ನಾವು ಅಷ್ಟಕ್ಕೇ ಸಂತೋಷಪಟ್ಟುಕೊಳ್ಳುತ್ತೇವೆ. ಅದೇ ಒಂದು ಸುಖಮಯವಾದ ಜೀವನ ಎಂದು ಹೇಳುವುದಕ್ಕಾಗುವುದಿಲ್ಲ. ಮನುಷ್ಯನಿಗೆ ಜೀವನದಲ್ಲಿ ಒಂದು ನೈತಿಕ ಮಟ್ಟವೂ ಬೇಕಾಗುತ್ತದೆ. ಆ ಮಟ್ಟದಲ್ಲಿ ವಿಚಾರ ಮಾಡಿದರೆ, ಸರ್ಕಾರದ ಧೋರಣೆಯನ್ನು ಸಮಾಜದ ಧೋರಣೆಯನ್ನು ನೋಡಿದರೆ ನಾವು ಒಂದು ಲಗ್ಝುರಿ ಪದ್ಧತಿಯ ಪ್ರಕಾರ ನಾವು ನಮ್ಮ ಸಮಾಜವನ್ನು ಕಟ್ಟಬೇಕು ಎಂದು ಹೊರಟಿದ್ದೇವೆ ಎನ್ನುವ ಹಾಗೆ ಕಾಣುತ್ತದೆ. ನಾವು ಯಾವ ಪ್ರಕಾರ ಕಾನೂನು ಮಾಡುತ್ತಿದ್ದೇವೆ, ಯಾವ ಪ್ರಕಾರ ಜನರಿಂದ ರೊಕ್ಕವನ್ನು ನಾವು ವಸೂಲು ಮಾಡುತ್ತಿದ್ದೇವೆ ಎನ್ನತಕ್ಕ ಎರಡು ಮಾತುಗಳನ್ನು ನೋಡಿದರೆ ನಮಗೆ ಸ್ವಲ್ಪ ವ್ಯಥೆಯಾಗುತ್ತದೆ. ಗಾಂಧಿ ಶತಾಬ್ದಿಯ ವರ್ಷದಲ್ಲಿ ನಾವು 2—3 ಕೆಲಸಗಳನ್ನು ಮಾಡಿದ್ದೇವೆ. ಅವು ಮಹಾತ್ಮ ಗಾಂಧಿಜಿಯವರು ಹೇಳಿದಂತಹ ಮಾತುಗಳಿಗೆ ನೈತಿಕವಾಗಿ ವಿರೋಧವಾಗುತ್ತವೆ. ಸ್ವಲ್ಪ ಹಣದ ಸಲುವಾಗಿ ಪ್ರೊಹಿಬಿಷನ್ ಕಾನೂನನ್ನು ಸಡಿಲ ಮಾಡಿ ಅದರ ಮುಖಾಂತರ ನಾವು ರೊಕ್ಕವನ್ನು ತೆಗೆದುಕೊಳ್ಳುತ್ತಿದ್ದೇವೆ. ಇನ್ನೊಂದು ಲಾಟರಿಯನ್ನು ಮಾಡಿ ಅದರ ಮುಖಾಂತರ ಸರ್ಕಾರಕ್ಕೆ ಹಣ ಬರುವ ಹಾಗೆ ಮಾಡಿಕೊಂಡಿದ್ದೇವೆ. ಈ ಎರಡು ಬಾಬುಗಳಿಂದಲೂ ಸೇರಿ ಸುಮಾರು 10 ಕೋಟಿ ರೂಪಾಯಿಗಳ ಆದಾಯ ನಮ್ಮ ಸರ್ಕಾರಕ್ಕೆ ಬರುತ್ತದೆ ಎಂದು ಕಾಣುತ್ತದೆ. ಈ ಹಣವನ್ನು ಬೇರೆ ರೀತಿಯಿಂದ ತೆರಿಗೆಯನ್ನು ಹಾಕಿ ಅದನ್ನು ವಸೂಲು ಮಾಡಬಹುದು. ಅದಕ್ಕೆ ನಮ್ಮದೇನೂ ಅಬ್ಜಕ್ಷನ್ ಇಲ್ಲ. ಆದರೆ ಸರ್ಕಾರದವರು ಈಗೇನು ಕಾರ್ಯವನ್ನು ಕೈಗೊಂಡಿದ್ದಾರೆ ಅದು ಸರಿಯಲ್ಲ. ಏತಕ್ಕೆಂದರೆ ಮಹಾತ್ಮ ಗಾಂಧೀಜಿಯವರೇ ಹೇಳಿದ್ದಾರೆ ಸಾಧ್ಯವಸ್ತು ಎಷ್ಟು ಪವಿತ್ರವಾಗಿರುತ್ತದೆಯೋ ಸಾಧನೆಯೂ ಅಷ್ಟೂ ಪವಿತ್ರ ಇರಬೇಕು ಎಂದು. ಅನೀತಿಯುತವಾದದ್ದರಲ್ಲಿ ಒಂದುವೇಳೆ ಸತ್ಯವಿದ್ದರೂ ಕೂಡ ಅದು ಸರಿಯಾಗಿರುವುದಿಲ್ಲ ಎಂದು ಮಹಾತ್ಮ ಗಾಂಧಿಯವರೇ ಹೇಳಿದ್ದಾರೆ. ನಮ್ಮ ದೇಶದಲ್ಲಿ ಎಲ್ಲರಿಗೂ ಬರಿ ಅನ್ನ ಸಿಕ್ಕಿದರೆ ಸಾಕು ಎಂದು ಸಮಾಧಾನ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅನ್ನದ ಜೊತೆಗೆ ಮನುಷ್ಯ ನೈತಿಕ ಮಟ್ಟವನ್ನೂ ಸರಿಯಾಗಿ ಬೆಳೆಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಸರ್ಕಾರದವರು ಈ ಪ್ರಕಾರ ಕಾನೂನು ಮಾಡಿ ಪಾನನಿರೋಧವನ್ನು ಸಡಿಲಗೊಳಿಸಿದರು, ಲಾಟರಿ ಯೋಜನೆಯನ್ನು ಜಾರಿಗೆ ತಂದರು ಇದರಿಂದ ಇವತ್ತು ಎಲ್ಲವೂ ಲಾಟರಿ ಸಿಸ್ಟಮ್ ಆಗುತ್ತಿದೆ. ಇವತ್ತು ಹಳ್ಳಿಗಳಲ್ಲಿರುವ ಪ್ರತಿಯೊಂದು ಮನೆಯಲ್ಲಿಯೂ ಕೂಡ 10–15 ಜನ ಸೇರಿಕೊಂಡು ಗ್ಯಾಂಬ್ಲಿಂಗ್ ನಡೆಸುತ್ತಿದ್ದಾರೆ. ಗ್ಯಾಂಬ್ಲಿಂಗ್ ನಡೆಸುವವರನ್ನು ಕೇಳುವವರೇ ಇಲ್ಲವಾಗಿದೆ. ತಮ್ಮ ಆಯುಷ್ಯವನ್ನೆಲ್ಲಾ ಗ್ಯಾಂಬ್ಲಿಂಗ್ ನಡೆಸುವುದರಲ್ಲಿ ಕಳೆಯುತ್ತಿದ್ದಾರೆ. ಇದೇ ಪರಿಸ್ಥಿತಿ ಮುಂದುವರೆಯುವುದಕ್ಕೆ ಸರ್ಕಾರ ಬಿಟ್ಟರೆ ನಿಜವಾಗಿಯೂ ಈ ರಾಷ್ಟ್ರವನ್ನು ಕಟ್ಟುವುದಕ್ಕಾಗುವುದಿಲ್ಲ. ಇವತ್ತು ಜನರಿಗೆ ಅನ್ನ ಸಿಗುತ್ತಿರುವುದು ಮುಖ್ಯವಾದ ಪ್ರಶ್ನೆಯಲ್ಲ. ಎಲ್ಲ ಜನರು ರಾಷ್ಟ್ರನಿರ್ಮಾಣ ಕೆಲಸದಲ್ಲಿ

(ಶ್ರೀ ಎಸ್. ಭೀಮಣ್ಣ)

ತೊಡಗುವಂತೆ ಮಾಡಬೇಕಾದರೆ ಲಾಟರಿ ನಡೆಸುವುದನ್ನು ನಿಲ್ಲಿಸಬೇಕು. ಅದರಿಂದ ಬರುವ ಆದಾಯವನ್ನು ಬೇರೆ ರೂಪದಲ್ಲಿ ಬೇಕಾದರೆ ಪಡೆದುಕೊಳ್ಳಲಿ. ಆದರೆ ಲಾಟರಿಯನ್ನು ನಿಲ್ಲಿಸಬೇಕು. ಇವತ್ತು ಯಾವುದಾದರೂ ಯೋಜನೆಗಳನ್ನು ಸರ್ಕಾರೀ ಕ್ಷೇತ್ರದಲ್ಲಿಯಾಗಲೀ ಅಥವಾ ಖಾಸಗೀ ಕ್ಷೇತ್ರದಲ್ಲಿಯಾಗಲೀ ಕೈಕೊಳ್ಳುವಾಗ ಅದರಲ್ಲಿ ಹಾಕುವ ಬಂಡವಾಳದಲ್ಲಿ ಕಾಲು ಭಾಗದಷ್ಟು ಹಣ ಕರಪ್ಷನ್‌ಗೆ ಹೋಗುತ್ತಿದೆ. ಇವತ್ತು ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೂಡ ಭ್ರಷ್ಟಾಚಾರ ನಡೆಯುತ್ತಿದೆ. ನೈತಿಕ ಮಟ್ಟ ಕಡಿಮೆಯಾಗುತ್ತಿದೆ. ಇದರಿಂದ ದೇಶ ಕೆಡುತ್ತಿದೆ. ಇದನ್ನು ತಪ್ಪಿಸಲು ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಮೊದಲು ಸರ್ಕಾರದ ಪಾಲಿಸಿ ಬದಲಾವಣೆಯಾಗಬೇಕು. ಸರ್ಕಾರಿ ಮೆಷಿನರಿಯನ್ನು ದುರಸ್ತು ಮಾಡುವುದು ಅಗತ್ಯವಿದೆ. ನಮ್ಮ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಕೂಡ ಆರ್ಥಿಕ ಮಟ್ಟ ಒಂದೇ ರೀತಿಯಲ್ಲಿ ಇರಬೇಕೆಂದು ನಾನು ಅನೇಕ ಸಲ ಹೇಳುತ್ತಿದ್ದೇನೆ. ಸರ್ಕಾರದವರು ಹಣ ಸಂಪಾದನೆ ಮಾಡುವುದರ ಜೊತೆಗೆ ಅದನ್ನು ಸಮವಾಗಿ ಎಲ್ಲ ಜಿಲ್ಲೆಗಳಿಗೂ ಕೂಡ ಹಂಚುವ ವ್ಯವಸ್ಥೆ ಮಾಡಬೇಕು. ಲೋಕಶಾಹಿ ಸಮಾಜದಲ್ಲಿ ಮೊದಲು ಹಣವನ್ನು ಸರಿಯಾಗಿ ಹಂಚುವ ಕೆಲಸವಾಗಬೇಕು. ತಲಾ ಆದಾಯ ಶೇಕಡಾ ಎರಡೂವರೆಯಷ್ಟು ಹೆಚ್ಚಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ತಲಾ ಆದಾಯ ಹೆಚ್ಚಾಗಿರುವುದು ಮುಖ್ಯ ಪ್ರಶ್ನೆಯಲ್ಲ. ಏಕೆಂದರೆ ಒಬ್ಬರಿಗೆ ಹತ್ತು ರೂಪಾಯಿಗಳ ಆದಾಯವಿದ್ದರೆ ಮತ್ತೊಬ್ಬರಿಗೆ 50 ಪೈಸೆ ಆದಾಯ ಕೂಡ ಇವತ್ತು ದಿನಕ್ಕೆ ಸಿಗುತ್ತಿಲ್ಲ. ನಮ್ಮದು ಲೋಕಶಾಹಿ ಸಮಾಜವೆಂದು ಡಿಕ್ಲೇರ್ ಮಾಡಿದ್ದೇವೆ. ಅದನ್ನು ಒಪ್ಪಿಕೊಂಡಿದ್ದೇವೆ. ಆದ್ದರಿಂದ ಬರತಕ್ಕಂಥ ಆದಾಯವನ್ನು ಸಮವಾಗಿ ಹಂಚುವ ವ್ಯವಸ್ಥೆ ಮಾಡಬೇಕು. ನಾನು ಪ್ರತಿಯೊಬ್ಬರಿಗೂ ಹೋಳಿಗೆ ತುಪ್ಪ ಕೊಡಿ ಎಂದು ಕೇಳುತ್ತಿಲ್ಲ. ಬರುವ ಆದಾಯವನ್ನೇ ಸಮವಾಗಿ ಹಂಚಬೇಕು ಎಂದು ಕೇಳುತ್ತಿದ್ದೇನೆ. ಎಲ್ಲ ಜನರು ಸೌಖ್ಯದಿಂದ ಇರುವಂತೆ ನೋಡಿಕೊಳ್ಳಬೇಕು. ಸಮಾನತೆ ಇರಬೇಕು. ಎಲ್ಲರಲ್ಲಿಯೂ ಭಾವೈಕ್ಯತೆ ರಾಷ್ಟ್ರಭಾವನೆ, ಸಂಘಟನೆ ಬೆಳೆಯಬೇಕಾದರೆ ಆದಾಯವನ್ನು ಸಮವಾಗಿ ಹಂಚುವ ವ್ಯವಸ್ಥೆಯಾಗಬೇಕು. ಈ ಮಾತನ್ನು ನಾನು ಅನೇಕ ವರ್ಷಗಳಿಂದ ಹೇಳುತ್ತಿದ್ದೇನೆ. ಬಿದರೆ ಜಿಲ್ಲೆ ಹಿಂದುಳಿದಿದೆ. ಆ ಜಿಲ್ಲೆಗೆ ಹೆಚ್ಚು ಹಣ ಖರ್ಚು ಮಾಡುತ್ತಿಲ್ಲ. ಬಿದರೆ ಜಿಲ್ಲೆಯ ಬಗ್ಗೆ ಸರ್ಕಾರದವರು ಸೈಲಂಟ್ ಆಗಿದ್ದಾರೆ. ಬಿದರೆ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಬಜೆಟ್‌ನಲ್ಲಿ ಏನೂ ಪ್ರಸ್ತಾಪ ಮಾಡಿಲ್ಲ. ಮಹಾರಾಷ್ಟ್ರ ಸರ್ಕಾರದವರು ಆ ರಾಜ್ಯದಲ್ಲಿರುವ ಹಿಂದುಳಿದ ರಾಜ್ಯಗಳನ್ನು ಮುಂದೆ ತರುವ ಸಲುವಾಗಿ ಸ್ಪೆಷಲ್ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಿ ಆ ಬೋರ್ಡ್ ಮೂಲಕ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನವರು ಸಹ ಯಾವ ಯಾವ ರಾಜ್ಯಗಳಲ್ಲಿ ಹಿಂದುಳಿದ ಜಿಲ್ಲೆಗಳು ಇವೆಯೋ ಆ ಜಿಲ್ಲೆಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರದವರು ಹೆಚ್ಚು ಹಣ ಕೊಡಬೇಕೆಂದು ಹೇಳಿದ್ದಾರು. ಇದರ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಏನೇನು ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಬೇಕೆಂದಿದ್ದಾರೆ ಎಂಬ ಮಾತನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಏಕೆಂದರೆ ಬಜೆಟ್‌ನಲ್ಲಿ ಯಾವ ವಿಚಾರವನ್ನು ಸಹ ಪ್ರಸ್ತಾಪ ಮಾಡಿಲ್ಲ. ಬಿದರ್ ಜಿಲ್ಲೆ ಹಿಂದುಳಿದಿದೆ ಎಂಬ ಮಾತನ್ನು ಎಲ್ಲರೂ ಕೂಡ ಒಪ್ಪಿಕೊಂಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಸರಿಯಾದಂಥ ಸ್ಕೂಲ್ ಕಟ್ಟಡಗಳಾಗಲೀ, ರೋಡ್‌ಗಳಾಗಲೀ, ವಿದ್ಯುಚ್ಛಕ್ತಿಯ ಅನುಕೂಲವಾಗಲೀ ಇಲ್ಲ. ಯಾವ ಕ್ಷೇತ್ರದಲ್ಲಿಯೂ ಕೂಡ ಕೆಲಸಗಳು ಆಶಾದಾಯಕವಾಗಿಲ್ಲ ಎನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ, ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಶಿಕ್ಷಣದ ಗುಣ ಪ್ರಮಾಣವನ್ನು ಉತ್ತಮಪಡಿಸುವುದಕ್ಕಾಗಿ ತರಬೇತಿ ಹೊಂದಿದ 500 ಪದವೀಧರ ಶಿಕ್ಷಕರನ್ನು ಮಾದರಿ ಪ್ರಾಥಮಿಕ ಶಾಲೆಗಳ ಮುಖ್ಯೋಪಾಧ್ಯಾಯರಾಗಿ ನೇಮಿಸಲಾಗಿದೆ ಎಂದು ಸರ್ಕಾರದವರು ಹೇಳಿದ್ದರೂ ಕೂಡ, ನಮ್ಮ ಬಿದರ್ ಜಿಲ್ಲೆಯಲ್ಲಿ ಮಾತ್ರ ಯಾವ ಪದವೀಧರ ಉಪಾಧ್ಯಾಯರನ್ನೂ ನಾನು ಪ್ರಾಥಮಿಕ ಶಾಲೆಗಳಲ್ಲಿ ಕಾಣುತ್ತಿಲ್ಲ. ಪದವೀಧರ ಉಪಾಧ್ಯಾಯರುಗಳನ್ನು ಪ್ರಾಥಮಿಕ ಶಾಲೆಗಳಲ್ಲಿ ನೇಮಕ ಮಾಡುವ ಯೋಜನೆ ಹುಬ್ಬಳ್ಳಿ, ಮೈಸೂರು, ಧಾರವಾಡ ಮುಂತಾದ ಕಡೆ ಜಾರಿಗೆ ಬಂದಿದ್ದರೂ ಕೂಡ ನಮ್ಮ ಜಿಲ್ಲೆಯಲ್ಲಿ ಜಾರಿಗೆ ಬಂದಿಲ್ಲ. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ನಮ್ಮ ಜಿಲ್ಲೆ ಹಿಂದುಳಿದಿದೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಪಾಸಾಗುವವರ ಸಂಖ್ಯೆಯ ಪ್ರಮಾಣ ಶೇಕಡ 3 ರಿಂದ 4 ಮಾತ್ರ. ಇದಕ್ಕೆ ಸರ್ಕಾರದ ನೆಗ್ಲಿಜೆನ್ಸಿಯೇ ಕಾರಣ. ಪರಿಸ್ಥಿತಿ ಈ ರೀತಿ ಇರುವಾಗ ಸರ್ಕಾರದವರು ನಾವು ಬಹಳಷ್ಟು ಹಣ ಖರ್ಚುಮಾಡಿ ಸ್ವರಾಜ್ಯ ಕಟ್ಟುತ್ತೇವೆ, ಸುಖೀರಾಜ್ಯ ಸ್ಥಾಪನೆ ಮಾಡುತ್ತೇವೆಂದು ಹೇಳುವುದು ಚೆನ್ನಾಗಿ ಕಾಣುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಹೆಣ್ಣುಮಕ್ಕಳ ಹೈಸ್ಕೂಲ್ ಬಹಳ ಕಡಿಮೆ ಇವೆ. ಶೇಕಡ ಎರಡರಷ್ಟು ಮಾತ್ರ ಹೆಣ್ಣುಮಕ್ಕಳು ಹೈಸ್ಕೂಲ್‌ಗೆ ಹೋಗುತ್ತಿದ್ದಾರೆ. ಹೊಸದಾಗಿ ಹೈಸ್ಕೂಲ್

ಗಳನ್ನು ಪ್ರಾರಂಭ ಮಾಡಿದರೆ ಮೂರು ವರ್ಷದವರೆಗೆ ಗ್ರ್ಯಾಂಟ್-ಇನ್-ಯೇಡ್ ಕೊಡುವುದಿಲ್ಲ ವೆಂದು ಹೇಳಿದ್ದರು. ಕೆಲವು ಹೈಸ್ಕೂಲ್‌ಗಳು ಪ್ರಾರಂಭವಾಗಿ ಮೂರು ವರ್ಷವಾಗಿದ್ದರೂ ಕೂಡ ಸರ್ಕಾರದವರು ಇನ್ನೂ ಗ್ರ್ಯಾಂಟ್ ಕೊಡುತ್ತಿಲ್ಲ. ನಮ್ಮ ಭಾಗ ಹಿಂದುಳಿದಿರುವುದರಿಂದ ಆ ಭಾಗ ದಲ್ಲಿ ಸರ್ಕಾರಿ ಕಾಲೇಜನ್ನು ಸ್ಥಾಪನೆ ಮಾಡಬೇಕು. ನಾನು ನನ್ನ ಜಿಲ್ಲೆಯ ಬಗ್ಗೆ ಮಾತ್ರ ಹೇಳುತ್ತಿಲ್ಲ. ಹಳೆಯ ಮೈಸೂರಿನಲ್ಲಿ, ಮುಂಬೈ ಕರ್ನಾಟಕದಲ್ಲಿ ಎಲ್ಲೆಲ್ಲಿ ಹಿಂದುಳಿದ ಪ್ರದೇಶಗಳು ಇವೆಯೋ ಆ ಭಾಗಗಳನ್ನೆಲ್ಲಾ ಮುಂದೆ ತರುವ ಸಲುವಾಗಿ ಯೋಜನೆಗಳನ್ನು ಕೈಕೊಳ್ಳಬೇಕು. ಈ ವಿಚಾರದಲ್ಲಿ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿಲ್ಲ. ಸರ್ಕಾರದವರೇ ಕಾಲೇಜುಗಳನ್ನು ಸ್ಥಾಪನೆ ಮಾಡದಿದ್ದರೂ ಕೂಡ ಖಾಸಗೀಯವರು ನಡೆಸುತ್ತಿರುವ ಶಾಲಾಕಾಲೇಜುಗಳಿಗೆ ವಿಶೇಷವಾದಂಥ ಗ್ರಾಂಟ್-ಇನ್-ಯೇಡ್ ಕೊಡಬೇಕು. ನಮ್ಮ ಜಿಲ್ಲೆ ಬಾರ್ಡರ್ ಏರಿಯಾದಲ್ಲಿ ಇದೆ. ಇವತ್ತು ಕೂಡ ಗಡಿ ವಿಚಾರದಲ್ಲಿ ಎಷ್ಟೋ ಗಲಾಟೆ ನಡೆಯುತ್ತಿದೆ. 1954ರಲ್ಲಿ ಬಿದರ್ ಜಿಲ್ಲೆ ಮೈಸೂರು ರಾಜ್ಯದೊಂದಿಗೆ ಸೇರುವ ಬಗ್ಗೆ ಪ್ರಚಂಡವಾದ ಆಂಧೋಳನ ನಡೆಸಿದೆವು. ಕರ್ನಾಟಕಕ್ಕೆ ಸೇರಿದ ಮೇಲೆ ನಮ್ಮ ಜಿಲ್ಲೆ ಅಭಿವೃದ್ಧಿಯಾಗುತ್ತದೆ ಎಂದು ನಾವು ತಿಳಿದುಕೊಂಡಿದ್ದೆವು. ಇಷ್ಟು ವರ್ಷ ಗಳು ಕಳೆದ ಮೇಲೆ ಕೂಡ ಯಾವ ಪ್ರಗತಿಯೂ ಕೂಡ ಆಗದಿರುವುದನ್ನು ನೋಡಿದರೆ ನಮಗೆ ಬಹಳ ನಿರಾಸೆಯಾಗುತ್ತದೆ. ಸಾಂಸ್ಕೃತಿಕ ದೃಷ್ಟಿಯಿಂದ ನಾವೆಲ್ಲಾ ಒಂದು ಎಂಬ ಭಾವನೆಯಿಂದ ನಾವು ಕರ್ನಾಟಕಕ್ಕೆ ಬಂದೆವು. ಆದರೆ ನಮ್ಮ ಜಿಲ್ಲೆ ಅಭಿವೃದ್ಧಿಯಾಗಲಿಲ್ಲ. ಮಹಾಜನ್ ವರದಿಯ ಬಗ್ಗೆ ಮೊನ್ನೆ ಇದೇ ಸಭೆಯಲ್ಲಿ ಪ್ರಸ್ತಾಪವಾದಾಗ, ಚರ್ಚೆ ನಡೆದಾಗ ಯಾರೂ ಸಹ ಬಿದರ್ ಜಿಲ್ಲೆಯ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ಮೈಸೂರು ರಾಜ್ಯದಲ್ಲಿ ಬಿದರ್ ಜಿಲ್ಲೆ ಇದೆಯೋ ಅಥವಾ ಇಲ್ಲವೋ ಎನ್ನುವ ಅನುಮಾನ ನನಗೆ ಬರುತ್ತಿದೆ. ಬಿದರ್ ಜಿಲ್ಲೆಯ ಬಗ್ಗೆ ಏನಾದರೂ ಪ್ರಶ್ನೆ ಬಂದರೆ, ಅದನ್ನು ಯಾವ ಪ್ರಕಾರ ತೀರ್ಮಾನ ಮಾಡಬೇಕು ಎಂಬುದನ್ನು ಯಾರೂ ಕೂಡ ಪ್ರಸ್ತಾಪ ಮಾಡಲಿಲ್ಲ. ಕಾಂಪ್ರಮೈಸ್ ಬೇಸಿಸ್ ಮೇಲೆ ಬಿದರ್ ಜಿಲ್ಲೆಯ ಕೆಲವು ಭಾಗಗಳನ್ನು ಮಹಾರಾಷ್ಟ್ರಕ್ಕೆ ಕೊಡಬೇಕೆಂದು ಕೇಂದ್ರ ಸರ್ಕಾರದವರು ಹೇಳುತ್ತಿದ್ದಾರೆ. ಈ ಕಾರಣಕ್ಕಾಗಿ ಆ ಭಾಗದಲ್ಲಿ ಪ್ರಚಂಡವಾದಂಥ ಚಳುವಳಿ ನಡೆಯುತ್ತಿದೆ. ಚಳುವಳಿ ಶಾಂತ ರೀತಿಯಿಂದ ನಡೆ ಯುತ್ತಿದೆ. ಆ ಬಗ್ಗೆ ವೃತ್ತಪತ್ರಿಕೆಗಳಲ್ಲಿ ಏನನ್ನೂ ಕೂಡ ಬರೆಯುತ್ತಿಲ್ಲ. ಬಿದರ್ ಜಿಲ್ಲೆಗೆ ಸುತ್ತ ಮುತ್ತವಿರುವ ಪ್ರದೇಶಗಳಲ್ಲಿ ಅಂದರೆ ಆಂಧ್ರಕ್ಕೆ ಸೇರಿದ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯ ಅನುಕೂಲವಿದೆ. ಆದರೆ ನಮ್ಮ ಭಾಗದಲ್ಲಿ ವಿದ್ಯುಚ್ಛಕ್ತಿಯ ಅನುಕೂಲ ಸಾಕಷ್ಟು ಇಲ್ಲ. ಆದ್ದರಿಂದ ನಮ್ಮ ಜಿಲ್ಲೆಯ ಎಲ್ಲಾ ಭಾಗಕ್ಕೂ ಕೂಡ ವಿದ್ಯುಚ್ಛಕ್ತಿಯನ್ನು ಜಾಗ್ರತೆ ಒದಗಿಸಬೇಕು. ಎಲೆಕ್ಟ್ರಿಸಿಟಿ ಬಗ್ಗೆ ಎರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮ್ಮ ಬೀದರು ಜಿಲ್ಲೆಯ ಕೆಲವು ಭಾಗಗಳಲ್ಲಿ ಎಲೆಕ್ಟ್ರಿಸಿಟಿ ಕೊಡಬೇಕೆಂದು ಕಂಬಗಳನ್ನು ಹಾಕಿದ್ದರೂ ಇನ್ನೂ ಇಲ್ಲಿಯವರೆಗೆ ಲೈನುಗಳನ್ನು ಎಳೆದಿಲ್ಲ. ಇಲ್ಲಿ ಬೇಗನೆ ಪವರು ಕೊಟ್ಟರೆ ಈ ಭಾಗದಲ್ಲಿ ಇರುವ ಜನರು ಲಿಫ್ಟ್ ಇರಿಗೇಷನ್ ಮೂಲಕ ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ಇದರ ಬಗ್ಗೆ ನಾನು ಸರ್ಕಾರಕ್ಕೆ ಎಷ್ಟೋ ಸಾರಿ ಹೇಳಿದರೂ ಇನ್ನೂ ಇದರ ಕಡೆಗೆ ಇವರ ಗಮನ ಹರಿಯಲಿಲ್ಲ. ನಮ್ಮ ಜಿಲ್ಲೆಯಿಂದ ಒಂದು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟು ಪ್ಲಾನ್ ಎಂದು ಮಾಡಿ ಸರಕಾರಕ್ಕೆ ಕಳುಹಿಸಿ ಕೊಡಲಾಗಿದೆ. ಇದರ ಕಡೆಗೆ ಈಗಲಾದರೂ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಆರೋಗ್ಯ ಮಂತ್ರಿಗಳ ಗಮನಕ್ಕೆ ಒಂದು ವಿಚಾರ ತರಬೇಕಾಗಿದೆ. ಆರೋಗ್ಯ ಸಚಿವರು ಲೆಪ್ರಸಿ, ಟಿ.ಬಿ. ಮತ್ತು ಹೆಲ್ತ್ ಸೆಂಟರುಗಳೆಂದು ಬರೀ ಬೆಂಗಳೂರು ಸಿಟಿ ಮತ್ತು ಇತರ ಕೆಲವು ನಗರಗಳಲ್ಲಿ ಮಾತ್ರ ತೆರೆದಿದ್ದಾರೆ. ನಮ್ಮ ಬೀದರು ಜಿಲ್ಲೆಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಲೆಪ್ರಸಿ ಹಾಗೂ ಟಿ.ಬಿ. ರೋಗಿಗಳು ಇದ್ದರೂ ಇಲ್ಲಿ ಒಂದು ಲೆಪ್ರಸಿ ಮತ್ತು ಟಿ. ಬಿ. ಸೆಂಟರುಗಳನ್ನು ತೆರೆ ಯಲು ಇನ್ನೂ ಪ್ರಯತ್ನ ಮಾಡಿಲ್ಲ. ಇದಕ್ಕಾಗಿ ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುವುದು ಇಲ್ಲಿ ಒಂದು ಲೆಪ್ರಸಿ ಮತ್ತು ಟಿ. ಬಿ. ಸೆಂಟರನ್ನು ತೆರೆಯಬೇಕು ಎಂದು. ಅನಿಮಲ್ ಹಸ್‌ಬೆಂಡ್ರಿ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ನಮ್ಮ ಜಿಲ್ಲೆಯ ಔರಾದ್ ಎಂಬಲ್ಲಿ ಒಳ್ಳೆಯ ಜಾತಿಯ ಬೆಲೆಯುಳ್ಳ ಎತ್ತುಗಳು ಸಿಗುತ್ತವೆ. ಇಂತಹ ಎತ್ತುಗಳನ್ನು ದೆಹಲಿ ಇಂತಹ ಕಡೆಗಳಿಗೆ ಹೋಗಿ ವ್ಯಾಪಾರ ಮಾಡುತ್ತಿದ್ದಾರೆ. ಇಂತಹ ಎತ್ತುಗಳನ್ನು ಅಭಿವೃದ್ಧಿ ಮಾಡಲು ತಕ್ಕ ಕ್ರಮ ವನ್ನು ಸರಕಾರ ಹಾಕಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ನಮ್ಮ ಕಡೆ ಇರುವ ಕೋ-ಆಪರೇಟೀವ್ ಷುಗರ್ ಫ್ಯಾಕ್ಟರಿ ಬಗ್ಗೆ ಇಲ್ಲಿ ಹೇಳಬೇಕಾ ಗಿದೆ. ನಾನು ಈ ಫ್ಯಾಕ್ಟರಿಯ ಚೇರ್ಮನ್ ಆಗಿರುವುದರಿಂದ ಇದರ ವಿದ್ಯಮಾನಗಳು ನನಗೆ ಪೂರ್ಣ ಗೊತ್ತಿರುವುದರಿಂದ ಸರಕಾರಕ್ಕೆ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಈಚೆಗೆ ಟ್ಯಾರಿಫ್ ಕಮಿಷನ್‌ನವರು ಸಕ್ಕರೆ ಬೆಲೆ ಬಗ್ಗೆ ಪರಿಶೀಲನೆ ಮಾಡುತ್ತಾ ನಮ್ಮ ಇಂಡಿಯಾ

(ಶ್ರೀ ಎಸ್. ಭೀಮಣ್ಣ)

ದೇಶಕ್ಕೆಲ್ಲಾ 15 ಜೋನುಗಳು ಎಂದು ಮಾಡಿ ಈಗ ಫ್ಯಾಕ್ಟರಿಯವರು ಸಕ್ಕರೆ ಒಂದು ಟನ್‌ಗೆ 161 ರೂಪಾಯಿ ಇದ್ದುದನ್ನು ಟನ್‌ಗೆ 146 ರೂಪಾಯಿಗೆ ಇಳಿಸಿದರು ಮತ್ತು ಒಂದು ಚೀಲಕ್ಕೆ ಸುಮಾರು 14-15 ರೂಪಾಯಿಗಳು ನಷ್ಟವಾಗುವಂತೆ ಮಾಡಿದ್ದಾರೆ. ಎಕ್ಸೈಜು ಡ್ಯೂಟಿ ಹೆಚ್ಚು ಮಾಡಿರುವಾಗ ಇದರಿಂದ ನಮಗೆ ಹೆಚ್ಚು ಲಾಭ ಬರುವುದಿಲ್ಲ. ನಾವು ಫ್ಯಾಕ್ಟರಿಯಲ್ಲಿ ಸುಮ್ಮನೆ ಸ್ಟಾಕು ಮಾಡಿಕೊಂಡು ಬೇರೆಯವರಿಗೆ ಸರಕು ಮಾರಿಕೊಂಡು ಅವರು ಲಾಭ ಪಡೆಯುವಂತೆ ಮಾಡುವುದು ಸರಿಯಲ್ಲ. ಇದರ ಬಗ್ಗೆ ನಮ್ಮ ಜಿಲ್ಲೆಯ ಸಹಕಾರ ಸಕ್ಕರೆ ಕಾರ್ಖಾನೆಯ ಪ್ರತಿನಿಧಿಗಳು ಷುಗರ್ ಫೆಡರೇಷನ್ ಪ್ರತಿನಿಧಿಗಳೊಂದಿಗೆ ಚರ್ಚೆ ಮಾಡಲು ದೆಹಲಿಗೆ ಹೋಗುವವರಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳೂ ಸಹ ಗಮನಹರಿಸಿ ಸಕ್ಕರೆ ಕೈಗಾರಿಕೆಗೆ ಈಗ ನಿಗದಿ ಮಾಡುವ ದರದಿಂದ ನಷ್ಟವಾಗುತ್ತದೆ ಎನ್ನುವುದನ್ನು ತಿಳಿಸಿ ಅವರೂ ಶಿಫಾರಸು ಮಾಡಿ ಸರಿಯಾದ ದರ ಫ್ಯಾಕ್ಟರಿಯವರಿಗೆ ದೊರೆಯುವಂತೆ ಮಾಡಬೇಕು. ಇಲ್ಲದಿದ್ದರೆ ನಮ್ಮ ಸಕ್ಕರೆ ಫ್ಯಾಕ್ಟರಿ ನಡೆಸಲು ಸಾಧ್ಯವಿಲ್ಲ. ಇದಕ್ಕಾಗಿ ನಾವು ಸದ್ಯದಲ್ಲೇ ಒಂದು ಡೆಲಿಗೇಷನ್ ಮೂಲಕ ಹೋಗುವವರಿದ್ದೇವೆ. ಇದರ ಬಗ್ಗೆ ಸ್ವಲ್ಪ ಸರಕಾರದವರೂ ಕೇಂದ್ರ ಸರಕಾರಕ್ಕೆ ತಿಳಿಸಬೇಕು ಮತ್ತು ಒತ್ತಾಯ ಮಾಡಬೇಕು. ಕೇಂದ್ರದವರಿಗೆ ತಿಳಿಸಿ ನಮ್ಮ ಜನತೆಗೆ ಸಹಾಯ ಮಾಡಬೇಕು.

ಇನ್ನು ಮಹಾಜನ್ ಕಮಿಷನ್ ನಿರ್ಣಯದ ಬಗ್ಗೆ ಇಲ್ಲಿಂದ ಕೆಲವರು ಡೆಲಿಗೇಷನ್ ಹೋಗುವುದರಲ್ಲಿದ್ದಾರೆ. ಇದರಲ್ಲಿ ನಮ್ಮ ಜಿಲ್ಲೆಯ ಮಾಹಿತಿಗಳನ್ನು ತಿಳಿದವರು ಒಬ್ಬರೂ ಇಲ್ಲ ಎಂದು ನನಗೆ ತೋರುತ್ತೆ. ಆಂಧ್ರ ಮಹಾರಾಷ್ಟ್ರ ಹಾಗೂ ಕರ್ಣಾಟಕ ಎಂದು ಬೇರೆ ವಿಭಾಗ ಮಾಡಿ ಎಸ್.ಆರ್.ಸಿ. ರಿಪೋರ್ಟು ಏನು ಕೊಟ್ಟಿದ್ದಾರೋ ಆದರಿಂದ ಹಿಂದಕ್ಕೆ ಕೇಂದ್ರ ಸರಕಾರ ಈಗ ಹೋಗಲು ಆಗುವುದಿಲ್ಲ. ನಮ್ಮ ಜಿಲ್ಲೆಯ ಕೆಲವು ಹಳ್ಳಿಗಳನ್ನು ಬೇರೆ ಕಡೆಗೆ ಕೊಡಬೇಕೆಂದು ಸಲಹೆ ಬಂದಿದೆ ಎಂದು ಕೇಳುತ್ತೇವೆ. ಹಾಗಿದ್ದರೆ ನಮ್ಮ ಭಾಗದ ಪ್ರತಿನಿಧಿಗಳೂ ದೆಹಲಿಗೆ ಹೋಗಿ ಸತ್ಯಾಗ್ರಹ ಮಾಡುವುದಕ್ಕೆ ಹಿಂದೆ ಬೀಳುವುದಿಲ್ಲ. ಮಹಾಜನ್ ಕಮಿಷನ್ ವರದಿ ಸರಿಯಾಗಿಲ್ಲ ಎಂದು ಹೇಳಲು ಕೇಂದ್ರದವರು ಈಗ ಮುಂದಾಗಿದ್ದಾರೆಂದು ಕೇಳುತ್ತೇವೆ. ಇದಕ್ಕಾಗಿ ನಮ್ಮ ಭಾಗದ ಸುಮಾರು 118 ಜನ ಪ್ರತಿನಿಧಿಗಳು ನಮ್ಮ ವಿಚಾರಗಳನ್ನು ಸ್ಪಷ್ಟಪಡಿಸಲು ದೆಹಲಿಗೆ ಹೋಗಿ ಅಲ್ಲಿ ಧರಣಿ ಸತ್ಯಾಗ್ರಹ ಮಾಡಬೇಕೆಂದೂ ಇದ್ದಾರೆ. ಆದರೆ ನಮ್ಮ ಅಸೆಂಬ್ಲಿ ಸದಸ್ಯರ ಒಂದು ನಿಯೋಗ ಈಗ ದೆಹಲಿಗೆ ಹೋಗಲದೆ. ಇದರ ಲೀಡರ್‌ರವರಲ್ಲಿ ನಾನು ಪ್ರಾರ್ಥನೆ ಮಾಡುವುದು ನಮ್ಮ ಬೀದರು ಜಿಲ್ಲೆ ಬಗ್ಗೆ ಪೂರ್ತಿಯಾಗಿ ಮಾಹಿತಿ ಇರುವ ರಿಕಾರ್ಡುಗಳು ನನ್ನಲ್ಲಿವೆ. ಬೇಕಾದರೆ ಅವರಿಗೆ ಕೊಡುತ್ತೇನೆ. ಅವರು ಇದನ್ನೆಲ್ಲಾ ವಿಚಾರ ಮಾಡಿ ನಮ್ಮ ಬೀದರ್ ಭಾಗ ನಮ್ಮ ಕರ್ಣಾಟಕದಲ್ಲೇ ಉಳಿಯುವಂತೆ ಸರ್ವ ಪ್ರಯತ್ನ ಮಾಡಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರು ಇಷ್ಟು ಸಮಯ ಕೊಟ್ಟದಕ್ಕಾಗಿ ಅವರಿಗೆ ನಾನು ಆಭಾರ ಮನ್ನಿಸಿ ನನ್ನ ಮಾತುಗಳನ್ನು ಮುಗಿಸುತ್ತೇವೆ.

† ಶ್ರೀ ಹೆಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ರಾಜ್ಯದ ಹಿತಕ್ಕೆ ಧಕ್ಕೆ ಬಂದಿರತಕ್ಕ ಈ ಸಂದರ್ಭದಲ್ಲಿ ನಾನು ಹೆಚ್ಚಾಗಿ ಏನೂ ಪ್ರಸ್ತಾಪ ಮಾಡಲು ಇಷ್ಟವಿಲ್ಲದಿದ್ದರೂ ಆಯವ್ಯಯದ ಬಗ್ಗೆ ಚರ್ಚೆ ಮಾಡುವ ಕಾಲದಲ್ಲಿ ರಾಜ್ಯಸರಕಾರದವರು ರಾಜ್ಯದ ಹಿತವನ್ನು ರಕ್ಷಣೆ ಮಾಡುವ ವಿಚಾರದಲ್ಲಿ ಗಮನ ಕೊಡಬೇಕು ಎಂದು ಸೂಚಿಸುತ್ತೇನೆ. ಇವೊತ್ತು ಈಗಾಗಲೆ ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿದರೆ ಕೇಂದ್ರದವರು ಕಾವೇರಿ ಪ್ರಾಜೆಕ್ಟುಗಳನ್ನು ನಿಲ್ಲಿಸಬೇಕೆಂದು ಡೈರೆಕ್ಟೀವ್ ಕೊಟ್ಟಿದ್ದಾರೆಂದು ಕೇಳುತ್ತೇವೆ. We have to read in between the lines. ಟ್ರಿಬ್ಯೂನಲ್ ಅಪಾಯಿಂಟ್ ಮಾಡಬೇಕೆಂದು ಹೇಳುತ್ತಾರೆ. ಇಂತಹ ಟ್ರಿಬ್ಯೂನಲ್ ರಾಜ್ಯದ ಹಿತದೃಷ್ಟಿಯಿಂದ ಬಹು ಹಿಂದೆಯೇ ಆಗಬೇಕಿತ್ತು. 1956ರಲ್ಲೇ ಇಂತಹ ಒಂದು ಟ್ರಿಬ್ಯೂನಲ್ ಆಗಿದ್ದರೆ ಇದರಿಂದ ದೇಶಕ್ಕೆ ಜಾಸ್ತಿ ಲಾಭವಾಗುತ್ತಿತ್ತು ಎನ್ನುವುದನ್ನೂ ನಾವು ಅರ್ಥಮಾಡಿಕೊಂಡಿದ್ದೇವೆ. ಇವೊತ್ತು ಕಾವೇರಿ ನದಿ ನೀರಿನ ವಿವಾದದಿಂದ ಯಾವ ರಾಜ್ಯದ ಹಿತಕ್ಕೂ ಧಕ್ಕೆ ಬರುವುದಿಲ್ಲ ಮತ್ತು ನಮ್ಮ ರಾಜ್ಯದ ಹಿತಕ್ಕೂ ಧಕ್ಕೆ ಏನೂ ಬರುವುದಿಲ್ಲ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಆದರೆ ಇಂದು ಕೇಂದ್ರ ಸರಕಾರ ರಾಜ್ಯ ಸರ್ಕಾರಕ್ಕೆ ಡೈರೆಕ್ಷನ್ ಕೊಡುವುದು ಎಂದರೆ ಏನರ್ಥ ? ಇದು ಬಹಳ ವಿಪರೀತಕ್ಕೆ ಇಟ್ಟುಕೊಂಡಿದೆ. ಮುಂದೆ ಟ್ರಿಬ್ಯೂನಲ್ ಆದರೆ ಕೇಂದ್ರ ಇಲ್ಲಿ ಒಂದು ರೀತಿಯಾದ ಡೈರೆಕ್ಟೀವ್ ಕೊಟ್ಟು ಇವರ ಮಾರ್ಗದರ್ಶನದಂತೆ ನಡೆಯಬೇಕೇನು? ಕೇಂದ್ರ ಸರಕಾರದವರೇ ಟ್ರಿಬ್ಯೂನಲ್‌ಗೆ ಸ್ಟೇ ಆರ್ಡರು ಕೊಡುತ್ತಾರೇನು? ಸ್ಟೇ ಆರ್ಡರು ಕೊಡಲಿಕ್ಕೆ ಇವರಿಗೆ ಯಾವ ಅಧಿಕಾರವೂ ಇಲ್ಲ. ನಾನೂ ಕೂಡ ಇಂಟರು ಸ್ಟೇಟ್ ರಿವರ್ ಆಕ್ಟನ್ನು ಓದಿ ನೋಡಿದ್ದೇನೆ. ಇದರಲ್ಲಿ ತಪ್ಪು ಅಥವಾ ಸರಿ ಎಂದು ಹೇಳುವುದು

ಕೋರ್ಟಿನವರು. ಇವರಲ್ಲಿ ಸರಕಾರ ಸ್ಟೇ ಕೊಡಲು ಬರುವುದಿಲ್ಲ. ಆದರೂ ಕೂಡ ಕೇಂದ್ರ ಸರಕಾರ ಈ ರೀತಿ ಏಕೆ ಮಾಡುತ್ತೆ ಎನ್ನುವುದು ನಮಗೆ ಅರ್ಥವಾಗದೇ ಇರತಕ್ಕ ವಿಚಾರ. ಕೇಂದ್ರ ಸರಕಾರ ರಾಜ್ಯ ಸರಕಾರಕ್ಕೆ ಡೈರೆಕ್ಟೀವ್ ಕೊಡುವುದು ಎಂದರೆ ಇದರಲಿ ಅರ್ಥವೇನು ? ಕೇಂದ್ರದವರು ರಾಜ್ಯಸರಕಾರವನ್ನು ಕಾರ್ನರು ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೋ ಎನ್ನುವ ಅನುಮಾನ ನಮಗೆ ಬರುತ್ತಿದೆ. ಗಡಿ ಸಮಸ್ಯೆ ವಿಚಾರದಲ್ಲಿ ಮಹಾರಾಷ್ಟ್ರದವರ ಬಲೆಗೆ ಬಿದ್ದು ಕಾವೇರಿ ನೀರಿನ ವಿವಾದಕ್ಕೆ ತಮಿಳುನಾಡಿನ ಸರ್ಕಾರದವರ ಬಲೆಗೆ ಬಿದ್ದು ಅವರಿಗೆ ಅನುಕೂಲ ಮಾಡುವುದು ಕೃಷ್ಣಾ ನದಿ ನೀರಿನ ವಿವಾದದ ಬಗ್ಗೆ ಆಂಧ್ರದವರಿಗೆ ಅನುಕೂಲ ಮಾಡಿಕೊಡಬೇಕೆಂದು ಅವರ ಬಲೆಗೆ ಬಿದ್ದು ಹೀಗೆ ಹೋಗುವುದು ಎಂದರೆ ಇದು ಒಂದು ಪರಮಾವಧಿ ಮಟ್ಟಕ್ಕೆ ಹೋಗುತ್ತಿದೆ. ಕೇಂದ್ರದವರಿಗೆ ಶ್ರೀ ನಿಜಲಿಂಗಪ್ಪನವರ ಮೇಲೆ ದ್ವೇಷ ಇದೆ. ಒಬ್ಬ ವ್ಯಕ್ತಿಯ ಮೇಲಿನ ದ್ವೇಷಸಾಧನೆಗಾಗಿ ಕೇಂದ್ರ ಸರಕಾರ ರಾಜ್ಯದ ಜನರ ಹಿತವನ್ನು ಅಲಕ್ಷ್ಯ ಮಾಡುತ್ತಿದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. 1956ರಲ್ಲಿ ಇಂಟರ್ ಸ್ಟೇಟ್‌ರವರು ಆಕ್ಟ್ ಪಾಸಾಗಿದೆ. ಇದಕ್ಕೆ ಮುಂಚೆ 1952, 1953 ಮತ್ತು 1954ರಲ್ಲೇ ಅನುಮತಿ ಕೊಟ್ಟು ಮೈಸೂರು ಸರಕಾರಕ್ಕೆ ಕ್ಲಿಯರೆನ್ಸ್ ಕೊಡಲಾಗಿದೆ. We have to read in between the lines :

> "Under Section 256 of the Inter-state River Disputes Act, it was the bounden duty of the Union Government to prevent such violation of the 1924 Agreement by the Madras Government. What did the Union Government do then ?"

ಅವರು ಈ ರೀತಿ ಕೇಳಲು ಕಾರಣವೇನು ? ತಮಿಳುನಾಡಿನವರಿಗೆ ಅನುಕೂಲ ಮಾಡಬೇಕೆಂದು ಈ ರೀತಿ ಕೆಲವು ರಾಜ್ಯಗಳನ್ನು ವಹಿಸಿಕೊಂಡು ಹೋಗುವುದು ಸರಿಯಲ್ಲ. ಇದೊಂದು ವಿಪರೀತಕ್ಕೆ ಇಟ್ಟುಕೊಂಡಿದೆ. ಕೇಂದ್ರದವರು ಏನೇನು ಕಾರ್ಯಕ್ರಮಗಳನ್ನು ಕೃಷ್ಣಾ ನದಿ ಮುಂತಾದುವುಗಳ ಬಗ್ಗೆ ತೆಗೆದುಕೊಳ್ಳುತ್ತಿದ್ದಾರೆ, ಆ ವಿಚಾರದಲ್ಲಿ ಹೇಳುವುದಾದರೆ :

> "It is a fit case for the dismissal of Sri K. L. Rao, from the Union Government. He cannot hold such an important office wherein the integration of the whole nation is involved."

9-30 P.M.

ಅದು ಪ್ರಧಾನ ಮಂತ್ರಿಯವರ ಕರ್ತವ್ಯವಾಗಿದೆ. ರಾಷ್ಟ್ರದ ಐಕ್ಯತೆಯ ದೃಷ್ಟಿಯಿಂದ ಅವರ ಅದನ್ನು ಮಾಡಬೇಕಾಗಿದೆ. ರಾಷ್ಟ್ರದ ಐಕ್ಯತೆಯ ದೃಷ್ಟಿಯಿಂದ, ರಾಜ್ಯಗಳಿಗೆ ಸಂಬಂಧಪಟ್ಟ ಸಮಸ್ಯೆಯು ಒಂದು ಪೋರ್ಟ್‌ಫೋಲಿಯೋ ಇವೆ; ಅದು ಬಹುಶಃ ನದಿ ನೀರಿನ ಪೋರ್ಟ್‌ಫೋಲಿಯೊ. ಇವತ್ತು ರಾಜ್ಯದ ಸಮಸ್ಯೆಗಳಲ್ಲ ಅತೀ ಪ್ರಾಮುಖ್ಯವಾದಂತದ್ದು ನದಿ ನೀರಿನ ಸಮಸ್ಯೆ. ಇವತ್ತು ರಾಷ್ಟ್ರದ ಐಕ್ಯತೆ ಉಳಿಯಬೇಕಾದರೆ, ಈ ಸಮಸ್ಯೆ ಬೆಳೆಯದಂತೆ, ಯಾರಿಗೂ ನೋವಾಗದಂತೆ, ಲಾ ಆಫ್ ಇಕ್ವಿಟಿ ಪ್ರಕಾರ ಇದನ್ನು ಬಗೆಹರಿಸಬೇಕು. ಇದೊಂದು ಪ್ರಶ್ನೆ ರಾಷ್ಟ್ರದ ಐಕ್ಯತೆಗೆ ಭಂಗ ತರತಕ್ಕ ಪ್ರಶ್ನೆಯಾಗಬಹುದೆಂದು ನಾನು ಹೇಳುತ್ತೇನೆ. ಆದರೂ ತಡವಾಗಿಲ್ಲ, ಇವೊತ್ತಿನ ದಿವಸ ಇಂದಿರಾಗಾಂಧಿಯವರಿಗೆ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇಂಥ ಇಲಾಖೆಯ ಅಧಿಕಾರವನ್ನು ಯಾರು ವಹಿಸಿಕೊಂಡಿದ್ದಾರೋ, ಅವರನ್ನು ಹಿಂದು ಮುಂದು ನೋಡದೆ ನಿವೃತ್ತಿಗೊಳಿಸುವುದನ್ನು ನೋಡಬೇಕು. ರಾಷ್ಟ್ರದ ಐಕ್ಯತೆಗೆ ಭಂಗ ತರತಕ್ಕ ಯಾವ ಮನುಷ್ಯನಾದರೂ ಕೂಡ, ಅವನ ಸ್ಥಾನಮಾನ ಏನೇ ಇದ್ದರೂ ಕೂಡ, ಅದು ಪ್ರಧಾನ ಮಂತ್ರಿಯೇ ಆಗಿದ್ದರೂ ಕೂಡ, ಅವರ ಮೇಲೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ರಾಷ್ಟ್ರದ ಐಕ್ಯತೆ ಉಳಿಯುವುದಿಲ್ಲ. ರಾಷ್ಟ್ರದ ಐಕ್ಯತೆಯನ್ನು ಒಡೆಯುತ್ತಾರೆ; ಮತ್ತು ಅಂಥವರನ್ನು ಡಿಸ್‌ಮಿಸ್ ಮಾಡಿರಿ ಎಂದು ಹೇಳುವ ಕಾಲ ದೂರವಿರುವುದಿಲ್ಲ. ಕೇಂದ್ರದಿಂದ ಯಾವ ರೀತಿಯಲ್ಲಿ ಅ ಡೈರೆಕ್ಟಿವ್ ಕೊಟ್ಟಿದ್ದಾರೆ, ಯಾವುದರ ಪ್ರಕಾರ ಅದನ್ನು ಕೊಟ್ಟಿದ್ದಾರೆ, ಮತ್ತು ಅದನ್ನು ಕೊಡಲು ಮೈಸೂರು ಸರ್ಕಾರ ಯಾವುದನ್ನು ವೈಯಲೇಟ್ ಮಾಡಿದೆ ? Rules of Regulation are only a corollary to the Agreement. It is not the mere Agreement itself that counts. ರೂಲ್ಸಿಗೆ ಧಕ್ಕೆ ಬರದ ಹಾಗೆ ಈ ಅಗ್ರಿಮೆಂಟಿನಲ್ಲಿ ಪ್ರೊವಿಜನ್ಸ್ ಏನಿವೆ, ಮತ್ತು ಅದರಲ್ಲಿ ನಮಗೆ ಎಷ್ಟು ನೀರು ಕೊಡಬೇಕೆಂದು

(ಶ್ರೀ ಎಚ್. ಎನ್. ನಂಜೇಗೌಡ)

ಇದೆ, ಇದನ್ನು ಮಾಡಬೇಕು. It is the funeral of Madras and Union Governments. ಇವತ್ತು ನಮ್ಮ ಕಂಪ್ಲೈಂಟ್ಸ್ ಎಲ್ಲಾ ಮೂಲೆಗೆ ತಳ್ಳಿಹಾಕಿ ಮದ್ರಾಸಿನವರು ನೆಪ ಎತ್ತಿದ್ದಾರೆಂಬುದನ್ನು ಹೇಳಿದರೆ ಇದು ಯಾವ ನ್ಯಾಯ? ನಾವು 1959ರಿಂದ ನಮ್ಮ ಕಂಪ್ಲೈಂಟ್ಸನ್ನು ಮಾಡುತ್ತಾ ಇದ್ದೇವೆ. ಹೀಗೆ 11 ವರ್ಷಗಳ ಕಾಲ ನಮ್ಮ ಬಗ್ಗೆ ಯಾವ ಕಳವಳವನ್ನು ವ್ಯಕ್ತಪಡಿಸದೆ, ಈಗ ಮದ್ರಾಸಿನವರು ನೆಪ ಹೇಳಿದ ಮೇಲೆ, ಇವತ್ತು ರಾತ್ರೋ ರಾತ್ರಿ ನಮಗೆ ಕೆಲಸ ನಿಲ್ಲಿಸಿರಿ ಎಂದು ಹೇಳಿದರೆ, ಇದರಲ್ಲಿ ಕೇಂದ್ರದವರಿಗೆ ನೈತಿಕವಾದ ಹಕ್ಕು ಏನಿದೆ ಎಂಬುದನ್ನು (ಅಪಾರ್ಟ್ ಫ್ರಮ್ ಲೀಗಲ್ ಆಸ್ಪೆಕ್ಟ್ಸ್) ಕೇಳುತ್ತೇನೆ. ಅವರು ಪ್ರಾಮುಖ್ಯವಾದ ರಾಷ್ಟ್ರದ ಐಕ್ಯತೆಯನ್ನು ಉಳಿಸುವ ಜನರಾಗಿದ್ದರೆ, ನಮ್ಮ ದೂರುಗಳು ಹೋಗತಕ್ಕ ಕಾಲದಲ್ಲಿ, ಇವನ್ನೆಲ್ಲಾ ಪರಿಗಣಿಸಿ, 1959ರಲ್ಲಿ ಏನು ಕ್ರಮ ತೆಗೆದುಕೊಂಡರು? ಅಗ್ರಿಮೆಂಟ್ ಬಗ್ಗೆ ಅಂದು ಏನು ಮಾಡಿದರು? ಅದನ್ನು ಕೇಂದ್ರದವರು ಅಂದು ಮಾಡಬೇಕಾಗಿತ್ತು. ಅವತ್ತು ಟ್ರಿಬ್ಯೂನಲಿಗೆ ಹಾಕಿದ್ದರೆ ತಡಕೊಳ್ಳುತ್ತಿದ್ದೆವು, ಮದ್ರಾಸಿನವರನ್ನು ಸೇರಿಸಿ ವ್ಯವಹಾರ ಮಾಡಿದ್ದರೆ ತಡಕೊಳ್ಳುತ್ತಿದ್ದೆವು; ಮತ್ತು ನಮಗೆ ಡೈರೆಕ್ಟಿವ್ ಕೊಡುತ್ತಿದ್ದರೂ ತಡೆಕೊಳ್ಳುತ್ತಿದ್ದೆವು. ಇವತ್ತು ಇದು ಏನಾಗಿದೆ ಅಂದರೆ, ಒಬ್ಬ ಜಡ್ಜು ತಾನೇ ಅಪರಾಧಿಯ ಪರವಾಗಿ ಆರ್ಗ್ಯುಮೆಂಟ್ ಮಾಡಿದ ರೀತಿಯಾಗಿದೆ. ಕೇಂದ್ರದವರು ಮದ್ರಾಸಿನ ಪರವಾಗಿ ವಾದ ಮಾಡಿದ ಹಾಗೆ ಆಗಿದೆ. ನಾನಾದರೂ ಹೇಳುತ್ತೇನೆ, ಕೇಂದ್ರದ ಕೆ.ಎಲ್. ರಾವೇ ಆಗಲಿ, ಅಥವಾ ಪ್ರಧಾನ ಮಂತ್ರಿಯವರೇ ಆಗಲಿ, ಯಾರಾದರೂ ಒಳಸಂಚು ಮಾಡಿದ್ದರೆ, ಅಂಥವರು ಅಧಿಕಾರದಲ್ಲಿರಲು ಯೋಗ್ಯರಲ್ಲ. ಇದನ್ನು ರಾಜ್ಯಸರ್ಕಾರದವರು ಕಟ್ಟುನಿಟ್ಟಾಗಿ ಹೇಳಬೇಕು. ಇವೊತ್ತಿನ ದಿವಸ ಇದು ಯಾವುದೇ ಇಂಡಿಕೇಟ್, ಸಿಂಡಿಕೇಟ್ ಅಥವಾ ಬೇರೆ ಪಕ್ಷದ ಪ್ರಶ್ನೆಯಲ್ಲ. ಇದರ ಬಗ್ಗೆ ರಾಜ್ಯದಲ್ಲಿರತಕ್ಕ ಜನರೆಲ್ಲಾ ವಿರೋಧ ವ್ಯಕ್ತಪಡಿಸುತ್ತಿದ್ದಾರೆಂಬುದನ್ನು ನಾನು ಇಲ್ಲಿ ಹೇಳುತ್ತಿದ್ದೇನೆ.

ಇನ್ನು ಸಿ.ಡಬ್ಲ್ಯು. ಪಿ ಸಿ. ಯವರು ನಮ್ಮನ್ನು ಕೇಳದೆ ಹಿಂದೆ ಅವರಿಗೆ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಆದರೆ ನಾವು ಕೇಳಿದರೆ, ಅದಕ್ಕೆ ಯಾವುದೋ ನೆಪ ಹೂಡಿಕೊಂಡು ನಿಧಾನವಾದ ನೀತಿಯನ್ನು ಅನುಸರಿಸುತ್ತಿದ್ದಾರು. ಇವತ್ತು ಸಿ. ಡಬ್ಲ್ಯು. ಪಿ. ಸಿ. ಯವರ ನೀತಿ ಏನಿದೆ, ಅದು ಕೇವಲ ಕೆಲವು ರಾಜ್ಯಗಳ ಪರವಾಗಿ ಕೆಲಸಮಾಡತಕ್ಕ ಒಂದು ಏಜೆನ್ಸಿಯಂತಾಗಿದೆ. ನಮ್ಮ ರಾಜ್ಯವಾದರೂ ಕೂಡ ಇಂಟರ್ ಸ್ಟೇಟ್ ಡಿಸ್ಪ್ಯೂಟ್ ಪ್ರಕಾರ ಸುಪ್ರೀಂ ಕೋರ್ಟಿಗೆ ಹೋಗುವ ಹಾಗೆ ಇಲ್ಲ. ಆದರೆ ಇದರಲ್ಲಿ ಕೇಂದ್ರ ಸರ್ಕಾರವನ್ನೂ, ಕೆ. ಎಲ್. ರಾವನ್ನೂ, ಮತ್ತು ಸಿ. ಡಬ್ಲ್ಯು. ಪಿ. ಸಿ. ಯವರನ್ನೂ ಒಂದು ಪಾರ್ಟಿ ಮಾಡಿ ಇವತ್ತಿನ ದಿವಸ ಸುಪ್ರೀಂ ಕೋರ್ಟಿಗೆ ಹೋಗತಕ್ಕದ್ದು ಬಹಳ ಅವಶ್ಯ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ನರ್ಮದಾ ನದಿಯ ನೀರಿನ ವಿವಾದದಲ್ಲಿ ಹಾಗೆ ಆಗಿದೆ. That has been questioned in the Supreme Court by some other States like Madhya Pradesh and other States.

ಶ್ರೀ ಎಚ್. ಎನ್. ನಂಜೇಗೌಡ.—ನಾನಾದರೂ ಹೇಳುತ್ತೇನೆ. We have to question the authority of the Union Government, which behaves like this in a partisan manner in favour of Andhra Pradesh and Maharashtra. ಈ ಅನುಭವಗಳ ನೆರಳಿನಲ್ಲಿ ನಮಗೆ ಅನುಮಾನ ಆಗುತ್ತಿದೆ. ಇವತ್ತು ಅರ್ಬಿಟ್ರೇಶನಿಗೆ ಹೋದರೂ ಕೆ. ಎಲ್. ರಾಯರು ಅವರ ಏಜೆಂಟರಾಗುತ್ತಾರೆಂಬ ಅನುಮಾನವಿದೆ He is paving the way for the appointment of a Tribunal for this dispute. He is also paving the way to help the cause of Madras by giving a directive to stop the works in Mysore State.

ಶ್ರೀ ಎಸ್. ಎಂ. ಗುರಡ್ಡಿ.—ಆರ್ಬಿಟ್ರೇಷನ್ ಮತ್ತು ಕಮಿಶನ್ನಿನಲ್ಲಿ ತಮಗೆ ನಂಬಿಕೆ ಇದೆಯೇ?

ಶ್ರೀ ಎಚ್. ಎನ್. ನಂಜೇಗೌಡ.—ಕೆಲವರು ತಲೆ ಉಳಿಸಿಕೊಳ್ಳುವುದಕ್ಕೆ ಆರ್ಬಿಟ್ರೇಷನ್ ಮಾಡುವುದು ಕಂಡುಬರುತ್ತದೆ. ಆದರೆ ರಾಷ್ಟ್ರದ ಐಕ್ಯತೆಯನ್ನು ಉಳಿಸುವುದಕ್ಕೆ, ನ್ಯಾಯ ಉಳಿಸುವುದಕ್ಕೆ ಕೇಂದ್ರದವರು ಮಾಡುತ್ತಾ ಇಲ್ಲವೆಂಬುದನ್ನು ನಾವು ಅರ್ಥಮಾಡಿಕೊಳ್ಳಬಹುದು.

ನಾವು ಗಡಿ ಸಮಸ್ಯೆಯಲ್ಲಿ ಕೂಡ ಕಂಡುಕೊಂಡಿದ್ದೇವೆ. ತಮಗೆ ಬೇಕಾದ ಅಂದರೆ, ಮಹಾರಾಷ್ಟ್ರ, ಆಂಧ್ರ ಮತ್ತು ಮದ್ರಾಸ್‌ನ ಹಿತರಕ್ಷಣೆಯನ್ನು ಇವರು ಮಾಡುತ್ತಿದ್ದಾರೆ. ಎಲ್ಲಿಯವರೆಗೆ ಈ ರೀತಿ ಕೆಲವು ರಾಜ್ಯಗಳ ಏಜೆಂಟಾಗಿ ವರ್ತಿಸುತ್ತಾರೋ, ಅಲ್ಲಿಯವರೆಗೆ ನಮ್ಮ ಹಿತ ಸಾಧನೆಯಾಗುವುದಿಲ್ಲ ಮತ್ತು ರಾಷ್ಟ್ರದ ಐಕ್ಯತೆಗೆ ಭಂಗ ಬರುತ್ತದೆ. ಕೇಂದ್ರದಲ್ಲಿ ತಮ್ಮ ಅಧಿಕಾರವನ್ನು ಭದ್ರವಾಗಿ ಉಳಿಸಿಕೊಳ್ಳುವುದಕ್ಕೆ ಪ್ರಯತ್ನಪಡುವುದರಿಂದ, ಇಂಥ ಸಮಸ್ಯೆಗಳಿಗೆ ಇವರು ಮಹತ್ವ ಕೊಡದೆ, ಒಂದು ರಾಜಕೀಯವನ್ನು ಬೆಳೆಸುತ್ತಿದ್ದಾರೆ. ಇದರಿಂದ ನಮ್ಮ ರಾಷ್ಟ್ರದ ಐಕ್ಯತೆಗೆ ಉಳಿಗಾಲವಿಲ್ಲವೆಂಬುದನ್ನು ಅರ್ಥಮಾಡಿಕೊಳ್ಳಬಹುದು. ನಾನು ರಾಜ್ಯಸರ್ಕಾರದವರಿಗೆ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ನೀರಿನ ಪ್ರಶ್ನೆಯಲ್ಲಿ ನಮ್ಮ ಹಕ್ಕನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆಂದು ಅರ್ಥಮಾಡಿಕೊಂಡಿದ್ದೇನೆ. ಇನ್ನೊಂದು ವಿಚಾರವೇನೆಂದರೆ, ಇವತ್ತು ಲೀಗಲ್ ಎಕ್ಸ್‌ಪರ್ಟುಗಳು, ಕೇಂದ್ರ ಸರ್ಕಾರದವರು ತನ್ನ ಹೊಣೆಗಾರಿಕೆಯನ್ನು ನಿರ್ವಹಿಸದೆ ವಿಫಲರಾಗಿದ್ದಾರೆ, ಎಂಬುದನ್ನು ನೋಡಬೇಕು. Unconsciously they have not failed in their duty. Purposely they have failed in their duty. ಅವರು ಉದ್ದೇಶಪೂರ್ವಕವಾಗಿ ನಮ್ಮ ರಾಜ್ಯಕ್ಕೆ ತೊಂದರೆ ಕೊಡಬೇಕೆಂದು ಮಾಡುತ್ತಿದ್ದಾರೆ. ಅದರಿಂದಾಗಿ ಕೇಂದ್ರ ಸರ್ಕಾರವನ್ನು, ಕೆ. ಎಲ್. ರಾಯರನ್ನು ಮತ್ತು ಸಿ.ಡಬ್ಲ್ಯು.ಪಿ.ಸಿ. ಯವರನ್ನು ಪಾರ್ಟಿಮಾಡಿ, ರಾಜ್ಯಾಂಗದಂತೆ, ಸುಪ್ರೀಂ ಕೋರ್ಟಿಗೆ ಹೋಗಿ ಹೋರಾಟ ಮಾಡುವುದಕ್ಕೆ ಅವಕಾಶ ಇದೆಯೇ ಎಂಬುದನ್ನು ನಮ್ಮ ಲೀಗಲ್ ಎಕ್ಸ್‌ಪರ್ಟುಗಳು ನೋಡಿ, ಅದರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಬಹಳ ಒಳ್ಳೆಯದೆಂದು ನಾನು ಸೂಚನೆ ಮಾಡುತ್ತೇನೆ. ಆರ್ಬಿಟ್ರೇಶನ್ ಮುಂದೆ ಹೋದರೆ ಕೂಡ ನಮಗೆ ಏನೂ ಹೆದರಿಕೆ ಇಲ್ಲ, ನಾವು ಅಪರಾಧಿಗಳಲ್ಲ. ನಮ್ಮ ರಾಜ್ಯವನ್ನು ದಕ್ಷಿಣ ರಾಜ್ಯಗಳಲ್ಲಿ ಕಾರ್ನರ್ ಮಾಡಿ, ನಮ್ಮ ರಾಜ್ಯದ ಹಿತಾಸಕ್ತಿಗಳನ್ನು ಬಲಿ ಕೊಟ್ಟು ಬೇರೆ ರಾಜ್ಯಗಳನ್ನು ಉದ್ಧಾರಮಾಡಲು ಇವರು ಹೊರಟಿದ್ದಾರೆ. This is a general case. ಇದರಿಂದ ಇವರು ದುರುದ್ದೇಶಪೂರಿತವಾದ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ,—ಇವುಗಳನ್ನು ಪ್ರಶ್ನಿಸಬೇಕಾಗಿದೆ. ಅವರ ವಿಫಲತೆಯನ್ನು, ಅಭಿಪ್ರಾಯಗಳನ್ನು ಆಳವಾಗಿ ಅಭ್ಯಾಸಮಾಡಿ ಎನ್ನುವ ಸೂಚನೆಯನ್ನು ರಾಜ್ಯ ಸರ್ಕಾರಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಈ ವಿಷಯದಲ್ಲಿ ಇನ್ನೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ದುರ್ದೈವದ ಸಂಗತಿ ಎಂದರೆ ನಮ್ಮಲ್ಲಿ ಇಂಥ ಸಮಸ್ಯೆಗಳ ಬಗ್ಗೆ ಜನತೆಯಲ್ಲಿ ಆತುರವಿದ್ದರೂ ಕೂಡ, ಈ ಸಭೆಯ ಮಾನ್ಯ ಸದಸ್ಯರಲ್ಲಿ ಆತುರವಿದ್ದರೂ ಕೂಡ ಸರ್ಕಾರ ಸ್ವಲ್ಪ ಆತುರತೆಯನ್ನು ತೋರಿ, ಎಲ್ಲರನ್ನೂ ನಂಬಿಕೆಗೆ ತೆಗೆದುಕೊಂಡು, ಈ ಸಭೆಯಲ್ಲಿ ಯಾರು ಈ ವಿಚಾರವನ್ನು ಆಳವಾಗಿ ಅಭ್ಯಾಸ ಮಾಡಿದ್ದಾರೆ ಅವರ ಸೇವೆಯನ್ನು ಪಡೆದುಕೊಳ್ಳುವುದಕ್ಕೆ ಹಿಂದು ಮುಂದು ನೋಡುತ್ತಿರುವ ಸೂಚನೆಯನ್ನು ಕೊಟ್ಟಿದೆ, ಸರ್ಕಾರ ಒಂದು ಗಂಡಾಂತರ ಪರಿಸ್ಥಿತಿಯಲ್ಲಿದೆ. ಇಂಥ ಗಂಡಾಂತರ ಪರಿಸ್ಥಿತಿಗೆ ಕಾರಣವೇನೆಂದರೆ ಅನೇಕ ಕೋಟಿ ರೂಪಾಯಿಗಳನ್ನು ಈ ಪ್ರಾಜೆಕ್ಟುಗಳ ಮೇಲೆ ಹಾಕಿದ್ದಾರೆ. We cannot leave that amount to be a dead capital. ಕೇಂದ್ರ ಸರ್ಕಾರದವರು ತಿಳಿದುಕೊಂಡಿರುವಷ್ಟು ಸುಲಭವಾಗಿ ಆ ಯೋಜನೆಗಳನ್ನು ಬಿಡಲು ಆಗುವುದಿಲ್ಲ. ಕಬಿನಿ ಪ್ರಾಜೆಕ್ಟಿಗೆ ಒಂದು ರೀತಿಯ ಕ್ಲಿಯರೆನ್ಸ್ ಕೊಟ್ಟಿದ್ದರು. ನಾವು ಆ ಯೋಜನೆಗೆ ಹಣವನ್ನು ತೊಡಗಿಸಿದ್ದೇವೆ. ಇದೆಲ್ಲ ಇರುವುದರಿಂದ ಕೇಂದ್ರ ಸರ್ಕಾರ ತಿಳಿದುಕೊಂಡಿರುವಂತೆ ನಮ್ಮ ಪ್ರಾಜೆಕ್ಟುಗಳ ಕೆಲಸವನ್ನು ನಿಲ್ಲಿಸಲು ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ನಮ್ಮ ರಾಜ್ಯ ಸರ್ಕಾರದ ನಿಲುವು ಏನು ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಗೆ ತಿಳಿಸತಕ್ಕದ್ದು ಭಾರಿ ಪ್ರಾಮುಖ್ಯವಾಗಿದೆ. ಇಷ್ಟನ್ನು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಎಸ್. ಗೌಡ (ದೇವನಹಳ್ಳಿ).—ಮಾನ್ಯ ಉಪಸಭಾಪತಿಗಳೇ, 1970-71ರ ಆಯವ್ಯಯವನ್ನು ನಮ್ಮ ರಾಜ್ಯದ ಹಣಕಾಸಿನ ಸಚಿವರು ಬಹಳ ವಾಸ್ತವಾಂಶಗಳಿಂದ ಕೂಡಿದ ಉತ್ಪ್ರೇಕ್ಷೆ ಇಲ್ಲದೆ ಇರತಕ್ಕ ಆಯವ್ಯಯ ಪತ್ರವನ್ನು ಮಂಡಿಸಿದ್ದಾರೆ. ಅದು ಸರ್ವ ವಿಧದಲ್ಲಿಯೂ ಸ್ವಾಗತಾರ್ಹ. ಕೇಂದ್ರದ ಇತ್ತೀಚಿನ ಆಯವ್ಯಯ ಪತ್ರ ಬಡವ ಬಲ್ಲಿದ ಭೇದವಿಲ್ಲದೆ ಹೆಚ್ಚಿನ ಹೊರೆಯನ್ನು ಮಾಡಿರುವ ಆಯವ್ಯಯ ಪತ್ರವಾಗಿದೆ. ನಮ್ಮ ರಾಜ್ಯದಲ್ಲಿ ದೊರಕುವ ಸಂಪನ್ಮೂಲಗಳು, ಅದರ ಇತಿಮಿತಿಗಳು. ಇದನ್ನು ನೋಡಿಕೊಂಡು, ಈ ವರ್ಷದ ಆಯವ್ಯಯ ಪತ್ರದಲ್ಲಿ ಅಳವಡಿಸಿಕೊಂಡು ಎಲ್ಲರಿಗೂ ಹೆಚ್ಚಿನ ಕರಭಾರವಿಲ್ಲದ ಮತ್ತು ಸರ್ವಸಮ್ಮತವಾದ ಒಂದು ಆಯವ್ಯಯ ಪತ್ರವನ್ನು ಏನು ಮಂಡಿಸಿದ್ದಾರೆ ಅದು ಇತರೆ ಎಲ್ಲ ವರ್ಷಗಳಿಗಿಂತ ಬಹಳ ಮೆಚ್ಚತಕ್ಕ ಆಯವ್ಯಯ ಪತ್ರವಾಗಿದೆ. ಇದರಲ್ಲಿ ಮೈಸೂರು ರಾಜ್ಯದಲ್ಲಿ ಸುಮಾರು ಹತ್ತು ವರ್ಷ

(ಶ್ರೀ ಡಿ. ಎಸ್. ಗೌಡ)

ಗಳಿಂದ ಸಾಧಿಸಿರತಕ್ಕ ಪ್ರಗತಿಯನ್ನು ಸಹ ಉಲ್ಲೇಖಿಸಿ ಜೊತೆಗೆ ಸಾಧನೆಯಾಗಿರತಕ್ಕ ಅಂಶಗಳೇನಿವೆ ಅವುಗಳನ್ನೂ ಉಲ್ಲೇಖಿಸಿ ನಿಜವಾಗಿಯೂ ಉತ್ಪ್ರೇಕ್ಷೆ ಇಲ್ಲದ, ವಾಸ್ತವಾಂಶಗಳಿಂದ ಕೂಡಿದ ಪ್ರಗತಿಯ ನೈಜವಾದ ಚಿತ್ರವನ್ನು ನಮ್ಮ ಮುಂದೆ ಮಾನ್ಯ ಅರ್ಥಸಚಿವರು ಇಟ್ಟಿದ್ದಾರೆ. ಇದು ಮತ್ತಷ್ಟು ಸ್ವಾಗತಾರ್ಹವಾದ ಅಂಶವೆಂದು ನಾನು ಹೇಳಬಯಸುತ್ತೇನೆ. ಸುಮಾರು ಹತ್ತು ವರ್ಷಗಳಿಂದ ಆಗಿರುವ ಪ್ರಗತಿಯನ್ನು ನೋಡಿದರೆ, ಎಲ್ಲ ಪ್ರದೇಶಗಳಲ್ಲಿಯೂ ಮೆಚ್ಚತಕ್ಕಂಥ ಸಾಧನೆ ನಡೆದಿದೆ. ಅದರ ಬಗ್ಗೆ ನಾನು ಏನೂ ಹೇಳಬಯಸುವುದಿಲ್ಲ, ಕಾರಣ ಆಯವ್ಯಯ ಪತ್ರದಲ್ಲಿ ಸವಿಸ್ತಾರವಾಗಿ ಅದನ್ನು ನಮೂದಿಸಿದ್ದಾರೆ. ಆದರೂ ಸಹ ಬೆಳೆಯುತ್ತಿರುವ ಜನಸಂಖ್ಯೆ ಹಾಗೂ ಉದ್ಭವಿಸಿರತಕ್ಕ ನಾನಾ ಕಷ್ಟ ಸಮಸ್ಯೆಗಳು ಇವನ್ನು ನಾವು ನೋಡಿದಾಗ ಬಹುಶಃ ಅರ್ಥಸಚಿವರು ಒಪ್ಪಿಕೊಂಡಿರುವ ರೀತಿಯಲ್ಲಿ ಸಾಧಿಸಬೇಕಾದ್ದು ಬಹಳಷ್ಟು ಇದೆ. ಇದರಲ್ಲಿ ರಾಜ್ಯ ಸರ್ಕಾರ ಕೇವಲ ಒಂದು ಹೊಣೆ ಎನ್ನುವ ರೀತಿಯಲ್ಲಿ ಅನೇಕ ಮಾನ್ಯ ಸದಸ್ಯರು ರಾಜ್ಯ ಸರ್ಕಾರವನ್ನು ಈಗ ಗುರಿಯಾಗಿಟ್ಟುಕೊಂಡು ಟೀಕಿಸುತ್ತಿದ್ದಾರೆ. ಇದನ್ನು ಈ ಸಂದರ್ಭದಲ್ಲಿ ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ, ಇಡೀ ರಾಜ್ಯದ ಪ್ರಗತಿ ಮತ್ತು ರಚನಾತ್ಮಕ ಕೆಲಸಗಳಿಗೆ ಇಡೀ ಸಭೆ ಒಕ್ಕೊರಲಿನಿಂದ ಪೂರ್ಣ ಸಹಾಯವನ್ನು, ಸಹಕಾರವನ್ನು ನೀಡಬೇಕಾಗಿದೆ. ಈ ರಾಜ್ಯದ ಅಭಿವೃದ್ಧಿ, ಪ್ರಗತಿ, ಕೇವಲ ರಾಜ್ಯ ಸರ್ಕಾರದ ಕೈಯಲ್ಲಿಲ್ಲ. ಆದರೆ ಅಷ್ಟೇ ಹೊಣೆ ಕೇಂದ್ರ ಸರ್ಕಾರದ್ದೂ ಇದೆ ಎಂಬತಕ್ಕ ವಿಷಯ ಎಲ್ಲರಿಗೂ ತಿಳಿದಿರತಕ್ಕ ವಿಷಯ, ಹಾಗೂ ರಾಜ್ಯಾಂಗವನ್ನು ನಿರ್ಮಿಸಿರುವ, ಸಂವಿಧಾನವನ್ನು ನಿರ್ಮಿಸಿರುವ ಎಲ್ಲರೂ ಒಪ್ಪತಕ್ಕ ವಿಷಯ. ಆದರೆ ದುರ್ದೈವವೋ ಎನ್ನುವ ರೀತಿಯಲ್ಲಿ ಕೇವಲ ಈ ವರ್ಷವಲ್ಲ, ಸುಮಾರು ಹತ್ತು ವರ್ಷಗಳಿಂದ ಕೇಂದ್ರ ಸರ್ಕಾರದ ನೀತಿಯನ್ನು ನೋಡಿದರೂ ಸಹ ಇಡೀ ದಕ್ಷಿಣ ರಾಜ್ಯಗಳ ಮೇಲೆ ಕೇಂದ್ರ ಸರ್ಕಾರದ ಪ್ರತಿಕೂಲ ನೀತಿ, ಆದರಲ್ಲಿಯೂ ಮೈಸೂರು ರಾಜ್ಯದ ಮೇಲೆ ಅದರ ಪ್ರತಿಕೂಲ ನೀತಿಯನ್ನು ಕಾಣುತ್ತಿದ್ದೇವೆ. ಕೇಂದ್ರ ಸರ್ಕಾರವೇ ಹೊಣೆಯಾಗಿರತಕ್ಕ, ಸಂವಿಧಾನದಂತೆ ನಡೆಯಬೇಕಾಗಿರುವ ತತ್ವಗಳಿಗನುಗುಣವಾಗಿ ಕೇಂದ್ರ ಸರ್ಕಾರ ನಡೆಯುತ್ತಿದೆಯೇ, ಇಲ್ಲವೇ ಎನ್ನುವುದನ್ನು ಪ್ರಶ್ನಿಸುವ ಕಾಲ ಸಮೀಪವಾಗುತ್ತಿದೆ. ಎನ್ನುವ ಭಾವನೆ ಎಲ್ಲರಿಗೂ ಗೋಚರವಾಗುತ್ತಿದೆ. ಪ್ರಜಾಪ್ರಭುತ್ವದ ಧೋರಣೆ ಈ ರೀತಿ ಇರಬೇಕು ಎಂದು ಸಂವಿಧಾನದಲ್ಲಿ ನಮೂದಿಸಲಾಗಿದೆ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ದೊರೆಯುವ ಸಾಮಾಜಿಕ ವ್ಯವಸ್ಥೆಯನ್ನು ಶಕ್ಯವಿದ್ದಷ್ಟು ಪರಿಣಾಮಕಾರಿಯಾಗಿ ದೊರಕಿಸಿ, ಹಾಗೂ ರಕ್ಷಿಸಿ, ಜನತೆಯ ಕಲ್ಯಾಣವನ್ನು ಸಾಧಿಸಲು ಪ್ರಭುತ್ವವು ಯತ್ನಿಸತಕ್ಕದ್ದು ಹಾಗೂ ರಾಷ್ಟ್ರ ಜೀವನದ ಎಲ್ಲಾ ಸಂಸ್ಥೆಗಳಿಗೂ ತಿಳಿವು ಕೊಡುತ್ತದೆ ಎನ್ನುವ ಕಟ್ಟಳೆ ನಮ್ಮಲ್ಲಿ ಸಂವಿಧಾನದಲ್ಲಿ ನಮೂದಾಗಿದೆ. ಆದರೆ ಈ ವಿಷಯವನ್ನು ನಾವು ಈಗಿನ ಪರಿಸ್ಥಿತಿಯಲ್ಲಿ ಅವಲೋಕಿಸಿದಾಗ ಎಷ್ಟುಮಟ್ಟಿಗೆ ಕೇಂದ್ರ ಸರ್ಕಾರ ಸಂವಿಧಾನದಲ್ಲಿ ನಮೂದಿತವಾಗಿರತಕ್ಕ ಈ ವಿಶೇಷ ಧೋರಣೆಗೆ ತಕ್ಕಮಟ್ಟಿಗಾದರೂ ಕ್ರಮಬದ್ಧವಾಗಿ ನಡೆಯುತ್ತಿದೆ ಎನ್ನತಕ್ಕ ವಿಷಯವನ್ನು ನಾವು ಅವಲೋಕಿಸಿದಾಗ, ಈಗ ಕೇಂದ್ರ ಸರ್ಕಾರ ಮತ್ಸರದ, ಮಲತಾಯಿ ಧೋರಣೆಯನ್ನು ದಕ್ಷಿಣ ರಾಜ್ಯಗಳ ಮೇಲೆ, ತೆಗೆದುಕೊಳ್ಳುತ್ತಿದೆ, ಅದರಲ್ಲಿಯೂ ಮೈಸೂರಿನ ಬಗ್ಗೆ ಗಡಿ, ಹಣಕಾಸು ಹಾಗೂ ನದಿ ನೀರಿನ ವ್ಯವಹಾರದಲ್ಲಿ ಏನು ಮಹತ್ತರ ಅನ್ಯಾಯ ಮಾಡುತ್ತಿದೆ ಎನ್ನುವುದು ಎಲ್ಲರಿಗೂ ತಿಳಿದಿರತಕ್ಕ ವಿಷಯವಾಗಿದೆ. ಹಿಂದೆ ಒಂದು ಕಾಲವಿತ್ತು. ಈ ರಾಜ್ಯ ಮತ್ತು ಜನಗಳಲ್ಲಿ ಒಳಕಲಹ, ಇದರಿಂದಾಗಿ ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಬ್ರಿಟಿಷರ ಆಳ್ವಿಕೆಗೆ ನಾವು ಒಳಪಟ್ಟೆವು ಎಂದು ಭಾರತದ ಸ್ವಾತಂತ್ರ್ಯಕ್ಕಾಗಿ ಹಿಂದೆ ಶ್ರಮಿಸಿದಂಥ ನಾಯಕರು ಹೇಳುತ್ತಿದ್ದಾರೆ. ಈ ದಿನ ಕೇಂದ್ರ ಸರ್ಕಾರದ ಅಧಿಕಾರವಿರಲಿ, ಹೋಗಲಿ, ಇಡೀ ದೇಶದ ಸಮಗ್ರತೆಯನ್ನು ಕಾಪಾಡಿಕೊಂಡು, ಇಡೀ ದೇಶದ ಪ್ರಗತಿಯನ್ನು ಸಾಧಿಸಬೇಕು.

ಒಂದು ವಿಷಯವನ್ನು ಈ ದಿವಸ ಗಮನದಲ್ಲಿ ಇಟ್ಟುಕೊಳ್ಳಬೇಕಾಗಿದೆ. ಕೇಂದ್ರ ಸರಕಾರ ತನಗೆ ಇರತಕ್ಕಂಥ ಅಧಿಕಾರವನ್ನು ತಾನೇ ಉಳಿಸಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಿದೆ ಎನ್ನುವ ಮಾತನ್ನು ವಿರೋಧಪಕ್ಷದ ಸದಸ್ಯರಾದ ಶ್ರೀ ನಂಜೇಗೌಡರು ಹೇಳಿದರು. ಆ ಮಾತನ್ನು ಸಂಪೂರ್ಣವಾಗಿ ನಾನು ಈ ಸಂದರ್ಭದಲ್ಲಿ ಒಪ್ಪುತ್ತೇನೆ. ಈಗ ನಡೆಯುತ್ತಾ ಇರುವುದನ್ನು ನೋಡಿದರೆ ಮೈಸೂರು ರಾಜ್ಯ ಏನು ಬೇಕಾದರೂ ಆಗಲಿ, ಅಥವಾ ಮತ್ತೊಂದು ರಾಜ್ಯ ಏನುಬೇಕಾದರೂ ಆಗಲಿ, ಅದರ ಪ್ರಗತಿ ಕುಂದಿಹೋಗಲಿ ಅಥವಾ ಏನೇ ಅನ್ಯಾಯವಾಗಲಿ, ಕೇಂದ್ರದವರು ತಮ್ಮ ಪ್ರಭಾವ ಭದ್ರವಾಗಿ ಇರಬೇಕು ಎನ್ನುವ ನೀತಿಯನ್ನು ಅನುಸರಿಸುತ್ತಿದ್ದಾರೆ. ಇದುವರೆಗೆ ಗಡಿ

ಸಮಸ್ಯೆ ವಿಚಾರದಲ್ಲಿ ನಾವು ಸಾಕಷ್ಟು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇವೆ. ಈಗ ಗಡಿ ಸಮಸ್ಯೆ ಆಯಿತು. ನದಿ ವ್ಯವಹಾರವನ್ನು ತೆಗೆದುಕೊಂಡಿದ್ದಾರೆ. ನದಿ ವ್ಯವಹಾರದಲ್ಲಿ ಏನು ನಾವು ಕೆಲವು ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದೇವೋ ಅವರಲ್ಲಿ ಯಾವುದನ್ನೂ ಕೈಕೊಳ್ಳಬೇಡಿ ಎಂದು ಕೇಂದ್ರದಿಂದ ಒಂದು ಅಲ್ಟಿಮೇಟಂ ರೀತಿಯಲ್ಲಿ ಆದೇಶ ಬಂದಿದೆ ಇದನ್ನು ನೋಡುವಾಗ ಇದು ಸೋಜಿಗ ಮತ್ತು ವಿಷಾದದ ಸಂಗತಿ ಎಂದು ಹೇಳಬೇಕಾಗಿದೆ. ಕೇಂದ್ರದ ಅಪ್ಪಣೆ ಇಲ್ಲದೆ ಕೆಲವು ಪ್ರಾಜೆಕ್ಟುಗಳನ್ನು, ಅಣೆಕಟ್ಟುಗಳನ್ನು ಕಟ್ಟಿ ಮುಗಿಸಿದ್ದಾರೆ. ಆ ವಿಷಯದಲ್ಲಿ ಕೇಂದ್ರದಲ್ಲಿರುವ ಆಂಧ್ರದ ನೀರಾವರಿ ಮಂತ್ರಿಗಳು ಯಾವ ಒಂದು ಶಬ್ದವನ್ನೂ ಕೂಡ ಆಡಿಲ್ಲ. ಇಲ್ಲೇ ಹುಟ್ಟಿ ಹರಿಯುತ್ತಿರುವ ನದಿಗಳ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಹಕ್ಕಿಲ್ಲ, ಯೋಜನೆಗಳನ್ನು ಮಾಡುವುದಕ್ಕೆ ಹಕ್ಕಿಲ್ಲ ಎನ್ನತಕ್ಕ ಧಾಟಿಯಲ್ಲಿ ಇವೊತ್ತು ಕೇಂದ್ರ ಸರ್ಕಾರ ಹೋಗುತ್ತಾ ಇದೆ. ತಕ್ಷಣ ಅಂತಹ ಪ್ರಾಜೆಕ್ಟುಗಳನ್ನು ನಿಲ್ಲಿಸಬೇಕು ಅಥವಾ ನಿಲ್ಲಿಸಬಾರದು ಎನ್ನುವ ಧೋರಣೆಯನ್ನು ಕೇಂದ್ರಸರಕಾರ ಅನುಸರಿಸುತ್ತಿದೆ. ನಮ್ಮದು ಸಮತಾವಾದ ಸಮಾಜವಾದದ ನೀತಿ ಮತ್ತು ಕ್ರಾಂತಿಕಾರಕವಾದ ನೀತಿ ಮತ್ತು ಬಡವ ಬಲ್ಲಿದವರಿಗೆ ಭೇದವಿಲ್ಲದೆ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿ ಮಾಡಿ ಅವರನ್ನು ಮೇಲಕ್ಕೆ ಎತ್ತುವ ನೀತಿ ಎಂದು ಹೇಳಿ ಕೊಂಡು ಬರುತ್ತಿದ್ದಾರೆ. ಆ ಧೋರಣೆಗೆ ಅನುಗುಣವಾಗಿ ಕೇಂದ್ರ ಸರಕಾರದವರು ನದಿ ವಿವಾದವನ್ನು, ಗಡಿ ವ್ಯವಹಾರ ಮತ್ತು ಹಣಕಾಸಿನ ವ್ಯವಹಾರವನ್ನು ಇಡೀ ದಕ್ಷಿಣ ರಾಜ್ಯಗಳ ಬಗ್ಗೆ ಅದರಲ್ಲೂ ಮೈಸೂರಿನ ಬಗ್ಗೆ ಸಮತೋಲನ ದೃಷ್ಟಿಯಿಂದ ನಡೆಸುತ್ತಿದ್ದಾರೆಯೇ ಎನ್ನುವ ವಿಚಾರವನ್ನು ನಾವು ಬಹಳ ಗಹನವಾಗಿ ಮತ್ತು ಗಣನೀಯವಾಗಿ ಗಮನಿಸಬೇಕೆಂದು ಹೇಳುತ್ತೇನೆ. ಅದರಲ್ಲಿಯೂ ಹಣಕಾಸಿನ ಬಗ್ಗೆ ಮಾತನಾಡುತ್ತಾ ಅನೇಕ ಮಾನ್ಯ ಮಿತ್ರರು ಸಲಹೆಗಳನ್ನು ಮಾಡಿದ್ದಾರೆ. ಹಣಕಾಸಿನ ನಿಯೋಗ ಬಂದಾಗ ಅರ್ಥಸಚಿವರು ಮತ್ತು ಅರ್ಥಶಾಖೆಯ ಅಧಿಕಾರಿಗಳು ಅವರಲ್ಲಿಗೆ ಹೋಗಿ ಏನೇನು ಹೇಳಬೇಕೋ ಅವೆಲ್ಲವನ್ನು ಹೇಳಿದ್ದಾರೆ. ಈ ರಾಜ್ಯದ ಪರ್ ಕ್ಯಾಪಿಟಾ ಇನ್‌ಕಂ ಮತ್ತು ಅವರಿಗೆ ಬೇಕಾದ ಇತರ ಎಲ್ಲಾ ಅಂಶಗಳನ್ನು ಒದಗಿಸಿಕೊಟ್ಟಿದ್ದಾರೆ. ಹಿಂದೆ ನಾಲ್ಕನೆ ಪಂಚವಾರ್ಷಿಕ ಯೋಜನೆಗೆ ನಮ್ಮ ರಾಜ್ಯಕ್ಕೆ ಸುಮಾರು 420 ಕೋಟಿ ನಿಯೋಜಿತವಾಗಿತ್ತು. ಅದನ್ನು ಕೇಂದ್ರ ಸರಕಾರದವರು ಮತ್ತು ಯೋಜನಾ ಆಯೋಗ ಮಂಡಲಿಯವರು ನಿರ್ಧಾರ ಮಾಡದೆ ನಾನಾ ಕಾರಣಗಳಿಂದ ಅದನ್ನು ಮೊಟಕು ಮಾಡಿ ಬಹುಶಃ ಸ್ವಲ್ಪಮಟ್ಟಿಗೆ ಮೈಸೂರಿನ ಪ್ರಗತಿಗೆ ಕುಂದು ತರಬೇಕೆಂದು ಮಾಡುತ್ತಿದ್ದಾರೆಂದು ಕಾಣುತ್ತದೆ. ಮೈಸೂರಿನ ಪ್ರಗತಿ ಕುಂಠಿತವಾದರೆ ಇಡೀ ದೇಶದ ಪ್ರಗತಿ ಕುಂಠಿತವಾಗುತ್ತದೆ ಎನ್ನುವುದನ್ನು ಕೇಂದ್ರಸರಕಾರದವರು ತಿಳಿದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ. ಬ್ರಿಟಿಷ್ ಆಳ್ವಿಕೆ ಇದ್ದಾಗ ಮೈಸೂರಿನಲ್ಲಿ ಕೈಗಾರಿಕೆ ನಾನಾ ಭಾಗದಲ್ಲಿ ಪ್ರಗತಿಯನ್ನು ಸಾಧಿಸಿ ಮೈಸೂರು ಮಾದರಿಯ ರಾಜ್ಯ ಮತ್ತು ಮಾದರಿಯ ಸರಕಾರ ಎನ್ನತಕ್ಕಂಥ ಹೆಸರನ್ನು ಗಳಿಸಿದ್ದ ಕಾಲ ಇತ್ತು. ಆದರೆ ಮೈಸೂರಿನ ದುರ್ದೈವವೋ ಎನ್ನುವ ರೀತಿಯಲ್ಲಿ ಇತ್ತೀಚಿನ ದಿನಗಳಲ್ಲಿ ಯಾವ ವಿಧದಲ್ಲಿಯೂ ಕೈಗಾರಿಕೆ ಸ್ಥಾಪನೆಗೆ ಕೇಂದ್ರ ಸರಕಾರದಿಂದ ಸಹಕಾರ ದೊರಕುತ್ತಾ ಇಲ್ಲ. ಇವೊತ್ತು ನಮ್ಮ ದೇಶದಲ್ಲಿ ವಾಸ್ತವಿಕವಾಗಿ ನೈಜ ಸಂಪನ್ಮೂಲಗಳಿರುವುದರಿಂದ ಅನೇಕ ಕೈಗಾರಿಕೆಗಳನ್ನು ಇಲ್ಲಿ ಸ್ಥಾಪಿಸಬೇಕೆಂದು ಜಪಾನ್ ಮತ್ತು ಜರ್ಮನಿಯ ಕೈಗಾರಿಕೆಗಳು ಮುನ್ನುಗ್ಗಿ ಬರುತ್ತಿವೆ. ಆದರೆ ಈ ವಿಷಯದಲ್ಲಿ ಕೇಂದ್ರಸರಕಾರದಿಂದ ಯಾವ ವಿಧವಾದ ಅನುಕೂಲತೆಯೂ ನಮಗೆ ದೊರಕದೆ ಇರುವುದು ಬಹಳ ವಿಷಾದನೀಯ ಸಂಗತಿಯಾಗಿದೆ. ಇನ್ನು ಆಯವ್ಯಯದಲ್ಲಿ ನಮೂದಿಸಿರತಕ್ಕ ಪ್ರಗತಿ ವಿಷಯದಲ್ಲಿ ಸರಕಾರದವರು ಸಾಧಿಸಬೇಕಾದ ವಿಷಯಗಳನ್ನು ತಿಳಿಸಿ ನಮ್ಮ ನೀರಾವರಿ ಯೋಜನೆಗಳಿಗೆ ಸಾಕಷ್ಟು ಉತ್ತೇಜನ ಕೊಡುತ್ತಾ ಇರುವುದು ಸ್ವಾಗತಾರ್ಹ ವಾದ ಅಂಶ. ಅದರಲ್ಲಿ ಒಂದು ವಿಷಯ ಕಳವಳದಿಂದ ಹೇಳಬೇಕೆಂದರೆ ವಿದ್ಯುಚ್ಛಕ್ತಿ ಬಗ್ಗೆ ಏನಾದರೂ ಹೆಚ್ಚಿನ ತೆರಿಗೆ ಬೀಳುವುದಾದರೆ ನಿಜವಾಗಿ ರೈತರ ಮತ್ತು ನೀರಾವರಿ ಪ್ರಗತಿಗೆ ಅದರಿಂದ ಅಡಚಣೆ ಉಂಟಾಗುತ್ತದೆ ಎಂದು ಸರಕಾರದ ಗಮನಕ್ಕೆ ತರುತ್ತೇನೆ. ವ್ಯವಸಾಯದ ಪ್ರಗತಿಗೆ ಆದ್ಯತೆ ಮತ್ತು ಹೆಚ್ಚಿನ ಗಮನ ಕೊಡಬೇಕು ಎನ್ನುವ ನೀತಿ ಸರಕಾರದ್ದು ಆಗಿರುವಾಗ ಅದಕ್ಕೆ ಅಡ್ಡಿ ಬಾರದ ರೀತಿಯಲ್ಲಿ ಆರ್ಥಿಕ ನೀತಿಯನ್ನು ರೂಪಿಸಿಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಆಯವ್ಯಯ ಪಟ್ಟಿಯ ವಿಷಯದಲ್ಲಿ ಮಾತನಾಡುತ್ತಾ ನಾನು ಈ ಆಯವ್ಯಯವನ್ನು ವಿರೋಧ ಮಾಡುತ್ತೇನೆ. ಅದಕ್ಕೆ ಹಲವಾರು ಕಾರಣಗಳೂ ಇವೆ. ಭಾರತ ದೇಶ ಸುಮಾರು 85-90 ರಷ್ಟು ಬಡ ಜನರಿಂದ ಕೂಡಿರತಕ್ಕ ದೇಶ. ಇನ್ನು ಉಳಿದಿರತಕ್ಕ ಶೇಕಡಾ

(ಶ್ರೀ ಎಸ್. ಬಂಗಾರಪ್ಪ)

10 ಜನ ಐಶ್ವರ್ಯವಂತ ಜನರಿದ್ದಾರೆ. ನಮ್ಮ ದೇಶದ ಆಡಳಿತವನ್ನು ಪ್ರಜಾಸತ್ತೆಯ ಹೆಸರಿನಲ್ಲಿ ನಡೆಸುತ್ತಿದ್ದೇವೆ. ಪ್ರಜಾಸತ್ತೆ ಜನತೆಯ ಹೆಸರಿನಲ್ಲಿ ನಡೆಯಬೇಕಾದರೆ, 100 ಕ್ಕೆ 90 ರಷ್ಟು ಇರುವ ಬಡ ಜನರ ಕುರಿತು ಕಾನೂನು ರಚನೆ ಆಗಬೇಕು ಮತ್ತು ಆಯವ್ಯಯ ಅಂದಾಜು ಪಟ್ಟಿ ತಯಾರಾಗಬೇಕು ; ಹಾಗೂ ದೇಶದ ಆಡಳಿತ ಈ ಒಂದು ಜಾಡನ್ನು ಹಿಡಿದು ಹೋಗಬೇಕಾಗಿದೆಯೇ ವಿನಹ ಶೇಕಡಾ 10 ಜನ ಐಶ್ವರ್ಯವಂತರ ಜೀವನಕ್ಕಾಗಿ ಅವರ ಭೋಗ್ಯವಸ್ತುವಾಗಿ 100 ಕ್ಕೆ 90 ರಷ್ಟು ಜನ ಬಡ ಜನರು ಇರಬಾರದು. ನಾವ ದೇಶದ ಉದ್ಧಾರವನ್ನು ಕಣ್ಣಿನಿಂದ ನೋಡಬೇಕು ಎನ್ನುವ ಆಸೆಯನ್ನು ಇಟ್ಟುಕೊಳ್ಳಬೇಕಾದರೆ ನಾವು ಯಾವಾಗಲೂ ಹೆಚ್ಚಿನ ಸಂಖ್ಯೆಯಲ್ಲಿರುವ ಜನತೆಯ ಗೋಳನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಮತ್ತು ಆ ಒಂದು ದೃಷ್ಟಿಯಿಂದ ನಮ್ಮ ಆರ್ಥಿಕ ವ್ಯವಸ್ಥೆಯನ್ನು ನಿರೂಪಣೆ ಮಾಡಬೇಕಾಗಿದೆ. ಶೇಕಡಾ 90 ರಷ್ಟು ಬಡಜನರನ್ನು ಕುರಿತು ಯೋಚನೆ ಮಾಡಿ ಅಂದಾಜು ಪಟ್ಟಿಯನ್ನು ತಯಾರು ಮಾಡಬೇಕಾಗುತ್ತದೆ. ಸ್ವಾಮಿ, ನಾನು ಈ ಸದನದ ಮೂಲಕ ಸರಕಾರಕ್ಕೆ ಜವಾಬ್ದಾರಿಯನ್ನು ಹೊತ್ತಿರತಕ್ಕ ಜನರಿಗೆ ಒಂದು ವಿಷಯವನ್ನು ನೆನಪು ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಸ್ವಾತಂತ್ರ್ಯ ಬಂದಲಾಗಾಯ್ತು ಅದನ್ನು ನಾವು ನೆನಪುಮಾಡಿಕೊಳ್ಳುತ್ತಾ ಬರುತ್ತಿದ್ದೇವೆ. 100ಕ್ಕೆ 90 ರಷ್ಟು ಜನ ಇರುವ ಬಡ ಜನತೆಯ ಪ್ರತಿನಿಧಿಯಾಗಿ ಸರಕಾರ ಕೆಲಸಮಾಡುತ್ತಿಲ್ಲವೆಂದು ಹೇಳುತ್ತಾ ಬಂದಿದ್ದೇವೆ. ಈ ಬಜೆಟ್ಟನ್ನು ಸಂಪೂರ್ಣವಾಗಿ ಆಮೂಲಾಗ್ರವಾಗಿ ಓದಿದ್ದೇನೆ. ಉದಾಹರಣೆಗೆ ಭಾರತ ದೇಶದಲ್ಲಿ ಯಾವುದೇ ರಾಜ್ಯದ ಆರ್ಥಿಕ ಮಂತ್ರಿಯಾಗಲಿ ಅಥವಾ ಕೇಂದ್ರದ ಮಂತ್ರಿಯಾಗಲಿ ಹೆಚ್ಚಿನ ವ್ಯವಸಾಯವನ್ನು ಅವಲಂಬನೆ ಮಾಡಿರತಕ್ಕ ಜನರ ಕುರಿತು ಅಥವಾ ಜಮೀನ ಹಂಚಿಕೆ ಕುರಿತು ಅವರು ಒಂದು ಮಾತನ್ನು ಆಡಬೇಕಾಗಿತ್ತು.

10-00 A.M.

ನಾನು ಸಂಪೂರ್ಣವಾಗಿ ಈ ಬಜೆಟ್‌ನ್ನು ಓದಿದಾಗ ಒಂದು ಮಾತೂ ಕೂಡ ಹಣಕಾಸಿನ ಸಚಿವರ ಬಾಯಲ್ಲಿ ಬಂದಿಲ್ಲ, ಜೊತೆಗೆ ಬಹಳ ಜಮೀನು ಇವೆ ಎಂದು ಹೇಳುತ್ತಾ ಇದ್ದಾರೆ, ತಾಲ್ಲೂಕು ಕಮಿಟಿಯನ್ನು ಮಾಡುತ್ತೇವೆ ಅಂತ ಅನ್ನುವುದರ ಅರ್ಥ ಏನು ? ಜಮೀನು ಹಂಚಿಕೆ ಮಾಡತಕ್ಕ ವಿಚಾರಕ್ಕೆ ಸಂಪೂರ್ಣ ಗಮನ ಕೊಟ್ಟಿದ್ದಾರೆ ಅಂತ ಹೇಳಿದ ಮೇಲೆ ಜಮೀನು ಹಂಚಿಕೆ ಮಾಡುವುದಕ್ಕೆ ಲಕ್ಷಾಂತರ ಎಕರೆ ಜಮೀನು ಇದೆ ಅಂತ ಆಯಿತು, ಹಾಗಿರುವಾಗ ಈ ಜನಗಳ ಬಗ್ಗೆ ಒಂದು ಮಾತನ್ನೂ ಬರೆದಿಲ್ಲ ಎಂದಮೇಲೆ ಇದನ್ನು ವಿರೋಧ ಮಾಡದೇ ಏನು ಮಾಡಲಿ ಎಂದು ಈ ಸದನದ ಮುಂದೆ ಹೇಳಲು ಇಷ್ಟಪಡುತ್ತೇನೆ. ಅಷ್ಟೇ ಅಲ್ಲ ಪ್ರಜಾಸತ್ತೆ ಬೆಳೆಯಬೇಕೆಂಬ ಆಶೆ ಇರುವುದಾದರೆ ಪಬ್ಲಿಕ್ ಸೆಕ್ಟರ್ ಮತ್ತು ಪ್ರೈವೇಟ್ ಸೆಕ್ಟರ್ ವಿಷಯವನ್ನೂ ಕೂಡ ಆಲೋಚನೆ ಮಾಡಬೇಕಾಗುತ್ತದೆ. ಖಾಸಗಿ ವಲಯಗಳು ಸುಮಾರಾಗಿ ದೇಶದಲ್ಲಿ ಶೇಕಡ 95 ರಷ್ಟು ಆಡಳಿತವನ್ನು ಬಿಗಿ ಹಿಡಿದಿವೆ. 22ನೇ ಪುಟದಲ್ಲಿ ಎಂಟು ಮಧ್ಯಮಗಳು ಎಂದರೆ ಎಂ.ಎಸ್.ಇ.ಬಿ, ರೆಮ್ಕೊ, ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಎನ್.ಜಿ.ಇ.ಎಫ್., ಎಂ.ಎಸ್.ಕೆ.ಮಿಲ್ಸ್ ಇತ್ಯಾದಿಗಳು ಬಹಳ ಕಷ್ಟದಲ್ಲಿ ಇವೆ, ಇವುಗಳು ಬಹಳ ನಷ್ಟದಲ್ಲಿ ನಡೆಯುತ್ತಾ ಇವೆ, ಮೈಸೂರು ಸಕ್ಕರೆ ಕಂಪನಿ ಮಾತ್ರ ಈ ಬಿಕ್ಕಟ್ಟನ್ನು ದಾಟಿ ಲಾಭದಾಯಕವಾದ ರೀತಿಯಲ್ಲಿ ನಡೆಯುತ್ತಿರುವುದು ಸಂತೋಷದ ವಿಷಯ ಎಂದು ಹೇಳಿದ್ದಾರೆ. ನಮ್ಮ ದೇಶದ ಆಡಳಿತವನ್ನು ತೆಗೆದುಕೊಂಡ 22 ವರ್ಷದ ಮೇಲೆ ಈಗ ಈ ಸಕ್ಕರೆ ಕಂಪನಿಯಲ್ಲಿ ಲಾಭವನ್ನು ತೋರಿಸುತ್ತಾ ಇದ್ದೀರಿ. ಈ ಸಾರ್ವಜನಿಕ ವಲಯಗಳಲ್ಲಿರತಕ್ಕ ಈ ಆಸ್ತಿಗಳು ನಿಮ್ಮ ಏನಿವೆ ದುರಾಡಳಿತದ, ಕೆಟ್ಟ ಆಡಳಿತದ, ನೀತಿಯ ಪರಿಣಾಮವಾಗಿ ಇವತ್ತು ನಾವು ಅದರಲ್ಲಿ ಬಹಳ ನಷ್ಟವನ್ನು ಕಾಣುತ್ತಾ ಇದ್ದೇವೆ. ಈ ನಷ್ಟದಿಂದ ಜನತೆಯಲ್ಲಿ ಒಂದು ಅಪನಂಬಿಕೆ ಉಂಟಾಗಿ ಹೊರಗಡೆ ಎಲ್ಲೆಲ್ಲೂ ಮಾತನಾಡುತ್ತಾ ಇದ್ದಾರೆ, ಟಾಟಾಸ್, ಬಿರ್ಲಾಸ್ ಕಂಪೆನಿಗಳು ಬೇಕಾದಷ್ಟು ಇವೆ. ಅಂತಹವರು ನೂರಕ್ಕೆ ಹತ್ತು ಜನರು ಇದ್ದರೂ ಕೂಡ ಅವರೇ ಸಾಕು, ಇಡೀ ದೇಶವನ್ನು ಆಳತಕ್ಕ ಶಕ್ತಿಯನ್ನು ಪಡೆದಿದ್ದಾರೆ ಎಂದು ಅನ್ನತಕ್ಕ ಮಾತನ್ನು ನಿಮ್ಮ ದುರಾಡಳಿತದ ಫಲವಾಗಿ ಇವತ್ತು ಸಾರ್ವಜನಿಕರಿಂದ ಕೇಳುತ್ತಾ ಇದ್ದೇವೆ. 22 ವರ್ಷದ ಕೆಟ್ಟ ಆಡಳಿತದ ಪರಿಣಾಮವಾಗಿ ನೀವು ಮಾಡಿರತಕ್ಕ ಅನ್ಯಾಯದ ಫಲ. ನಿಮ್ಮ ಕೈಯಲ್ಲಿ ಈ ರಾಜ್ಯದ ಆಡಳಿತವನ್ನು ಇನ್ನು 50 ವರ್ಷ ಅಲ್ಲ ಒಂದು ಶತಮಾನ ಕೊಟ್ಟರೂ ಕೂಡ ಸರಿಯಾದ ರೀತಿಯಲ್ಲಿ ಆಡಳಿತವನ್ನು ಇಟ್ಟುಕೊಂಡು ಸರ್ಕಾರ ನಡೆಸತಕ್ಕ ಜನ ಅಲ್ಲ ನೀವು. ಪ್ರಜಾಸತ್ತೆಗೆ ನೀವು ದ್ರೋಹ ಮಾಡದೇ ಏನೂ ಮಾಡುವುದಕ್ಕೆ ನಿಮ್ಮಿಂದ ಸಾಧ್ಯವಿಲ್ಲ ಎಂಬುದನ್ನು ಜನತೆ ತೀರ್ಮಾನ

Bangalore Date.... No

ಮಾಡಿದೆ. 1972ನೇ ಸಾಲಿನವರಿಗೂ ನಮಗೆ ನಮ್ಮಲ್ಲಿ ಉತ್ಪಾದನೆಯಾಗತಕ್ಕ ವಿದ್ಯುಚ್ಛಕ್ತಿ ಉಪಯೋಗಕ್ಕೆ ಬರುತ್ತದೆ, ಆನಂತರ ಯೋಚನೆ ಮಾಡಬೇಕಾಗುತ್ತದೆ ಎಂಬ ವಿಷಯವನ್ನು ತಿಳಿಸಿದ್ದಾರೆ ಇದು ಸತ್ಯಕ್ಕೆ ದೂರವಾದ ಮಾತು. ಏಕೆಂದರೆ ಆಂಧ್ರ, ಗೋವಾ ಮತ್ತು ಇನ್ನಿತರ ಕಡೆಗಳಿಗೆ ಏನು ಪವರ್ ಸಪ್ಲೈ ಮಾಡುತ್ತೇವೆ ಎಂದು ಅಗ್ರಿಮೆಂಟ್ ಮಾಡಿಕೊಂಡಿದ್ದೇವೆ ಅದನ್ನು ಕೊಟ್ಟ ಕೂಡಲೇ ನಮಗೆ ಪವರ್ ಸಪ್ಲೈ ಸಾಕಾಗುವುದಿಲ್ಲ, ಸ್ಟಾಕ್ ಉಳಿಯುವುದಿಲ್ಲ ಎಂಬ ಮಾತನ್ನು ಇದಕ್ಕೆ ಸಂಬಂಧಪಟ್ಟ ಚೀಫ್ ಇಂಜಿನಿಯರು ಹೇಳಿದ್ದಾರೆ. ಇದನ್ನು ನಾವು ಕೆಲವು ಪತ್ರಿಕೆಗಳಲ್ಲಿ ಓದಿದ್ದೇವೆ. 72ರ ವರೆಗೂ ಕಾಯಬೇಕಾದ್ದಿಲ್ಲ. ಆದ್ದರಿಂದ ಈ ಬಡ್ಜೆಟ್‌ನಲ್ಲಿ ಹೇಳಿರತಕ್ಕ ಮಾತಿಗೂ ಚೀಫ್ ಇಂಜಿನಿಯರವರು ಹೇಳಿರತಕ್ಕ ಮಾತಿಗೂ ಸಂಪೂರ್ಣ ವಿರೋಧವಾಗುತ್ತದೆ. ಕಾಳಿ ನದಿ ಪ್ರಾಜೆಕ್ಟ್‌ನ್ನು ಹಂತ ಹಂತವಾಗಿ ತೆಗೆದುಕೊಂಡು ತಕ್ಷಣದಲ್ಲೇ ಮಾಡುವುದಾದರೆ ನಮ್ಮ ಡಿಮ್ಯಾಂಡ್‌ನ್ನು ಪೂರೈಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ನಮಗೆ ವಿದ್ಯುಚ್ಛಕ್ತಿ ಕಡಿಮೆ ಬೀಳುತ್ತದೆ.

ಇನ್ನು ವ್ಯವಸಾಯದ ಬಗ್ಗೆ ಈಗಾಗಲೇ ನೀರಾವರಿಗಾಗಿ ಹಲವಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಹಸಿರು ಕ್ರಾಂತಿ ಮಾಡಬೇಕೆಂದು ಹೇಳಿ ಬಡವರ ಹೆಸರಿನಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಸೃಷ್ಟಿಮಾಡಿದಿರಿ, ಬಡವರ ಹೆಸರಿನಲ್ಲಿ ಹಲವಾರು ದೇಶಗಳಿಂದ ಸಾಲವನ್ನು ತಂದಿದ್ದೀರಿ. ವರ್ಲ್ಡ್ ಬ್ಯಾಂಕ್‌ನಿಂದ ಕೂಡ ಸಾಲ ತಂದಿದ್ದಾಗಿದೆ. ಪಾಶ್ಚಿಮಾತ್ಯ ದೇಶಗಳು, ಪೌರ್ವಾತ್ಯ ದೇಶಗಳು ಎಲ್ಲ ಕಡೆಯಿಂದಲೂ ಸಾಲ, ಎಷ್ಟೇ ತಂದರೂ ಕೂಡ ನಮ್ಮ ಸರ್ಕಾರ ಬಕಾಸುರನ ಜಾತಿಗೆ ಸೇರಿದ್ದು, ಎಷ್ಟು ಕೊಟ್ಟರೂ ಇನ್ನೂ ಸಾಲದು ಎಂಬ ಮಾತು ಬರುತ್ತಿದೆಯೇ ಹೊರತು ಹಸಿರು ಕ್ರಾಂತಿಯನ್ನು ನಮ್ಮ ಮೈಸೂರು ರಾಜ್ಯದಲ್ಲಿ ಮಾಡಲಿಕ್ಕೆ ಆಗಲಿಲ್ಲ. ನೀರಾವರಿ ಹತ್ತು ಪರ್ಸೆಂಟ್ ಕೂಡ ಆಗಿಲ್ಲ. ಮುಂದೆ ನೀವು ಮಾಡತಕ್ಕ ಯೋಜನೆಗಳಿಂದ 20 ಪರ್ಸೆಂಟ್‌ಗೆ ಹೋಗಬಹುದು, ಆಗಲೂ ಕೂಡ 80 ಪರ್ಸೆಂಟ್ ಹಾಗೆಯೇ ಉಳಿಯುತ್ತದೆ. ನಮ್ಮ ಅಕ್ಕಪಕ್ಕದ ರಾಜ್ಯಗಳಾದ ಮದ್ರಾಸು, ಆಂಧ್ರಪ್ರದೇಶಗಳಿಗೆ ನಮ್ಮ ದೇಶವನ್ನು ಹೋಲಿಸಿದರೆ ನಾವು ಬಹಳ ಹಿಂದೆ ಉಳಿದಿದ್ದೇವೆ, ಹತ್ತು ಪರ್ಸೆಂಟು ಅಂತ ಹೇಳಿಕೊಳ್ಳುವುದು ಬಹಳ ನಾಚಿಕೆಯಾಗುತ್ತದೆ.

ಇನ್ನು ಪರ್‌ಕ್ಯಾಪಿಟಾ ಇನ್‌ಕಂ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ಹಲವಾರು ಕೋಟಿ ರೂಪಾಯಿಗಳನ್ನು ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್‌ನಲ್ಲಿ ಖರ್ಚು ಮಾಡುತ್ತಾ ಇದ್ದೀರಿ. ಸಾಕಾದಷ್ಟು ಪ್ರಮಾಣದಲ್ಲಿ ಶ್ರೀಮಾನ್ ಸಿದ್ದವೀರಪ್ಪನವರೂ ಕೂಡ ಈ ಬಗ್ಗೆ ಮಾತನಾಡಿದ್ದಾರೆ. ನಿಮ್ಮ ಕೈಯಲ್ಲಿ ಕೊಟ್ಟಿರತಕ್ಕ ಹಣವನ್ನು ಜನತೆಯ ಹೆಸರಿನಲ್ಲಿ ಸಂಪೂರ್ಣವಾಗಿ ಖರ್ಚು ಮಾಡಿ ಇವತ್ತು ಈ ಮೂವ್‌ಮೆಂಟು ಸಂಪೂರ್ಣವಾಗಿ ಫೇಲ್ ಆಗಿದೆ. ಯಾವುದೇ ಕೋ-ಆಪರೇಟೀವ್ ಮೂವ್‌ಮೆಂಟ್ ಮಾಡಲಿಕ್ಕೆ ನಿಮ್ಮ ಕೈಯಲ್ಲಿ ಹಣ ಕೊಡತಕ್ಕ ಪರಿಸ್ಥಿತಿಯಲ್ಲಿ ನಾವು ಇಲ್ಲ. ಇದರಲ್ಲಿ ಫೇಲ್ ಆಗಿದ್ದೇವೆ ಅಂತ ಅನುಭವ ಅಂಶವನ್ನು ಮಾನ್ಯ ಹಣಕಾಸಿನ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ನೀವೇ ಒಪ್ಪಿಕೊಂಡಿರತಕ್ಕ ತಪ್ಪು, ಈ ತಪ್ಪು ದಾರಿ ಏನಿದೆ ಇದನ್ನು ಮುಂದುವರಿಸುತ್ತೀರಾ ಎಂದು ನಾನು ಅವರನ್ನು ಕೇಳುತ್ತೇನೆ. ಅಥವಾ ಇದನ್ನು ಸರಿಯಾದ ರೀತಿಯಲ್ಲಿ ನಡೆಸತಕ್ಕ ಏನಾದರೂ ಯೋಚನೆ ಮಾಡಿದ್ದೀರಾ ? ಮುಂದೆ ಏನು ಮಾಡಬೇಕೆಂದಿದ್ದೀರಿ ಎಂಬ ಸೂಚನೆ ಯಾವುದೂ ಕೂಡ ಇದರಲ್ಲಿ ಇಲ್ಲ.

ಇನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ಬಗ್ಗೆ ಇಷ್ಟೊಂದು ಹಣ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ, ಇದನ್ನು ಯಾರಿಗಾಗಿ ಖರ್ಚು ಮಾಡಿದ್ದೀರಿ ಎಂದರೆ ಯಾರೋ ಕೆಲವರ ಮೇಲೆ ಮಾಡಿದ್ದೀರಿ ಎಂದು ನಾನು ಹೇಳಬೇಕಾಗುತ್ತದೆ. ಉದಾಹರಣೆಗೆ ಒಬ್ಬ ಡೆಪ್ಯೂಟಿ ಕಮೀಷನರು ಹರಿಜನರು ಇದ್ದಾರೆ. ಅವರು ಯಾವ ರೀತಿಯ ಒಂದು ಪರಿಸ್ಥಿತಿಯಲ್ಲಿ ಇದ್ದಾರೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಅವರು ಹರಿಜನರು ಸಾಮಾನ್ಯರು ಯಾರಿದ್ದಾರೆ ಅವರ ಪರಿಸ್ಥಿತಿಯಲ್ಲಿ ಇಲ್ಲ. ಸೆಕ್ರೆಟರಿ ಲೆವಲ್‌ನಲ್ಲಿ ಈ ವಿಧಾನ ಸೌಧದಲ್ಲಿ ಯಾರಾದರೂ ಒಬ್ಬರು ಹರಿಜನರು ಇದ್ದಾರೆ ಅಂತ ಇಟ್ಟುಕೊಳ್ಳೋಣ, ಅವರು ಹಿಂದುಳಿದ ವರ್ಗದವರಿಗೆ ಸೇರಿದವರೇ ನಿಜ. ಆದರೆ ನನ್ನ ಅಭಿಪ್ರಾಯದಲ್ಲಿ ಅವರು ಈಗ ಇರತಕ್ಕ ಪರಿಸ್ಥಿತಿಯನ್ನು ನೋಡಿದರೆ ಬಹಳ ಮುಂದುವರಿದ ಬ್ರಾಹ್ಮಣರಾಗಲಿ, ಲಿಂಗಾಯಿತ ಜಾತಿಗೆ ಸೇರಿದವರಾಗಲಿ ಅವರಿಗಿಂತ ಯಾವ ರೀತಿಯಲ್ಲೂ ಕಡಿಮೆ ಇಲ್ಲ. ನಿಜವಾಗಿಯೂ ಹರಿಜನರ ಜಾತಿಗೆ ಅವರು ಸೇರಿಲ್ಲ. ಅವರಿಗೆ ನೀವು ಇಲ್ಲಿಯುವರೆಗೂ ಕೊಟ್ಟಂಥ ಸೌಲಭ್ಯ ಸಮರ್ಪಕವಾದ ರೀತಿಯಲ್ಲಿ ಉಪಯೋಗವಾಗದೇ ಯಾರು ಬೆಂಗಳೂರು

(ಶ್ರೀ ಎಸ್, ಬಂಗಾರಪ್ಪ)

ನಗರದಲ್ಲಿ ಇದ್ದಾರೆ ಅವರಿಗೆ ಸೈಟುಗಳ ಹಂಚಿಕೆ, ಸೌಧಗಳ ನಿರ್ಮಾಣವಾಗಿ ಅವರಿಗೆ ಒಂದು ಲಿಂಗಧಾರಣೆ ಇಲ್ಲ, ಅಥವಾ ಒಂದು ಜನಿವಾರ ಇಲ್ಲ, ಇಂತಹ ಒಂದು ಮುಂದುವರಿದ ರೀತಿಯಲ್ಲಿ ಇರುವವರನ್ನು ಯಾವ ರೀತಿ ಹರಿಜನ ಎಂದು ಕರೆಯಬೇಕೋ ನನಗಂತೂ ಗೊತ್ತಾಗುತ್ತಿಲ್ಲ. ಹರಿಜನರಿಗೆ ರಾಜ್ಯಾಂಗ ದತ್ತವಾಗಿ ಸೌಲಭ್ಯಗಳನ್ನು ಮುಂದುವರಿಸಲು ದಾರಿ ಮಾಡಿಕೊಟ್ಟುಬಿಟ್ಟಿದ್ದಾಯಿತು. ಅದರ ದುರುಪಯೋಗ ಸುಲಲಿತವಾಗಿ, ಅವ್ಯಾಹತವಾಗಿ ಸಾಕಾದಷ್ಟು ಪ್ರಮಾಣದಲ್ಲಿ ಆಗುತ್ತಾ ಇರುವುದು ನಿಂತಿಲ್ಲ. ಹರಿಜನರಾಗಿಯೇ ಉಳಿದಿರುವಂತಹ ಹರಿಜನರು ಕೆಳಮಟ್ಟದಲ್ಲಿಯೇ ಇದ್ದು ಸಾಯುತ್ತಾ ಇದ್ದಾರೆ, ಇದರ ಬಗ್ಗೆ ಯೋಚನೆ ಮಾಡತಕ್ಕ ಬುದ್ಧಿ ಹರಿಜನರ ಕೋಮಿಗೆ ಸೇರಿದ ಈ ಜನರ ತಲೆಯಲ್ಲಿ ಇಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅವರ ತಪ್ಪನ್ನು ರಾಜ್ಯ ಸರ್ಕಾರದವರ ಅರಿಯಬೇಕು, ಕಡಿವಾಣ ಹಾಕಬೇಕು, ಬಡವರಿಗೆ ಮೀಸಲಾಗಿಟ್ಟಿರುವುದು ದುರುಪಯೋಗವಾಗಲು ಅವಕಾಶ ನೀಡಬಾರದು. ಜಾತಿಯ ಹೆಸರಿನಲ್ಲಿ ಬೇಕಾದಷ್ಟು ಅನ್ಯಾಯವಾಗುತ್ತಿದೆ. ಜಾತಿಯ ಹೆಸರಿನಲ್ಲಿ ಹಾಸ್ಟಲುಗಳಿಗೆ ಹೆಸರಿಡಬಾರದು, ಸಾರ್ವಜನಿಕ ಹಾಸ್ಟಲುಗಳು ಎಂದು ಕರೆಯಬೇಕು, ಆ ಬಗ್ಗೆ ಕಾನೂನು ಮಾಡಲು ಇನ್ನೂ ಆಗಿಲ್ಲ, ವಕ್ಕಲಿಗರ ಹಾಸ್ಟಲ್, ಈಡಿಗ ಹಾಸ್ಟಲ್, ಲಿಂಗಾಯಿತರ ಹಾಸ್ಟಲ್ ಎಂದು ಬೋರ್ಡ್ ಹಾಕುವುದಕ್ಕೆ ನಾಚಿಕೆಯಾಗುವುದಿಲ್ಲವೇ? ಸ್ವಾತಂತ್ರ್ಯ ಬಂದು 22 ವರ್ಷವಾದರೂ ಕೋಮುಗಳ ಹೆಸರಿನಲ್ಲಿ ವಿದ್ಯಾರ್ಥಿನಿಲಯಗಳನ್ನು ನಡೆಸಿ ಜಾತಿಯ ಸೋಂಕನ್ನು ಲೇಪಿಸುವುದು ಇನ್ನೂ ರೂಢಿಯಲ್ಲಿದೆ. ಈ ರೀತಿ ಮಾಡಿದರೆ ಮುಂದಿನ ಪ್ರಜೆಗಳಾದ ಮಕ್ಕಳ ಮೇಲೇನು ಪರಿಣಾಮವಾಗುವುದು ಎಂಬುದನ್ನು ಯೋಚನೆ ಮಾಡಬೇಕು. ದೇಶ ನಿಮ್ಮ ಕೈಗೆ ಸಿಕ್ಕಿ ಹಾಳಾಗಿದೆ, ಉದಾಹರಣೆಗಳನ್ನು ಬೇಕಾದಷ್ಟು ಕೊಡಬಹುದು. ಹರಿಜನರಿಗೆ ಸೌಲಭ್ಯ ಸಿಕ್ಕಲೇಬೇಕು. ಅವರು ಮುಂದುವರಿಯಬೇಕು. ಆದರೆ ಹಣ ಅವರ ಹೆಸರಿನಲ್ಲಿ ಕೊಡುವುದು ದುರುಪಯೋಗವಾಗಿ ಕೆಲವರು ಉದ್ಧಾರವಾಗುತ್ತಿದ್ದಾರೆ, ಹೀಗಾಗದಂತೆ ಬಿಗಿ ಇರಬೇಕು.

ಈಗ ಭೂ ಸುಧಾರಣೆಯನ್ನು ಜಾರಿಗೆ ಕೊಟ್ಟಾಗಿದೆ, 8ನೆಯ ಸೆಕ್ಷನ್ ಪ್ರಕಾರ ಟೆನೆಂಟಿನಿಂದ ಲ್ಯಾಂಡ್‌ಲಾರ್ಡ್ ರೆಂಟ್ ವಸೂಲುಮಾಡಿಕೊಳ್ಳಬೇಕು ಎಂಬ ನಿಯಮವಿದೆ. ಬಾಂಬೆ ಟೆನೆನ್ಸಿ ಆಕ್ಟ್‌ನಲ್ಲಿ ಕಂದಾಯದ 5ರಷ್ಟು ಅಂದರೆ ಎಕರೆಗೆ 20 ರೂಪಾಯಿನವರೆಗೆ ಗೇಣಿದಾರ ಕೊಡಬೇಕು. ಸೆಕ್ಷನ್ ೬ರ ಪ್ರಕಾರ ಕಾಲು ಭಾಗ, ಐದನೆ ಒಂದು ಭಾಗ ಕೊಡಬೇಕೆಂದು ಇಲ್ಲ ಗೊತ್ತುಮಾಡಿರುವುದರಿಂದ ಬೊಂಬಾಯಿ ಪ್ರದೇಶದ ಟೆನೆಂಟ್ಸ್ 4 ಕ್ವಿಂಟಾಲು ಕೊಡಬೇಕಾಗಿದೆ. ಅಂದರೆ ಎಕರೆಗೆ 200 ರೂಪಾಯಿ ಮೇಲ್ಪಟ್ಟು ಕೊಡಬೇಕಾಗಿದೆ. ಹೀಗಾದರೆ ಇದು ಪ್ರೋಗ್ರೆಸಿವ್ ಆಗಿದೆಯೇ? ಮುಂಬಯಿ ಕಾನೂನು ಪ್ರೋಗ್ರೆಸಿವ್ ಆಗಿತ್ತು, ಅಲ್ಲಿನವರಿಗೆ ಇದ್ದ ಸೌಲಭ್ಯ ಕಸಿದುಕೊಂಡು ಹೆಚ್ಚು ಗೇಣಿ ಕೊಡಬೇಕೆಂದು ಮಾಡಿರುವ ಭೂ ಸುಧಾರಣೆ ಕಾನೂನು ಪ್ರೋಗ್ರೆಸಿವ್ ಹೇಗಾದೀತು? ಆದುದರಿಂದ ಭೂ ಸುಧಾರಣೆ ಕಾನೂನನ್ನು ತಿದ್ದುಪಡಿ ಮಾಡಿ ಒಂದು ಮಸೂದೆ ತರಬೇಕೆಂದು ಒತ್ತಾಯಮಾಡುತ್ತೇನೆ.

ಇನ್ನು ಕೊನೆಯ ವಿಷಯ. ಬೌಂಡರಿ ಡಿಸ್‌ಪ್ಯೂಟ್ ಬಗ್ಗೆ ಒಂದು ಮಾತು. ಇಂಡಿಕೇಟ್ ಬಗ್ಗೆ ಹೇಳಬೇಕಾಗಿದೆ. ಈ ಬೌಂಡರಿ ವಿಚಾರವನ್ನು ದಿವಂಗತ ನೆಹರೂರವರ ಕಾಲದಲ್ಲೇ ಇತ್ಯರ್ಥಮಾಡಬಹುದಾಗಿತ್ತು. ಆಗ ಅಷ್ಟು ಜಗಳಕ್ಕೆ ಅವಕಾಶವಿರಲಿಲ್ಲ, ಹೇಗಾದರೂ ಜನರನ್ನು ಒಪ್ಪಿಸಬಹುದಾಗಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಅದರ ಪರಿಣಾಮವಾಗಿ ಮೈಸೂರು ಮಹಾರಾಷ್ಟ್ರದ ವಿಚಾರಕ್ಕೇ ಒಂದು ಸಮಿತಿ, ಮದ್ರಾಸು ಮೈಸೂರುಗಳಿಗೆ ಸಂಬಂಧಿಸಿದಂತೆ ಒಂದು ಸಮಿತಿ ಹೀಗೆ ಪ್ರತಿಯೊಂದಕ್ಕೂ ಬೇರೆ ಬೇರೆ ಸಮಿತಿ ಮಾಡಬೇಕಾಗಿದೆ. ಹೀಗೆ ಐವತ್ತೆಂಟು ಸಮಿತಿ ಮಾಡಬೇಕಾಗಿ ಬಂದಿದೆ. ಹಿಂದೆ ಮಹಾಜನ್ ಕಮಿಷನ್ ಆಗಬೇಕೆಂದು ಎಲ್ಲರೂ ಒಪ್ಪಿದರು ಆಗ ಕಾಂಗ್ರೆಸ್ ಸಂಸ್ಥೆಯಲ್ಲಿ ಒಡಕುಂಟಾಗಿರಲಿಲ್ಲ, ಮಹಾಜನ್ ಕಮಿಷನ್ ವರದಿಯನ್ನು ಅವಾರ್ಡ್ ಎಂದು ಎಲ್ಲರೂ ಒಪ್ಪಿಕೊಳ್ಳಬೇಕೆಂದು ಕಾಂಗ್ರೆಸ್ಸಿನವರೆಲ್ಲರೂ ಹೇಳುತ್ತಿದ್ದರು. ಮಹಾರಾಷ್ಟ್ರ ಸರಕಾರ ಈಗ ಹಿಂದೆ ಹೋಗಿದೆ. ವೀರೇಂದ್ರ ಪಾಟೀಲರು ಸರಿಯಾಗಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಸಭೆಯ ಮುಂದೆ ಸೂಚನೆ ಬಂದಾಗ ನಿರ್ಣಯ ಬಂದಾಗ ಹಿಂದೆ ಎಲ್ಲರೂ ಏಕ ಕಂಠದಿಂದ ಒಕ್ಕೊರಳಿನಿಂದ ಮಹಾಜನ್ ವರದಿಯನ್ನು ಒಪ್ಪಿಕೊಂಡರು. ಆದರೆ ಈ ಅಧಿವೇಶನದಲ್ಲಿ ಈ ಸಂಬಂಧವಾಗಿ ನಿರ್ಣಯ ಸಭೆಯಮುಂದೆ ಬಂದಾಗ ಸಿದ್ದವೀರಪ್ಪನವರು ಮಾತನಾಡಿಕೊಂಡು ಬಂದಿದ್ದರೆಂದು ಕಾಣುತ್ತದೆ, ಅವರು ನಿರ್ಣಯ ಒಪ್ಪಲು ತಯಾರಾಗಿರಲಿಲ್ಲ.

Sri R. DAYANANDA SAGAR (Chamarajpet).—Sir, our stand is very clear. We have not minced matters. We have gone a step forward by

saying that the S. R. C. recommendations should be final. Let the House know about it. We have not lagged behind others.

Sri S. BANGARAPPA.—Sir, I have not yielded.

Sri R. DAYANANDA SAGAR.—Sir, the hon. member is confusing the House. We have gone a step farther than others * * * * *

ಶ್ರೀ ಎಸ್. ಬಂಗಾರಪ್ಪ.—ಆ ದಿವಸ ಈ ಸಂಬಂಧವಾದ ಸೂಚನೆ ಬಂದಾಗ ಇಂಡಿಕೇಟಿನವರು ಮಾತನಾಡಿಕೊಂಡು ಬಂದಿದ್ದರು, ಗಲಾಟೆ ಎಬ್ಬಿಸಿ ವಾಕೌಟ್ ಮಾಡಿದರು. ಮೋಷನ್ ಓಟಿಗೆ ಹಾಕಿದಾಗ ಇರಕೂಡದು, ಅದುವರೆಗೆ ಇರೋಣ ಎಂದು ಮಾತನಾಡಿಕೊಂಡು ಬಂದು ವಾಕೌಟ್ ಮಾಡಿದರು. ಅದರ ಅರ್ಥವೇನು ? ಅವರು ಬೇಕಾದರೆ ತಮ್ಮ ಪ್ರತಿಭಟನೆಯನ್ನು ತೋರಿಸಲು ವಾಕೌಟು ಮಾಡಿ ನಂತರ ಮತ್ತೆ ಬಂದು ಸಭೆಯಲ್ಲಿ ಕೂಡಬಹುದಾಗಿತ್ತು. ಮೈಸೂರು ರಾಜ್ಯಕ್ಕೆ ಕೆಡಕಾಗುವ ಸಂದರ್ಭವಿರುವಾಗ ಈ ರೀತಿ ಅವರು ಮಾಡಿದ್ದು ಸರಿಯಲ್ಲ, ಮೈಸೂರು ರಾಜ್ಯದ ಹಿತವನ್ನು ಬಲಿಕೊಡುವುದು ಸರಿಯಲ್ಲ.

ಮೈಸೂರು ರಾಜ್ಯವನ್ನು ಹರಾಜು ಹಾಕುವುದಕ್ಕೆ ಸಿದ್ಧವಾಗಿದ್ದಾರೆ ಇಂಡಿಕೇಟಿನವರು.

(*Interruptions*)

ಕಾಂಗ್ರೆಸ್ಸಿನ ಒಂದು ಬಣವನ್ನು ಕುರಿತು ನಾನು ಈಗ ಮಾತನಾಡಿದ್ದೇನೆ. ಇನ್ನು ಸಿಂಡಿಕೇಟಿನವರ ವಿಷಯ. ಸಿಂಡಿಕೇಟಿನವರು ಏನು ಮಾಡಿದ್ದಾರೆಂದರೆ, ಅವರು ಒಂದು ಒತ್ತಡವನ್ನು ಕೇಂದ್ರ ಸರ್ಕಾರದ ಮೇಲೆ ತರಬೇಕಾಗಿತ್ತು. ಮೊನ್ನೆ ಮೊನ್ನೆಯವರೆಗೂ ಎರಡೂ ಬಣಗಳೂ ಒಂದಾಗಿದ್ದುವು. ಇವರು ಕೇಂದ್ರ ಸರ್ಕಾರದ ಮೇಲೆ ತಮ್ಮ ವರ್ಚಸ್ಸನ್ನು ಬೀರಿ ಗಡಿ ಸಮಸ್ಯೆಯನ್ನು ಬಗೆಹರಿಸಬೇಕಾಗಿತ್ತು. ಈಗ ಈ ಎರಡೂ ಬಣಗಳ ಜಗಳದಲ್ಲಿ ರಾಜ್ಯದ ಹಿತ ಹಾಳಾಗುತ್ತಿದೆ. ಪ್ರಜಾಪ್ರಭುತ್ವಕ್ಕೆ ಸಂಬಂಧಪಟ್ಟ ಎಲಿಮೆಂಟರಿ ಪ್ರಿನ್ಸಿಪಲ್ಸ್ ಏನಿತ್ತು ಅದನ್ನು ಸಂಪೂರ್ಣವಾಗಿ ಚಾಲೂ ಮಾಡಿಲ್ಲ. ಎರಡೂ ಬಣಗಳು ದೇಶ ಉದ್ಧಾರವಾಗುವ ಮಾತನ್ನು ಹೇಳುತ್ತಿವೆ. ಮಹಾಜನ್ ಕಮಿಷನ್ ಅವಾರ್ಡನ್ನು ಒಪ್ಪಿಕೊಳ್ಳುವ ಬಗ್ಗೆ ಒತ್ತಾಯವನ್ನು ತರಲೇ ಬೇಕು. ಸಾಕಷ್ಟು ಪ್ರಮಾಣದಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರಲೇ ಬೇಕು ಎಂದು ನಾನು ಹೇಳುತ್ತಿದ್ದೇನೆ. ಇಂಡಿಕೇಟ್ ಕಾಂಗ್ರೆಸ್ಸಿನವರು ಈಗಲಾದರೂ ಕೂಡ ಮಹಾಜನ್ ಕಮಿಷನ್ ವರದಿಯನ್ನು ಒಪ್ಪಿಕೊಳ್ಳುತ್ತೇವೆಂದು ಹೇಳುತ್ತಾರೆಂದು ಆಶಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[MR. SPEAKER in the Chair]

Sri R. DAYANANDA SAGAR.—Sir, we are going a step forward. We are not prepared to lose even an inch of land belonging to our State.

Sri H. SIDDAVEERAPPA (Harihara).—Sir, if you kindly permit me I would like to clarify because my hon. friend Sri Bangarappa alleged that our party has played the part of obstructionists in the solution of this border issue. We have made it abundantly clear the reasons that prompted us to take the stand, although we are a party to the resolution passed on Mahajan Commission's report in 1967. We made it clear that the resolution on the Mahajan Commission's recommendation is pending since last two years and nothing has been done so far to implement it. The hon. member Sri Bangarappa seems to have made an allegation that we have not extended our co-operation in this matter. Even now I can assure him that there is no doubt about our co-operation in this matter either in this House or outside. We will be second to none in extending our co-operation to solve this problem in the larger interest of the people and the State.

** Not recorded as directed by the Chair.

ಶ್ರೀ ಎಸ್. ಎಮ್. ಗುರೆಡ್ಡಿ.—ಮಹಾಜನ್ ಕಮಿಷನ್ ವರದಿಯನ್ನು ಒಪ್ಪಿಕೊಳ್ಳುತ್ತೀರೇ ವೆಂಬುದನ್ನು ಹೇಳುತ್ತೀರಾ ಎಂದು ಕೇಳಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಗುರೆಡ್ಡಿಯವರಿಗೆ ಹೇಳುವುದಾದರೆ, ಮಹಾಜನ್ ಕಮಿಷನ್ ನೇಮಕ ಮಾಡಬಾರದು ಎಂದು ಹೇಳಿದರು, ಈಗ ಅವರ ವರದಿಯನ್ನು ಒಪ್ಪಿಕೊಳ್ಳಿ ಎಂದು ಹೊರಟಿದ್ದಾರೆ. ನಾವು ಆ ರೀತಿ ಮಾಡುತ್ತಿಲ್ಲ. ಮಹಾಜನ್ ಕಮಿಷನ್ ಸಿಫಾರಸುಗಳನ್ನು ಒಪ್ಪಿಕೊಂಡಿದ್ದೇವೆ ಎನ್ನುವುದು ನಮ್ಮ ನಿಲುವು. ಅದನ್ನು ಕಾರ್ಯಗತ ಮಾಡದೆ ಇದ್ದರೆ ಈ ಆಟಿಟ್ಯೂಡ್ ತೆಗೆದುಕೊಂಡಿದ್ದೇವೆಂದು ಹೇಳಿದ್ದೇವೆ. ನಾವು ಮಹಾಜನ್ ಕಮಿಷನ್ ವರದಿಗೆ ವಿರೋಧವಾಗಿದ್ದೇವೆಂದು ಎಂದೂ ಹೇಳಿಲ್ಲ. The "syndicate" friends wanted to see that some kind of dust is thrown on our party.

Sri RAMAKRISHNA HEGDE (Minister for Finance, Planning and Youth Welfare).—I am sorry Sir, I take exception to the remark made by the hon. Member. We have not done anything to throw dust or anything on the other party.

10-30 A. M.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭಾಪತಿಯವರೇ, ಈಗ ನಮ್ಮ ಅರ್ಥಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಆಯವ್ಯಯದ ಪಟ್ಟಿಯ ಬಗ್ಗೆ ಭಾಷಣ ಮಾಡಿದ್ದನ್ನು ಕೇಳಿದಾಗ ನನಗೆ ಆ ಟೊಳ್ಳು ಫುಟ್ಟಿ ಸಮಾಚಾರ ಜ್ಞಾಪಕಕ್ಕೆ ಬಂದಿತು. ನಮ್ಮ ದೇಶದ ಬಡ್ಜೆಟ್ ಟೊಳ್ಳಾದದ್ದಾಗಿದ್ದರೂ ಅದನ್ನು ಅರ್ಥಸಚಿವರು ತಮ್ಮ ಭಾಷಣದಿಂದ ಘಟ್ಟಿಯಾದುದನ್ನಾಗಿ ಮಾಡಿದ್ದಾರೆ; ಹಾಗೂ ದೇಶಕ್ಕೆ ಆಗಿರತಕ್ಕ ಅನ್ಯಾಯವನ್ನು ಅವರು ಮುಚ್ಚುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಅನ್ಯಾಯಕ್ಕೆ ಕಾರಣರಾದವರು ಒಂದನೆಯವರು ಕೇಂದ್ರ ಸರ್ಕಾರದವರು ಮತ್ತು ಎರಡನೆಯವರು ಈ ರಾಜ್ಯ ಸರ್ಕಾರದವರು. ಇದನ್ನೆಲ್ಲಾ ನೋಡಿದರೆ ನಮ್ಮ ಮೈಸೂರಿಗೆ ದುರಾದೃಷ್ಟ ಇಂದಿನಿಂದಲೇ ಪ್ರಾರಂಭವಾಗಿದೆ ಎನ್ನಬಹುದು. ಕೇಂದ್ರ ಸರ್ಕಾರ ನಮ್ಮ ಮೇಲೆ ಬೀರಿರತಕ್ಕ ವಕ್ರ ದೃಷ್ಟಿಯಿಂದ ಕೇಂದ್ರ ಸರ್ಕಾರಕ್ಕೆ ನಮ್ಮ ರಾಜ್ಯ ಸರ್ಕಾರದ ಮೇಲೆ ವಿಶ್ವಾಸವಿಲ್ಲವೆಂಬುದನ್ನು ಎತ್ತಿ ಹಿಡಿದಂತಾಗಿದೆ. ಇದರಿಂದ ರಾಜ್ಯಕ್ಕೆ ಒಂದಕ್ಕೆ ನಾಲ್ಕರಷ್ಟು ಅನ್ಯಾಯವಾಗಿದೆ. ಮೊದಲು ನಮ್ಮ ಪ್ಲಾನ್ ಸೈಜ್ ಇದ್ದದ್ದು 500 ಕೋಟಿ ರೂಪಾಯಿಗಳ ಅಂದಾಜಿನಲ್ಲಿತ್ತು. ಅನಂತರ ಅದನ್ನು ಕೇಂದ್ರ ಸರ್ಕಾರದವರು 450 ಕೋಟಿಗೆ ಇಳಿಸಿದರು. ಅಷ್ಟಕ್ಕೇ ಅದನ್ನು ಕೈಬಿಡದೆ ಮತ್ತೆ ಅದನ್ನು ಪುನಃ 320 ಕೋಟಿಗೆ ಇಳಿಸಿದರು. ಈ ಯೋಜನೆಗಳ ಬಗ್ಗೆ ಹಣವನ್ನು ಹಂಚಿಕೆ ಮಾಡುವುದರಲ್ಲಿ ಇಡೀ ಭಾರತದಲ್ಲಿರತಕ್ಕ ರಾಜ್ಯಗಳಿಗೆಲ್ಲಕ್ಕಿಂತಲೂ ಅತಿ ಕಡಮೆ ಹಣವನ್ನು ನಮ್ಮ ಮೈಸೂರು ರಾಜ್ಯಕ್ಕೆ ಒದಗಿಸಿದ್ದಾರೆ. ನಮಗೆ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಲಾಗಿದ್ದ ಹಣಕ್ಕಿಂತ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಕಡಿಮೆ ಹಣವನ್ನು ಒದಗಿಸಿದ್ದಾರೆ. ಅವರವರ ಸ್ಥಿತಿಗತಿಗಳನ್ನು ನೋಡಿಕೊಂಡು ಅವರ ಆರ್ಥಿಕ ಪರಿಸ್ಥಿತಿಗಳನ್ನು ನೋಡಿಕೊಂಡು ಹಣವನ್ನು ವಿತರಣೆಯಿಂದ ಹಂಚಲಿಲ್ಲ. ಆದ್ದರಿಂದ ನಮ್ಮ ಈ ಸಾಲಿನ ಯೋಜನೆಗಳು ಬಹಳ ಮೊಟುಕಾಗಿದೆ. ನಾವು ಮೂರನೇ ಯೋಜನೆಯಲ್ಲಿ ಕೈಗೊಳ್ಳಲಾಗಿದ್ದ ಯೋಜನೆಗಳಿಗೆ 87 ಕೋಟಿ ರೂಪಾಯಿಗಳು ಬೇಕಾಗಿ ಹಾಗೇ ಉಳಿದಿವೆ. ಆದ್ದರಿಂದ ನಮಗೆ ಕೇಂದ್ರದವರು ನಾಲ್ಕನೇ ಪಂಚವಾರ್ಷಿಕ ಯೋಜನೆಗೆ 85 ಕೋಟಿ ರೂಪಾಯಿಗಳನ್ನು ಒದಗಿಸಿದ್ದರೂ ಆ ಹಣವನ್ನೆಲ್ಲಾ ವಿನಿಯೋಗಿಸಿದರೂ ಮೂರನೇ ಪ್ಲಾನಿನ ಕೆಲಸಗಳು ಮುಗಿಯುವುದಕ್ಕಾಗುವುದಿಲ್ಲ. ಅದಕ್ಕೂ ಇನ್ನು 2.5 ಕೋಟಿ ರೂಪಾಯಿಗಳು ಖೋತಾ ಬೀಳುತ್ತವೆ. ಅಂದರೆ ಕೇಂದ್ರ ಸರ್ಕಾರದವರು ನಮಗೆ ನಾಲ್ಕನೆ ಪಂಚವಾರ್ಷಿಕ ಯೋಜನೆಗೆಂದು ಹಣವನ್ನು ಕೊಟ್ಟಿದ್ದರೂ ಕೊಟ್ಟ ಹಾಗೆ ಆಗಲಿಲ್ಲ. ಅಂದರೆ ನಮಗೆ ನಾಲ್ಕನೆ ಪಂಚವಾರ್ಷಿಕ ಯೋಜನೆಗೆ ಕೇಂದ್ರ ಸರ್ಕಾರದವರೇನೂ ಹಣವನ್ನು ಕೊಡಲಿಲ್ಲ ಎಂದಾಯಿತು. ಇದರ ಜೊತೆಗೆ ಫೈನಾನ್ಸ್ ಕಮಿಷನ್ನಿನವರು ನಮ್ಮ ರಾಜ್ಯಕ್ಕೆ ಬಹಳ ಅನ್ಯಾಯ ಮಾಡಿದ್ದಾರೆ. ಕೆಲವು ರಾಜ್ಯಗಳಿಗೆ ಆ ಫೈನಾನ್ಸ್ ಕಮಿಷನ್ನಿನವರು 100 ಪರ್ಸೆಂಟ್ ಹಣವನ್ನು ಒದಗಿಸಿದ್ದರೆ ನಮ್ಮ ರಾಜ್ಯಕ್ಕೆ ಮೈನಸ್ 8 ಪರ್ಸೆಂಟ್ ಹಣವನ್ನು ಒದಗಿಸಿದ್ದಾರೆ. ಅದಕ್ಕೆ ಕಾರಣ ಏನಿರಬಹುದು ಎಂಬುದನ್ನು ಅರ್ಥ ಮಾಡುವುದಾದರೆ ನಮ್ಮ ರಾಜ್ಯ ಸರ್ಕಾರದವರು ನಮಗೆ ಕಳೆದ ಯೋಜನೆಗಳಿಂದ ದೇಶಕ್ಕೆ ಬರತಕ್ಕ ಆದಾಯದ ನಿಜಸ್ವರೂಪವನ್ನು ತೋರಿಸದೆ ನಮ್ಮ ಆರ್ಥಿಕ ಸ್ವರೂಪವನ್ನು ಮರೆಮಾಚಿದ್ದರಿಂದ ಹೀಗಾಗುವುದಕ್ಕೆ ಕಾರಣವಾಯಿತೆಂದು ಹೇಳಬಹುದು.

ಇನ್ನು ಮೂರನೆಯದಾಗಿ ಕೇಂದ್ರ ಸರ್ಕಾರದವರು ಅಲ್ಲಲ್ಲೇ ರಾಜ್ಯಗಳಲ್ಲಿ ತೊಡಗಿಸಿರತಕ್ಕ ಉದ್ಯಮಗಳ ಬಗ್ಗೆ 2447 ಕೋಟಿ ರೂಪಾಯಿಗಳನ್ನು ಬಂಡವಾಳವನ್ನಾಗಿ ಹೂಡಿರುವುದರಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿ ಅವರು ಹಾಕಿರತಕ್ಕ ಬಂಡವಾಳ ಕೇವಲ 47 ಕೋಟಿ ರೂಪಾಯಿಗಳು ಮಾತ್ರ. ಆದ್ದರಿಂದ ನಮ್ಮ ಮೈಸೂರು ರಾಜ್ಯದಲ್ಲಿ 1947 ಕ್ಕೆ ಹಿಂದೆ ಏನೊಂದು ಅಭಿವೃದ್ಧಿ ಈ ಕೈಗಾರಿಕೋದ್ಯಮಗಳಲ್ಲೂ ಮತ್ತು ವ್ಯವಸಾಯದ ಬಗ್ಗೆ ನಡೆದಿತ್ತೋ ಅದನ್ನು ಬಿಟ್ಟರೆ ಇತ್ತೀಚೆಗೆ ಈ ಎರಡೂ ಬಾಬುಗಳಲ್ಲಿ ಏನೂ ಅಭಿವೃದ್ಧಿಯಾಗಿಲ್ಲ. ಇದೇ ರೀತಿ ನಮ್ಮ ಮೈಸೂರು ರಾಜ್ಯಕ್ಕೆ ಅನೇಕ ಬಾಬುಗಳಲ್ಲಿ ಅನ್ಯಾಯವಾಗಿದೆ. ಇಂಡಿಯನ್ ಫೈನಾನ್ಸ್ ಕಾರ್ಪೋರೇಷನ್ನಿನವರು ಎಲ್ಲ ರಾಜ್ಯಗಳಿಗೂ ಒದಗಿಸಿರತಕ್ಕ ಸಾಲದ ಹಣ 306 ಕೋಟಿಗಳಾದರೆ ನಮ್ಮ ರಾಜ್ಯಕ್ಕೆ ಕೇವಲ 17 ಕೋಟಿ ಮಾತ್ರ ಕೊಡಲಾಗಿದೆ. ಇವನ್ನೆಲ್ಲಾ ನೋಡಿದರೆ ಇನ್ನೆಷ್ಟರ ಮಟ್ಟಿಗೆ ನಮ್ಮ ಯೋಜನೆಗಳನ್ನು ನಾವು ಫಲಪ್ರದವಾಗಿ ಕಾರ್ಯಗತ ಮಾಡಬಹುದೆಂಬುದು ಎಲ್ಲರಿಗೂ ವೇದ್ಯವಾಗಬಹುದು. ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮ ರಾಜ್ಯದ ಸಾಧನ ಸಂಪತ್ತನ್ನು ಕೇಂದ್ರದವರು ಶೂನ್ಯ ಮಾಡಿದ್ದಾರೆಂದರೆ ಅದು ತಪ್ಪಾಗಲಾರದು. ಆದರೆ ನಮಗೆ ಇಷ್ಟೆಲ್ಲಾ ಆಗಿರತಕ್ಕ ಅನ್ಯಾಯವನ್ನು ಹೇಗೆ ಸರಿದೂಗಿಸಬೇಕು ಎಂಬುದು ಈಗಿನ ನಮ್ಮ ಮುಖ್ಯ ಪ್ರಶ್ನೆ. ಕೇಂದ್ರದವರ ಬಡ್ಜೆಟ್ಟಿನಲ್ಲಿ ಡಿಸ್ಕ್ರೀಷಿನೆರಿ ಗ್ರ್ಯಾಂಟ್ ಎಂದು 175 ಕೋಟಿ ರೂಪಾಯಿಗಳನ್ನಿಟ್ಟಿದ್ದಾರೆ. ಆ ಹಣವನ್ನು ಯಾವ ರಾಜ್ಯಕ್ಕೆ ತುಂಬಾ ಅನ್ಯಾಯವಾಗಿರುತ್ತದೋ ಅಂಥ ರಾಜ್ಯಕ್ಕೆ ಆ ಅನ್ಯಾಯವನ್ನು ಸರಿದೂಗಿಸಲು ಒದಗಿಸಬೇಕೆಂಬ ಉದ್ದೇಶಕ್ಕಾಗೀ ಇಟ್ಟಿರುವುದರಿಂದ ನಮ್ಮ ರಾಜ್ಯದಲ್ಲಿ ಇಲ್ಲಿಯವರೆಗೂ ನಾನಾ ರಂಗಗಳಲ್ಲಿ ನಮಗೆ ಆಗಿರತಕ್ಕ ಅನ್ಯಾಯಗಳನ್ನು ನಮ್ಮ ಆರ್ಥಿಕ ಸಚಿವರು ಕೇಂದ್ರಕ್ಕೆ ಚೆನ್ನಾಗಿ ಮನದಟ್ಟುಮಾಡಿಕೊಟ್ಟು ಆ ನಿಧಿಯಿಂದ ಪೂರಾ ಹಣವನ್ನು ಪಡೆಯುವುದಕ್ಕೆ ಪ್ರಯತ್ನಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈ ಕಾರ್ಯವನ್ನು ಮಾಡದಿದ್ದರೆ ಮೈಸೂರಿಗೆ ನಮ್ಮ ಮಂತ್ರಿಗಳು ಬಹಳ ಅನ್ಯಾಯ ಮಾಡಿದಂತಾಗುತಾಗುತ್ತದೆ; ದ್ರೋಹ ಮಾಡಿದಂತಾಗುವುದು. ಈ ಅನ್ಯಾಯವನ್ನು ತಡೆಗಟ್ಟುವುದಕ್ಕಾಗದಿದ್ದರೆ ಇವರು ಕೂಡಲೇ ರಾಜೀನಾಮೆಯನ್ನಾದರೂ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ನಮ್ಮ ದಕ್ಷಿಣವಲಯದಲ್ಲಿ ಸ್ಥಾಪಿಸಲ್ಪಡಬೇಕಾಗಿರತಕ್ಕ ಉಕ್ಕಿನಕಾರ್ಖಾನೆಗಳ ವಿಷಯದಲ್ಲೂ ಕೂಡ ಬಹಳ ಅನ್ಯಾಯ ನಡೆಯುತ್ತಿದೆ. ನಮಗೆ ಈ ನಾಲ್ಕನೆ ಪಂಚವಾರ್ಷಿಕ ಯೋಜನೆಗೆ ಒಟ್ಟು 120 ಮಿಲಿಯನ್ ಟನ್ ಕಬ್ಬಿಣ ಬೇಕೆಂದು ಹೇಳಲಾಗುತ್ತಿದೆ. ಈ ಪೈಕಿ ದಕ್ಷಿಣವಲಯದಲ್ಲೇ ಸುಮಾರು 74 ಮಿಲಿಯನ್ ಟನ್ ತಯಾರಾಗುವುದಕ್ಕೆ ಸಾಧ್ಯವಿದೆ ಎಂಬುದನ್ನು ಮನಗಂಡಿದ್ದರಿಂದಲೇ ಇಲ್ಲಿ ಎರಡುಮೂರು ಉಕ್ಕಿನ ಕಾರ್ಖಾನೆಗಳನ್ನೂ ಮತ್ತು ಒಂದು ಅಲಾಯ್ಡ್ ಸ್ಟೀಲ್ ಪ್ಲಾಂಟನ್ನೂ ಸ್ಥಾಪಿಸಲು ಉದ್ದೇಶವಿತ್ತು. ಅದಕ್ಕಾಗಿ ಹೊಸಪೇಟೆ, ವಿಶಾಖಪಟ್ಟಣ ಮತ್ತು ಸೇಲಂಗಳಲ್ಲಿ ಈ ಸ್ಟೀಲ್‌ಪ್ಲಾಂಟಗಳನ್ನು ಹಾಕಬೇಕೆಂದು ತೀರ್ಮಾನವಾಗಿತ್ತು. ಆದರೆ ಈ ಮೂರರಲ್ಲಿ ಮೊದಲು ಹೊಸಪೇಟೆಯಲ್ಲಿ ಪ್ರಾರಂಭ ಮಾಡಬೇಕಾಗಿದ್ದ ಪ್ಲಾಂಟನ್ನು ಈಗ ಮೊದಲು ಸೇಲಂನಲ್ಲಿಯೂ ಮತ್ತು ಅನಂತರ ವಿಶಾಖಪಟಣದಲ್ಲೂ ಕಡೆಯಲ್ಲಿ ನಮ್ಮ ಹೊಸಪೇಟೆಯಲ್ಲೂ ಸ್ಥಾಪಿಸಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ಇದಕ್ಕೆ ಪ್ರತಿಭಟನೆಯನ್ನು ಸೂಚಿಸಬೇಕು ಮತ್ತು ಮೊದಲು ಹೊಸಪೇಟೆಯಲ್ಲಿ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಒತ್ತಾಯಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಬಡ್ಜೆಟ್ಟಿನಲ್ಲಿ ಕಳೆದ ಅನೇಕ ವರ್ಷಗಳಿಂದ ಸೋಷಿಯಲಿಜಂ ಎಂಬ ಒಂದು ಸ್ಲೋಗನ್ ಹೇಳಿಕೊಂಡು ಅದಕ್ಕೆ ಸಂಪೂರ್ವಿರುದ್ಧವಾದ ಬಡ್ಜೆಟ್ಟನ್ನು ತಯಾರು ಮಾಡುತ್ತಿದ್ದಾರೆ. ಜನಸಾಮಾನ್ಯರ ಸ್ಥಿತಿಗತಿಗಳು ಏನೇನೂ ಉತ್ತಮವಾಗಿಲ್ಲ. ರಾಜ್ಯದಲ್ಲಿ ಸುಮಾರು 20 % ಜನರು ಸುಸಂಘಟಿತರಾಗಿದ್ದಾರೆ. ಇನ್ನುಳಿದ 80 ಪರ್ಸೆಂಟ್ ರಷ್ಟು ಜನರು ಅಸಂಘಟಿತರಾಗಿದ್ದಾರೆ. ದೇಶದಲ್ಲಿರತಕ್ಕ ಎಲ್ಲಾ ಕೈಗಾರಿಕೆಗಳಲ್ಲೂ ತೊಡಗಿರತಕ್ಕ ಕಾರ್ಮಿಕರೂ ರಾಜ್ಯದಲ್ಲಿರತಕ್ಕ ಎಲ್ಲಾ ನೌಕರವರ್ಗದವರೂ ದೊಡ್ಡ ದೊಡ್ಡ ಮಿಲ್ಲುಗಳ ಮಾಲೀಕರುಗಳೂ ಇವರೆಲ್ಲರೂ ಸಂಘಟಿತರಾಗಿದ್ದಾರೆ. ಇವರ ಕೆಲಸಗಳನ್ನು ಮಾತ್ರ ಸರ್ಕಾರದವರು ಎಚ್ಚರಿಕೆಯಿಂದ ನಡೆಸುತ್ತಿದ್ದಾರೆ.

ಈವೊತ್ತಿನ ದಿವಸ ತಾವು ಕೊಟ್ಟಿರುವ ಒಂದು ಅಂಕಿಅಂಶವನ್ನು ಅಳತೆ ಮಾಡಿ ನೋಡಿದ ಪಕ್ಷದಲ್ಲಿ 1947ನೇ ಇಸವಿಯ ಜೀವನದ ವೆಚ್ಚ ಎಷ್ಟಿತ್ತು ಎನ್ನುವುದನ್ನು ನೋಡಿದರೆ ಸೋಷಿಯಾಲಿಸಮ್ ಬಂದಿದೆಯೋ ಬಾರ್ಬಾರಿಸಂ ಬಂದಿದೆಯೋ ಎನ್ನುವುದನ್ನು ನೋಡಬೇಕು. ಈ ಸೋಷಿಯಲಿಸಮ್ ಸಂಘಟನೆ ಆದ ವರ್ಗಕ್ಕೆಮಾತ್ರ ಇದೆ. 70 ಪರ್ಸೆಂಟು ಜನಸಾಮಾನ್ಯರ ಸ್ಥಿತಿ ಅಷ್ಟು ಆಶಾದಾಯಕವಾಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಜೀವನದ ವೆಚ್ಚ 1947ನೇ ಇಸವಿಯಿಂದ ಈಚೆಗೆ 800 ಪರ್ಸೆಂಟು ಹೆಚ್ಚಿದೆ. 282 ಪರ್‌ಸೆಂಟ್ ಸರಾಸರಿ ಆದಾಯ ಇದ್ದುದು ಈಗ 500

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಪರ್ಸೆಂಟಿಗೆ ಏರಿದ್ದರೂ ಜನ ಸಾಮಾನ್ಯರಿಗೆ ಏನೂ ಪ್ರಯೋಜನವಾಗುತ್ತಾ ಇಲ್ಲ. ಈವೊತ್ತಿನ ದಿವಸ ಉತ್ತರ ಪ್ರದೇಶ ಸರ್ಕಾರದಲ್ಲಿ 5 ಎಕರೆಗಿಂತ ಕಡಿಮೆ ಇರುವವರಿಗೆ ಕಂದಾಯವನ್ನು ವಜಾ ಮಾಡಿದ್ದಾರೆ. ಮದ್ರಾಸಿನಲ್ಲಿ ಫುಡ್ ಸಬ್ಸಿಡಿ ಕೊಟ್ಟು ಒಂದು ರೂಪಾಯಿಗೆ ಒಂದು ಪಡಿ ಅಕ್ಕಿಯನ್ನು ಹಂಚುತ್ತಿದ್ದಾರೆ. ಆರೀತಿಯಾದಂಥ ಒಂದು ಸೋಷಿಲಿಸ್ಟಿಕ್ ಸ್ಟೆಪ್ ನಮ್ಮ ಅರ್ಥ ಸಚಿವರ ಭಾಷಣದಲ್ಲಿಲ್ಲ. ಜನಸಾಮಾನ್ಯರಿಗೆ ಅಂದರೆ ಸುಮಾರು 80 ಪರ್ಸೆಂಟು ಜನರಿಗೆ ಏನು ಉಪಕಾರ ಮಾಡುತ್ತಿದ್ದೇವೆ ಎನ್ನುವುದು ಅದರಲ್ಲಿ ಒಂದು ಅಂಶವೂ ಕೂಡ ಇಲ್ಲ ಎಂದು ನಾನು ಹೇಳಬೇಕಾಗಿದೆ. ಈವೊತ್ತಿನ ದಿವಸ ಕೇಂದ್ರ ಸರಕಾರದಿಂದ ತಮಗೆ ಬರಬೇಕಾದ ಹಣವನ್ನು ಕಡಿಮೆ ಮಾಡಿಕೊಂಡು ಹೊಸದಾಗಿ ತೆರಿಗೆ ಹಾಕಬೇಕು, ಸರ ಛಾರ್ಜು ಹಾಕಬೇಕು ಇನ್ನು ಬೇರೆ ಬೇರೆ ರೀತಿಯಲ್ಲಿ ತೆರಿಗೆ ಹಾಕಬೇಕು ಎನ್ನುವ ಒಂದು ಭೀತಿಯನ್ನು ತೋರಿಸಿ ಜನಸಾಮಾನ್ಯರಿಗೆ ನಿರಾಸೆ ಮಾಡಿದ್ದಾರೆ. ಮೈಸೂರಿನಲ್ಲಿ ಪಕ್ಕದ ರಾಜ್ಯಕ್ಕಿಂತ ವಿದ್ಯುಚ್ಛಕ್ತಿ ದರ ಕಡಿಮೆ, ಸೇಲ್ಸ್ ಟಾಕ್ಸ್ ಕಡಿಮೆ, ಎಂಬುದನ್ನು ತೋರಿಸಿ ಟ್ಯಾಕ್ಸ್ ಹಾಕುತ್ತಿದ್ದಾರೆಯೇ ಹೊರತು ದೇಶದ ಪ್ರಗತಿ ಕಡೆಗೆ ಏನೂ ಗಮನ ಕೊಟ್ಟಿಲ್ಲ. ನಿಜವಾಗಿಯೂ ಸಮಾಜಕ್ಷೋಸ್ಕರವಾಗಿ ಏನು ಒಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ ಎಂದು ನಾನು ಹೇಳಬಯಸುತ್ತೇನೆ. ಇದು ಮೈಸೂರಿನ ದುರಾದೃಷ್ಟ ಎಂದು ಅರ್ಥಮಾಡಿಕೊಳ್ಳಬೇಕಾಗಿದೆ. ಇಷ್ಟನ್ನಾದರೂ ಹೇಳಬಹುದು. This is not Socialism but this is barbarism and also opportunitism ಎಂದು ಹೇಳಬೇಕಾಗಿದೆ. ಇಡೀ ದೇಶದ ಆದಾಯ ಹೇಗಿದೆ ಎಂದು ಹೇಳಿದ್ದಾರೆಯೇ ಹೊರತು ಜನಸಾಮಾನ್ಯರ ಹಿತರಕ್ಷಣೆಯ ಕಡೆಗೆ ಏನೂ ಗಮನ ಕೊಡುತ್ತಾ ಇಲ್ಲ. ಇದು ದುರದೃಷ್ಟಕರವಾದ ವಿಷಯ. ಈ ರೀತಿ ಮಾಡುವುದರಿಂದ ಜನಸಾಮಾನ್ಯರ ಶಾಪಕ್ಕೆ ಗುರಿಯಾಗುತ್ತಾರೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಕೆ. ಹೆಚ್. ಶ್ರೀನಿವಾಸ್ (ಸಾಗರ್).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದ ಅರ್ಥ ಸಚಿವರು ಕನ್ನಡದಲ್ಲಿ ಈ ಸದನಕ್ಕೆ ಒಪ್ಪಿಸಿರತಕ್ಕಂಥ 1970–71 ರ ಆಯವ್ಯಯ ಪತ್ರವನ್ನು ನಾನು ಅತ್ಯಂತ ಸಂತೋಷದಿಂದ ಸ್ವಾಗತಿಸುತ್ತಾ ಬೆಂಬಲಿಸುತ್ತೇನೆ. ಸುಮಾರು 233 ಕೋಟಿ ರೂಪಾಯಿಗಳ ಆದಾಯ ಮತ್ತು ವೆಚ್ಚ 248 ಕೋಟಿ ರೂಪಾಯಿ ಆದರೆ ಸುಮಾರು 15 ಕೋಟಿ ರೂಪಾಯಿ ಖೋತಾ ನಮಗೆ ಕಂಡುಬರುತ್ತದೆ. ಸುಮಾರು 4-4½ ಕೋಟಿ ರೂಪಾಯಿಗಳ ಖೋತಾವನ್ನು ಭರ್ತಿ ಮಾಡಲಿಕ್ಕೆ ವಿಶೇಷವಾಗಿ ಜನಗಳಿಗೆ ಹೆಚ್ಚಿನ ತೆರಿಗೆಯ ಭಾರ ಬೀಳದೇ ಇದ್ದ ಹಾಗೆ ರಾಜ್ಯದಲ್ಲಿ ಪ್ರಯತ್ನವನ್ನು ನಡೆಸಿದ್ದಾರೆ. ಇನ್ನು ನಿವ್ವಳ ಖೋತಾ 11 ಕೋಟಿ ರೂಪಾಯಿಗಳನ್ನು ಯಾವರೀತಿ ತುಂಬಬೇಕೆಂಬ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನನ್ನ ಎದುರಿಗೆ ಸುಮಾರು 8 ರಾಜ್ಯ ಸರ್ಕಾರಗಳ ಹಾಗೂ ಕೇಂದ್ರ ಸರ್ಕಾರದ ಆಯವ್ಯಯದ ಒಂದು ಸ್ಥೂಲ ಪಟ್ಟಿ ಇದೆ. ಇದನ್ನು ಗಮನಿಸಿದಾಗ್ಗೆ ಅವುಗಳಿಗೆ ನಮ್ಮ ಅಯವ್ಯಯ ಪತ್ರವನ್ನು ಹೋಲಿಸಿಕೊಂಡಾಗ ಮತ್ತು ಅದರಲ್ಲಿ ಕೆಲವು ರಾಜ್ಯಗಳಿಗೆ ಸಿಕ್ಕಿದಂಥ ಹೆಚ್ಚಿನ ಲಾಭವನ್ನು ಎಣಿಸಿಕೊಂಡು ಹೋಲಿಸಿದಾಗ ಈ ಪ್ರಕೃತ ಸಂದರ್ಭದಲ್ಲ ಅತ್ಯಂತ ಉತ್ತಮವಾದ ಒಂದು ಆಯವ್ಯಯವನ್ನು ನಮ್ಮ ಅರ್ಥ ಸಚಿವರು ಮಂಡಿಸಿದ್ದಾರೆಂದು ಹೇಳಲಿಕ್ಕೆ ಯಾವ ಸಂಕೋಚವೂ ಇಲ್ಲ. ಈ ಆಯವ್ಯಯದಬಗ್ಗೆ ನಾನು ಮಾತನಾಡುವುದು ಪ್ರಾರಂಭ ಘಟ್ಟದಲ್ಲೇ. ಪಂಚಮ ಅರ್ಥ ಆಯೋಗದವರು ನೀಡಿರತಕ್ಕಂಥ ಒಂದು ತೀರ್ಪಿನ ಬಗ್ಗೆ ಪ್ರತಿಯೊಬ್ಬರ ಗಮನವೂ ಹರಿಸಿರುವುದು ಸಹಜವಾಗಿದೆ. ನಾವು ಏನೋ ನಮ್ಮ ಒಂದು ಪರಿಸ್ಥಿತಿಯನ್ನು ಅವರ ಮುಂದೆ ಸಮರ್ಥರೀತಿಯಲ್ಲಿ ನಿರೂಪಿಸಿದರೂ ನಮ್ಮ ನಿರೀಕ್ಷೆಗೆ ನಮ್ಮ ಸಮರ್ಥನೆಗೆ ತದ್ವಿರುದ್ಧವಾದಂಥ ತೀರ್ಪು ಹೊರಬಿದ್ದಿರುವುದನ್ನು ಏನೆಂದು ಕರೆಯಬೇಕೋ ನನಗೆ ಅರ್ಥವಾಗುವುದಿಲ್ಲ. ಒಟ್ಟಿನಲ್ಲಿ ನಮ್ಮ ದುರಾದೃಷ್ಟ ಎಂದು ಹೇಳಬಹುದು. ಈ ಒಂದು ಪಂಚಮ ಆಯೋಗದವರ ತೀರ್ಪು ಎಷ್ಟರಮಟ್ಟಿಗೆ ವಿರೋಧವಾಗಿದೆ ಎಂದರೆ ನಮಗೆ ಅದು ತೀರಾ ಆಭಾಸವಾಗಿದೆ. ರಾಜ್ಯ ಸರ್ಕಾರದ ಒಂದು ಜ್ಞಾಪನಾ ಪತ್ರವನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಒಪ್ಪಿಸಿದ್ದಾರೆ. ಅದರಲ್ಲಿ ಸರಳವಾಗಿ ನಮ್ಮ ಒಂದು ಸಂಕೀರ್ಣವಾದಂಥ ಆರ್ಥಿಕ ರೀತಿಯನ್ನು ವಿಶ್ಲೇಷಣೆ ಮಾಡಿದ್ದಾರೆ. ಇದನ್ನು ನಿಜವಾಗಿಯೂ ಪಂಚಮ ಆರ್ಥಿಕ ಆಯೋಗದವರು ನೋಡಬೇಕಾಗಿತ್ತು. ನಮ್ಮ ಆರ್ಥಿಕ ಆಯೋಗದವರು 5 ವರ್ಷದ ಅವಧಿಯಲ್ಲಿ ಸುಮಾರು 2 ಕೋಟಿ 58 ಲಕ್ಷ ರೂಪಾಯಿಗಳು ನಮಗೆ ಹೆಚ್ಚುವರಿ ಆದಾಯ ಬರುತ್ತದೆ ಎಂದು ನಿರೀಕ್ಷೆ ಮಾಡಿದ್ದಾರೆ. ಆದರೆ ನಮ್ಮ ಪರಿಸ್ಥಿತಿಯನ್ನು ವಿಶ್ಲೇಷಿಸಿದರೆ 5 ವರ್ಷದ ಅವಧಿಯಲ್ಲಿ 183 ಕೋಟಿ 56 ಲಕ್ಷ ರೂಪಾಯಿಗಳ ಒಂದು ಖೋತಾ ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ಪರ್‌ಕ್ಯಾಪಿಟಾ ಆದಾಯವನ್ನು ತಲಾ ಆದಾಯದ ಆಧಾರದ ಮೇಲೆ ಇಟ್ಟುಕೊಂಡು ತೀರ್ಮಾನ ಮಾಡಿದ್ದಾರೆ. ಎಲ್ಲಾ ರಾಜ್ಯಗಳ ಪರಿಚಯ ಪಟ್ಟಿಯನ್ನು ನೋಡಿ ಅಲ್ಲಿ 418 ಕೋಟಿ

ರೂಪಾಯಿಗಳು ಇದ್ದರೆ ನಮ್ಮ ರಾಜ್ಯದಲ್ಲಿ 420 ಕೋಟಿ ರೂಪಾಯಿ ಆದಾಯ ಇದೆ ಎಂದು ತೀರ್ಮಾನ ಮಾಡಿದ್ದಾರೆ. ಈ ರೀತಿ 2 ರೂಪಾಯಿ ಹೆಚ್ಚಿದೆ ಎಂದು ಇಂಡಿಯಾ ದೇಶದಲ್ಲಿ ನಮ್ಮ ರಾಜ್ಯ ಒಂದೇ ಮುಂದುವರಿದ ರಾಜ್ಯ, ಇನ್ನುಳಿದವು ಹಿಂದುಳಿದ ರಾಜ್ಯವೆಂದು ಪರಿಗಣಿಸಿರುವುದರಿಂದ ನಮಗೆ ತುಂಬಲಾರದಂಥ ಒಂದು ಆರ್ಥಿಕ ಹೊರಗೆ ಕಾರಣವಾಗಿದೆ ಆರ್ಥಿಕ ಆಯೋಗದವರಿಂದ ನಾವು ಏನು ನಿರೀಕ್ಷಣೆ ಮಾಡಿದ್ದೇವೋ ಅದು ಹಿಂದಕ್ಕೇ ಸರಿದಿದೆ ಎನ್ನುವ ಮಾತನ್ನು ಶ್ರೀಮಾನ್ ಘೋರ್ಪಡೆಯವರು ವ್ಯಕ್ತಪಡಿಸಿದ್ದಾರೆ. ಅವರು ನಾರಮ್ಸ್ ಅಂಡ್ ಪ್ರಿನ್ಸಿಪಲ್ಸ್ ತೋರಿಸಿದ್ದಾರೆ. ನಾವು ಇದರ ಬಗ್ಗೆ ಮೊದಲೇ ಚಾಣಿಕ್ಯತೆಯನ್ನು ತೋರಿಸಿದ್ದರೆ ನಮಗೆ ಸ್ವಲ್ಪ ಜಾಸ್ತಿ ಸಿಕ್ಕುತ್ತಾ ಇತ್ತು. ನಮಗೆ ಇದರ ಬಗ್ಗೆ ಮೊದಲು ಉಪಾಯ ಮಾಡಲಿಕ್ಕೆ ಸಾಧ್ಯ ಬರಲಿಲ್ಲ. ನಮ್ಮ ಬಗ್ಗೆ ಅವರು ಸರಿಯಾದ ತೀರ್ಮಾನವನ್ನು ಕೈಗೊಳ್ಳಲಿಲ್ಲ. ನಾನು ಮೊದಲೇ ಹೇಳಿದಹಾಗೆ ಈ ಆಯೋಗದವರು ಕೊಟ್ಟ ತೀರ್ಪನ್ನು ನೋಡಿದರೆ ಅವರು ಕಣ್ಣು ಮುಚ್ಚಾಲೆ ಆಟವಾಡಿದ್ದಾರೆ ಎಂದು ಗೊತ್ತಾಗುತ್ತದೆ. ಆ ರೀತಿ ಮಾಡದಿದ್ದರೆ ನಮಗೆ ಈ ಒಂದು ತೀರ್ಪಿನಲ್ಲಿ ಹೆಚ್ಚಿನ ಪ್ರಯೋಜನವಾಗುತ್ತಿತ್ತು ಎಂದು ಕಂಡು ಬರುತ್ತದೆ. ನಾವು ಈ ಒಂದು ವಿಷಯವನ್ನು ಮೊದಲೇ ತಿಳಿದುಕೊಳ್ಳಬೇಕಾಗಿತ್ತು. ಪ್ರೊಹಿಬಿಷನ್ ವಿಚಾರದಲ್ಲಿ ಬೇರೆ ರಾಜ್ಯಗಳಿಗಿಂತ ಮುಂಚೆಯೇ ಸಡಿಲಗೊಳಿಸಿ ಈ ಒಂದು ವರಮಾನದಿಂದ ಸಂಪಾದನೆಯನ್ನು ಮಾಡಿಕೊಂಡೆವು ಎಂದು ನಮಗೆ ಅವರ ತೀರ್ಪಿನಲ್ಲಿ ವಿರುದ್ಧವಾಗಿ ಕಂಡುಬಂದಿದೆ. ಆಂಧ್ರ, ಮದ್ರಾಸ್, ಸರ್ಕಾರಗಳಲ್ಲಿ ಈ ತೀರ್ಪು ಹೊರಬಿದ್ದಮೇಲೆ ಆದನ್ನು ಸಡಿಲಗೊಳಿಸಿ ಈ ಒಂದು ವರಮಾನವನ್ನು ಜಾಸ್ತಿ ಮಾಡಿಕೊಂಡಿದ್ದಾರೆ. ಆರ್ಥಿಕ ಆಯೋಗದವರ ಈ ಒಂದು ಪ್ರೊಹಿಬಿಷನ್ನಿನ ಶಿಫಾರಸ್ಸಿನ್ನ ಮೇಲೆ ಇದನ್ನು ಪರಿಗಣಿಸಿ ಹೆಚ್ಚು ಪ್ರಯೋಜನ ಪಡೆದಿದ್ದಾರೆ. ಅವರ ಶಿಫಾರಸ್ಸಿನಲ್ಲಿ 5 ವರ್ಷದಲ್ಲಿ ಏನಾದರೂ ಈ ಪ್ರೊಹಿಬಿಷನ್‌ನ್ನು ಸಡಿಲಗೊಳಿಸಿದರೆ ಅವರಿಗೆ ಕೊಡತಕ್ಕ ಸಹಾಯವನ್ನು ಕಡಿಮೆ ಮಾಡುತ್ತೇವೆ ಎನ್ನುವ ಯಾವ ನಿಲವೂ ಇಲ್ಲ. ಮತ್ತು ಇದಕ್ಕೆ ಯಾವ ಕಂಡೀಷನ್ ಕೂಡ ಇಲ್ಲ. ಈ ರೀತಿಯಲ್ಲಿ ಯಾವುದು ರಾಜ್ಯಾಂಗಬದ್ಧವಾಗಿ ಲಭಿಸಬೇಕೋ ಯಾವುದು ನಿರ್ದಿಷ್ಟವಾಗಿ ತೀರ್ಪು ಎಂದು ಬರಬೇಕೋ ಅಂತಹ ಒಂದು ತೀರ್ಪು ಬಾರದೆ ಎಲ್ಲರಿಗೂ ಅನ್ಯಾಯವಾಗಿ ಇಂದು ಈ ಕೇಂದ್ರದ ಆಯೋಗದಿಂದ ತೀರ್ಪು ಬಂದಿದೆ. ಕೇಂದ್ರದವರ ಇಂತಹ ಆಯೋಗದಿಂದ ಬೇರೆ ಎಲ್ಲ ರಾಜ್ಯಗಳಿಗೂ ಸಮಧಾನವಾಗುವಂಥಹ ತೀರ್ಪು ಕೊಟ್ಟಿರುವುದು ಕಾಣಬರುತ್ತದೆ. ಅದೇನು ದುರದೃಷ್ಟವೋ ಏನೋ ಆಂಧ್ರದವರಿಗೆ ಹಾಗೂ ತಮಿಳುನಾಡು ರಾಜ್ಯದವರಿಗೆ ಈ ವಿವಾದದಿಂದ ಅನುಕೂಲವಾಗಿರುವಷ್ಟು ಬೇರೆ ಯಾವ ರಾಜ್ಯಕ್ಕೂ ಆಗಿಲ್ಲ.

Andhra and Tamil Nadu are doubly benefited once through the award and again through the relaxation of prohibition. ಒಂದು ಕಡೆ ಪ್ರೊಹಿಬಿಷನ್ ತೆಗೆದು ಇರುವುದರಿಂದ ನಮ್ಮ ರಾಜ್ಯಕ್ಕೆ ಹೆಚ್ಚು ಸಹಾಯ ಬೇಕಾಗಿಲ್ಲ, ಎಕ್ಸೈಸ್ ಬಾಬಿನಿಂದ ರೆವೆನ್ಯೂ ಹೆಚ್ಚಾಗಿ ಬರುತ್ತದೆ ಎಂದು ಹೇಳುತ್ತಾರೆ. ಆದರೆ ಇದೇ ರೀತಿ ಇತರ್ನ ರಾಜ್ಯಗಳವರಿಗೆ ಅವಾರ್ಡು ಕೊಡುವಾಗ ಹೇಳಿಲ್ಲ. ಇದನ್ನು ನೋಡುವಾಗ ಆಯೋಗದ ತೀರ್ಪು ಎಷ್ಟೊಂದು ವಿರೋಭಾಬಾಸವಾಗಿ ಕಾಣುತ್ತದೆ ಎನ್ನುವುದನ್ನು ನಾವು ನೋಡಬಹುದು. ಕಾನ್‌ಸ್ಟಿಟ್ಯೂಷನ್ ಪ್ರಕಾರ ನಮಗೆ ಅಧಿಕಾರವೇನೋ ಇದೆ. ನಮ್ಮ ಆಯವ್ಯಯದಲ್ಲಿ ಉಂಟಾಗಿರತಕ್ಕ ಖೋತಾ ಪರಿಸ್ಥಿತಿ ಏನಿದೆ ಅದನ್ನು ಸರಿದೂಗಿಸಿಕೊಳ್ಳುವುದಕ್ಕೆ ಕೇಂದ್ರ ಸರಕಾರದವರು ಸಹಾಯ ಧನ ಮತ್ತು ತೆರಿಗೆಗಳಿಂದ ಬರತಕ್ಕ ಪಾಲನ್ನು ನ್ಯಾಯವಾಗಿ ಕೊಡಬೇಕು. ಇದನ್ನು ಕೊಡುವಾಗ ಆಯೋಗದವರು ಸಾಮಾನ್ಯವಾಗಿ ಯಾವ ತತ್ವಗಳನ್ನು ಅನುಸರಿಸಿಕೊಂಡು ಇತರ ಕಡೆಗಳಿಗೆ ತೀರ್ಪು ಕೊಡುತ್ತಾರೋ ಆ ರೀತಿ ಇಲ್ಲಿ ಆಯೋಗದ ತೀರ್ಪು ಕೊಟ್ಟಿಲ್ಲ. ಸಮಾನವಾದ ತತ್ವಗಳನ್ನು ಅನುಸರಿಸದೆ ಆಯೋಗದವರು ಇಲ್ಲಿ ತೀರ್ಪು ಕೊಟ್ಟಿರುವುದರಿಂದ ಈ ದೇಶಕ್ಕೆ ಬಹಳ ದೊಡ್ಡ ಅನ್ಯಾಯವಾಗಿದೆ. ಆದರೆ ಬೇರೆ ಇತರ ಪ್ರಾಂತ್ಯಗಳವರು ಆಯವ್ಯಯದ ಪಟ್ಟಿಯನ್ನು ಕೊಡುವಾಗ ಅವರು ಕೆಲವು ಅಂಶಗಳನ್ನು ಆಯೋಗಕ್ಕೆ ಕೊಡದೇ ಇದ್ದುದರಿಂದ ಅವರಿಗೆಲ್ಲಾ ಅನುಕೂಲವಾಗುವಂತಹ ತೀರ್ಪು ಬರಲು ಅನುಕೂಲವಾಯಿತು. ಆದರೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿಯನ್ನು ಸರಿಯಾಗಿ ಕೊಟ್ಟಿರೂ ಇದಕ್ಕೆ ಅನುಕೂಲವಾಗುವಂತಹ ತೀರ್ಪನ್ನು ಇವರು ಕೊಡಲಿಲ್ಲ. ಇದರ ಬಗ್ಗೆ ಕೇಂದ್ರಕ್ಕೆ ಬರೆದು ಕೊನೆಯ ಪಕ್ಷ 282 ನೇ ವಿಧಿಯಂತೆ ಡಿಸ್‌ಕ್ರಿಷನರಿ ಗ್ರಾಂಟುಗಳ ಮೂಲಕವಾದರೂ ಹೆಚ್ಚು ಸಹಾಯ ಕೊಡಬೇಕೆಂದು ಒತ್ತಾಯ ಮಾಡಬೇಕಾಗಿದೆ, ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಘೋರ್ಪಡೆಯವರು ಇಲ್ಲಿ ಸಲಹೆ ಮಾಡುತ್ತಾ ಇದರ ವಿಚಾರವನ್ನು ನ್ಯಾಷನಲ್ ಡೆವಲಪ್‌ಮೆಂಟು ಕೌನ್ಸಿಲ್‌ನಲ್ಲಿ ಎಲ್ಲ ದಕ್ಷಿಣ ರಾಜ್ಯಗಳವರೊಡನೆ

(ಶ್ರೀ ಕೆ. ಎಚ್. ಶ್ರೀನಿವಾಸ್)

ಸೇರಿಕೊಂಡು ಆಯೋಗದ ತೀರ್ಪು ಸರಿಯಾಗಿಲ್ಲ ಎಂದು ಒತ್ತಾಯ ಮಾಡಿದರೆ ಇದರಿಂದ ಅನುಕೂಲವಾಗುತ್ತದೆ ಎಂದು ಹೇಳುವ ಮಾತನ್ನು ನಾನು ಒಪ್ಪುವುದಕ್ಕಾಗುವುದಿಲ್ಲ.

"We must make common cause with those" ಎಂದು ಅವರು ಹೇಳಿದರು. ಇದು ಬಹುಶಃ ಪ್ರಸಕ್ತಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ ಎಂದು ನನಗೆ ತೋರುತ್ತದೆ. ಆಂಧ್ರದವರಿಗೆ ಹಾಗೂ ತಮಿಳುನಾಡಿನವರಿಗೆ ಸಾಕಷ್ಟು ಪ್ರಭಾವ ಇದೆ ಮತ್ತು ಅವರನ್ನು ತಮ್ಮ ಬರೆಗೆ ಎಳೆದುಕೊಳ್ಳಬೇಕು ಎಂದು ಕೇಂದ್ರದವರು ಪ್ರಯತ್ನಮಾಡುತ್ತಿದ್ದಾರೆ. ಇದೂ ಅಲ್ಲದೆ ಕೇಂದ್ರ ಸರಕಾರದಲ್ಲಿ ನೀರಿನ ವಿವಾದ ಬಂದು ಇದೆ. The prospcet of making common cause with the South Indian States at the National Development Council seems to my mind to be very dim. ಆದುದರಿಂದ ಇಂದು ನಾವು ಕೇಂದ್ರದವರೊಡನೆ ಹೋರಾಟ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಇದಕ್ಕಾಗಿ ಈ ಸಭೆಯು ಸರ್ವ ಬೆಂಬಲವನ್ನೂ ಸರಕಾರಕ್ಕೆ ಕೊಡುತ್ತೇವೆ. ಇದಕ್ಕಾಗಿ ನಾನು ಸೂಚನೆ ಮಾಡುವುದು ಇತರ ಎಲ್ಲಾ ಪ್ರಾಂತ್ಯಗಳಿಗೂ ಸರಿಯಾದ ತತ್ವಗಳನ್ನು ಅನುಸರಿಸುತ್ತಿರುವಾಗ ನಮ್ಮ ರಾಜ್ಯದೊಡನೆಯೂ ಕೇಂದ್ರದವರು ಅದೇ ರೀತಿ ಸಮಾನವಾದ ತತ್ವಗಳನ್ನು ಅನುಸರಿಸಬೇಕು. ಕೇಂದ್ರ ಸರಕಾರದ ಹಾಗೂ ರಾಜ್ಯ ಸರಕಾರದ ರಾಜಕೀಯ ಒತ್ತಡಗಳಿಗೆ ಒಳಗಾಗದೇ ದೇಶದ ಜನರ ಹಿತದೃಷ್ಟಿಯಿಂದ ಎಲ್ಲರಿಗೂ ಸುಖವಾದ ಹಾಗೂ ಸರಿಸಮಾನವಾದ ಮೂಲಭೂತವಾದ ತತ್ವ ಏನಿದೆ ಅದನ್ನು ಇಲ್ಲೂ ಅನುಸರಿಸಬೇಕು ಎನ್ನುವ ಒಂದು ಎಚ್ಚರಿಕೆ ಮಾತನ್ನು ಹೇಳುತ್ತೇನೆ. ಫೆಡರಲ್ ಸ್ಟ್ರಕ್ಚರ್ ಆಡಳಿತದಲ್ಲಿ ನಂಬಿಕೆ ಬಲಪಡಿಸುವಂತಹ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿ ಒತ್ತಾಯ ಪಡಿಸುತ್ತೇನೆ.

ಎರಡನೇದು, ಮಲೆನಾಡು ಎನ್ನತಕ್ಕ ಒಂದು ಪ್ರದೇಶ ವಿಶಿಷ್ಟವಾಗಿ ನಮ್ಮ ಕರ್ಣಾಟಕ ರಾಜ್ಯದ ಒಂದು ಅವಿಭಾಜ್ಯ ಅಂಗವಾಗಿದೆ. ಬೇರೆ ಸಮಸ್ಯೆಗಳಿಗಿಂತ ಇದರಲ್ಲಿ ಒಂದು ವೈಶಿಷ್ಟ್ಯ ಇದೆ. ಈ ಭಾಗವನ್ನು ವಿಶೇಷವಾದ ರೀತಿಯಲ್ಲಿ ಸುಧಾರಿಸಬೇಕೆಂದು ಬಹಳ ದಿವಸಗಳಿಂದಲೂ ಪ್ರಯತ್ನ ನಡೆಯುತ್ತಿದೆ ಮತ್ತು ಹಿಂದೆಯೂ ನಡೆದಿದೆ. ಹಿಂದೆ ಈ ಮಲೆನಾಡು ಪ್ರದೇಶಗಳು ರಾಜಮಹಾರಾಜರುಗಳ ಕಾಲದಲ್ಲೂ ಇತ್ತು. ಆಗ ಇದ್ದ ಸರ್. ಎಂ. ವಿಶ್ವೇಶ್ವರಯ್ಯನವರು ಅವರೇ ಸ್ವತಃ ಇದನ್ನು ಸ್ಟಡೀ ಮಾಡಿ 1945 ರಲ್ಲಿ ಇದಕ್ಕಾಗಿ ಒಂದು ಕಮಿಟಿಯನ್ನು ಶ್ರೀ ಎ. ವಿ. ರಾಮನಾಥನ್‌ರವರ ನೇತೃತ್ವದಲ್ಲಿ ಮಾಡಿದ್ದರು. ಅನಂತರ ಸ್ಟೇಟು ರೀ ಆರ್ಗನೈಸೇಷನ್ ಕಮಿಷನ್ ಬಂತು. ಅವರು ಮಲೆನಾಡಿನ ಬಗ್ಗೆ ಏನು ಹೇಳಿದ್ದಾರೆಂದರೆ:

> "From this point of view the formation of Karnatak may go some way towards solving the problem of development of Malnad."

ಆಮೇಲೆ ಅವರು ಮುಂದೆ ಹೋಗಿ ಹೀಗೆ ಹೇಳುತ್ತಾರೆ:

> "Ever since 1901 when the Census first disclosed a decline of population in these areas, this question has come up for consideration from time to time. But the fact that the area is under the jurisdiction of poor Governments has to some extent impeded the formation and implementation of economic development plans in a co-ordinated manner."

ಆಮೇಲೆ ಮುಂದೆ ಹೀಗೆ ಹೇಳುತ್ತಾರೆ: The Commission concluded:

> "The fact that practically the whole of Maland will belong infuture to one State will not be insignificant also. It may be expected that co-ordinated planning for these hilly areas will be easier."

ಈ ಕಮಿಷನ್ನಿನವರ ನಿರೀಕ್ಷೆ ಏನಾಗಿತ್ತು ಅದೇ ರೀತಿಯಲ್ಲಿ ನಮ್ಮ ಕರ್ಣಾಟಕ ರಾಜ್ಯದ ಸ್ಥಾಪನೆಯಾಯಿತು. ಹಿಂದೆ ನಮ್ಮ ರಾಜ್ಯದಲ್ಲೂ ಕೂಡ ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಎಂದು,

ಮಾಡಿದ್ದರು ಮತ್ತು ಇದರಂತೆ ಸ್ಟೇಟು ಡೆವಲಪ್‌ಮೆಂಟು ಕೌನ್ಸಿಲ್ ಎಂದು ಬೇರೆ ಆಗಿತ್ತು. ಅಮೇಲೆ ಇದರ ಕೆಲಸಗಳು ಏನಾಯಿತು ಎನ್ನುವುದು ನಮಗೆ ಗೊತ್ತಾಗಲಿಲ್ಲ. ನಮ್ಮ ಕರ್ನಾಟಕದ ಮಲೆನಾಡಿನ ಬಗ್ಗೆ ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್‌ನವರು ಮಲೆನಾಡು ಭಾಗವನ್ನು ಸಂದರ್ಶಿಸಿ ಒಂದು ಸುದೀರ್ಘವಾದ ವಿಶ್ಲೇಷಣೆಯನ್ನು ಮಾಡಿ ಇಪ್ಪತ್ತು ಸಹಸ್ರ ಚದುರ ಮೈಲಿಯುಳ್ಳ ಮಲೆನಾಡು ಪ್ರದೇಶವನ್ನು ಯಾವ ರೀತಿ ಅಭಿವೃದ್ಧಿ ಮಾಡಬಹುದು ಎನ್ನುವುದರ ಬಗ್ಗೆ ಅವರ ಅಭಿಪ್ರಾಯವನ್ನು ತಮ್ಮ ಒಂದು ವರದಿಯಲ್ಲಿ ಹೇಳಿದ್ದಾರೆ. ಅವರೇ ಹೇಳಿರುವಂತೆ ಮಲೆನಾಡಿನಲ್ಲಿ ಎಷ್ಟುಮಟ್ಟಿಗೆ ಎರಡು ಬೆಳೆ ಬೆಳೆಯಬಹುದು ಅಂತಹ ಪ್ರದೇಶಗಳನ್ನು ಹೆಚ್ಚು ಮಾಡಿ ವ್ಯವಸಾಯದ ಉತ್ಪನ್ನಗಳನ್ನು ಹೆಚ್ಚಿಸತಕ್ಕ ಕ್ರಮಗಳೇನು ಎನ್ನುವುದನ್ನು ತಿಳಿಸುತ್ತಾ ಸುಮಾರು ಐದು ಲಕ್ಷ ಎಕರೆಗಳಲ್ಲಿ ಹಣ್ಣು ಬೆಳೆಯಬಹುದು, ಸುಮಾರು 13 ಲಕ್ಷ ಎಕರೆಗಳಲ್ಲಿ ಭತ್ತ ಬೆಳೆಯಬಹುದು ಎನ್ನುವ ಕೆಲವು ವಿವರಗಳನ್ನೆಲ್ಲಾ ಅವರು ವರದಿಯಲ್ಲಿ ಕೊಟ್ಟಿದ್ದಾರೆ. ಹಾಗೇ ಕೈಗಾರಿಕಾ ಪ್ರಗತಿ ಯಾವ ರೀತಿ ಮಾಡಬಹುದು ಎನ್ನುವುದರ ಬಗ್ಗೆ ನಿರ್ದಿಷ್ಟವಾದ ಶಿಫಾರಸುಗಳನ್ನೂ ಮಾಡಿದ್ದಾರೆ. ಇದರ ಅಧ್ಯಕ್ಷರಾಗಿದ್ದ A. T. A. Lear Mouth, ಎನ್ನುವವರು ಈ ರೀತಿ ಹೇಳುತ್ತಾರೆ:

> "In view of the prolonged monsoon in the Maland, there is an enforced lull in many agricultural activities. It is therefore obvious that cottage and village industries have a most important role to play in the development of the area."

ಇಲ್ಲಿರುವ ಸಾಯಿಲ್ ಯೀಲ್ತಿಂಗು ಯಾವ ರೀತಿ ಇದೆ, ಯಾವ ರೀತಿ ಬೆಳೆಯನ್ನು ಬೆಳೆಸಬಹುದು. ಮಲೆನಾಡಿನಲ್ಲಿ ಯಾವ ರೀತಿ ಬೆಳೆಯನ್ನು ಬೆಳೆಸಲು ಸಾಧ್ಯ ಎನ್ನುವುದನ್ನು ಇದರಲ್ಲಿ ಹೇಳಿದ್ದಾರೆ ಇದನ್ನು ಅವರು ಪ್ರಸ್ತಾಪ ಮಾಡಿರತಕ್ಕದ್ದು ಎರಡು ಉದ್ದೇಶದಿಂದ. ಮೊದಲನೇದು ಮಲೆನಾಡಿನಲ್ಲಿ ಕೆಲವು ಸಣ್ಣ ಕೆರೆಗಳು ಇವೆ, ಇಂತಹ ಕೆರೆಗಳನ್ನು ರಿಪೇರಿ ಮಾಡುವುದು. ಮಳೆ ಹೆಚ್ಚಾಗಿ ಬರುವ ನಮ್ಮ ಈ ಮಲೆನಾಡಿನಲ್ಲಿರುವ ಸಣ್ಣ ಕೆರೆಗಳನ್ನು ಬಯಲು ಸೀಮೆಯ ಕೆರೆಗಳಂತೆ ಒಡ್ಡು ಹಾಕಿ ರಿಪೇರಿ ಮಾಡಲು ಆಗುವುದಿಲ್ಲ. ಬಯಲು ಸೀಮೆ ಕೆರೆಗಳಂತೆ ರಿಪೇರಿ ಮಾಡಿದರೆ ನಮ್ಮ ಮಲೆನಾಡಿನ ಕೆರೆಗಳ ದಂಡೆಯೆಲ್ಲಾ ಒಡೆದು ಹೋಗುತ್ತವೆ. ಇಲ್ಲಿ ರಸ್ತೆಗಳನ್ನು ರಿಪೇರಿ ಮಾಡಿ ಇದಕ್ಕೆ ಮಣ್ಣು ಕಲ್ಲುಗಳನ್ನು ಒಂದು ವರ್ಷದಲ್ಲಿ ಹಾಕಿರುವುದನ್ನು ಮುಂದಿನ ವರ್ಷದಲ್ಲಿ ಬಂದು ನೋಡಿದರೆ ಅವು ಪೂರ್ತಿ ಮಳೆಯಿಂದ ಕೊಚ್ಚಿ ಹೋಗಿರುತ್ತವೆ. ಇಲ್ಲಿ ಯಾವಾಗಲೂ ಗಟ್ಟಿಯಾದ ಸಿಮೆಂಟು ಕಾಂಕ್ರಿಟು ಅಥವ ಟಾರು ರಸ್ತೆಗಳನ್ನು ಮಾಡಬೇಕು. ಇಲ್ಲದೇ ಇದ್ದರೆ ಮಳೆ ಹೊಡೆತದಿಂದ ರಸ್ತೆಗಳು ಹಾಳಾಗುತ್ತವೆ.

11-00 A.M.

ಏಕೆಂದರೆ ಆ ಭಾಗದಲ್ಲಿ ಮಳೆ ಹೆಚ್ಚು ಬೀಳುತ್ತದೆ. ಇವತ್ತು ಯಾವ ಪ್ರಶ್ನೆ ಬಂದರೂ ಕೂಡ ಸರ್ಕಾರದವರು ಪಂಚಾಯಿತಿಯವರು 5 ಪರ್‌ಸೆಂಟ್ ಹಣ ಕೊಟ್ಟರೆ ಉಳಿದ ಹಣವನ್ನು ನಾವು ಕೊಡುತ್ತೇವೆಂದು ಹೇಳುತ್ತಾರೆ. ನಮ್ಮ ಜಿಲ್ಲೆ ಏರಿಯಾದಲ್ಲಿ ದೊಡ್ಡದಾದರೂ ಕೂಡ ಜನಸಂಖ್ಯೆಯ ಪ್ರಮಾಣ ಸೇಕಡಾ ಮೂರೂವರೆಯಿಂದ ನಾಲ್ಕರಷ್ಟು ಮಾತ್ರ ಇದೆ. ಒಂದೊಂದು ಪಂಚಾಯಿತಿಯವರು 5 ಪರ್‌ಸೆಂಟ್ ಹಣ ಕೂಡಿಸಿ ಕೊಡಬೇಕೆಂದು ಹೇಳಿದರೆ 200-300 ರೂಪಾಯಿಗಳು ವಸೂಲಿಯಾಗಬಹುದು. ಅದೇ ಬಯಲುಸೀಮೆಯಲ್ಲಿಯಾದರೆ 5 ಪರ್‌ಸೆಂಟ್‌ನಂತೆ ವಸೂಲಿ ಮಾಡಿದರೂ ಕೂಡ 15-20 ಸಾವಿರ ರೂಪಾಯಿಗಳು ವಸೂಲಿಯಾಗುತ್ತದೆ. ಇವತ್ತು ಎಸ್.ಎಸ್.ಎಲ್.ಸಿ. ಸೆಂಟರ್ ಕೊಡಬೇಕು ಎಂದು ಕೇಳಿದರೆ 200 ಹುಡುಗರು ಇದ್ದರೆ ಸೆಂಟರ್ ಕೊಡುತ್ತೇವೆಂದು ಹೇಳುತ್ತಾರೆ. ನಮ್ಮ ಭಾಗದಲ್ಲಿ ಯಾವ ಸೆಂಟರ್‌ನಲ್ಲಿಯೂ ಕೂಡ 200 ಹುಡುಗರು ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಹುಡುಗರು 10-15 ಮೈಲಿ ದೂರವಿರತಕ್ಕಂಥ ಸೆಂಟರ್‌ಗಳಿಗೆ ಹೋಗಿ ಅಲ್ಲಿ ತಮ್ಮ ವಸತಿ ಸೌಕರ್ಯವನ್ನು ಕಲ್ಪಿಸಿಕೊಂಡು ನಂತರ ಪರಿಕ್ಷೆಗೆ ಹೋಗಬೇಕಾದ ಸ್ಥಿತಿ ಬಂದಿದೆ. ಇವತ್ತು ಸರ್ಕಾರದವರು ಮಾಡಿರತಕ್ಕಂಥ ಧೋರಣೆಗಳು ಬಯಲುಸೀಮೆಯ ಅನುಭವಗಳನ್ನು ನೋಡಿಕೊಂಡು ಮಾಡಿರುವಂಥಾದ್ದಾಗಿವೆ. ಇದೇ ಧೋರಣೆಯನ್ನು ಇನ್-ಟೋ ಟೋ ಆಗಿ ಮಲೆನಾಡಿನ ಪ್ರದೇಶಕ್ಕೂ ಅನುಸರಿಸಿದರೆ ಬಹಳ ತೊಂದರೆಯಾಗುತ್ತದೆ. ಈ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಮಲೆನಾಡಿನ ವೈಶಿಷ್ಟ್ಯವನ್ನು ಮನಗಂಡು ಅಲ್ಲಿಯ ಜನರ ಅನುಕೂಲಕ್ಕೆ ತಕ್ಕಂಥ ಬದಲಾವಣೆಗಳನ್ನು ಮಾಡಬೇಕು. ಮ

(ಶ್ರೀ ಕೆ. ಎಚ್. ಶ್ರೀನಿವಾಸ್)

ನಾಡಿನ ಅಭಿವೃದ್ಧಿಗಾಗಿ ಮೂಲಭೂತವಾದಂಥ ಬದಲಾವಣೆಗಳಾಗಬೇಕಾಗಿದೆಯೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಇದೇ ವಿಷಯವನ್ನು ನಮ್ಮ ಆರ್ಥಿಕ ಸಚಿವರ ಹತ್ತಿರ ಪ್ರಸ್ತಾಪ ಮಾಡಿದಾಗ ಮಲೆನಾಡಿನವರಿಗೆ ಒಂದು ಪ್ರತ್ಯೇಕವಾದ ಯೋಜನೆಯನ್ನು ತಯಾರು ಮಾಡಿದರೆ ಬಯಲುಸೀಮೆಯವರು ತಮಗೂ ಒಂದು ಪ್ರತ್ಯೇಕವಾದ ಯೋಜನೆ ಬೇಕು ಎಂದು ಕೇಳುತ್ತಾರೆ, ಏನು ಮಾಡುವುದು ಎಂದು ಹೇಳಿದರು. ಬಯಲುಸೀಮೆಯನ್ನು ಆಧಾರವಾಗಿ ಇಟ್ಟುಕೊಂಡು ಈಗಾಗಲೇ ಯೋಜನೆ ತಯಾರು ಮಾಡಿರುವುದರಿಂದ ಬಯಲುಸೀಮೆಗಾಗಿಯೇ ಮತ್ತೊಮ್ಮೆ ಹೊಸ ಯೋಜನೆ ಮಾಡುವ ಸಂದರ್ಭ ಬರುವುದಿಲ್ಲ. ಈ ಯೋಜನೆಗಳು ನಮಗೆ ಪ್ರಯೋಜನವಾಗದೇ ಇರುವುದರಿಂದ ನಮ್ಮ ಮಟ್ಟಿಗೆ ಬದಲಾವಣೆ ಮಾಡಿಕೊಡಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ. ಹಿಂದೆ ಮಲೆನಾಡಿನಲ್ಲಿ ಟೆನಿಸಿವ್ಯಾಲಿ ರೀತಿಯ ಒಂದು ಯೋಜನೆ ಕೈಕೊಳ್ಳಬೇಕೆಂದಿದ್ದರು, ನಂತರ ಕೇಂದ್ರ ಸರ್ಕಾರದವರು ಪೈಲಟ್ ಪ್ರಾಜೆಕ್ಟ್ ಬೇಸಿಸ್ ಮೇಲೆ ಕೆಲವೊಂದು ಅಭಿವೃದ್ಧಿ ಕಾರ್ಯಗಳನ್ನು ನಮ್ಮ ಭಾಗದಲ್ಲಿ ಕೈಕೊಳ್ಳುತ್ತೇವೆಂದು ಹೇಳಿದರು. ಇತ್ತೀಚೆಗೆ ಇವುಗಳ ಬಗ್ಗೆ ಯಾವ ಸ್ಪಷ್ಟನೆಯೂ ದೊರೆಯುತ್ತಿಲ್ಲ. ನಮ್ಮ ಭಾಗದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಬೇಕೆಂದು ಮಾನ್ಯ ಅರ್ಥಸಚಿವರನ್ನು ನಾನು ಕೇಳಿಕೊಳ್ಳುವ ಉದ್ದೇಶದಲ್ಲಿ ನಮಗೇ ಬೇರೆ ರಾಜ್ಯ ಬೇಕೆಂದು ಅಲ್ಲ, ಮಂತ್ರಿಮಂಡಲದಲ್ಲಿ ನಮಗೆ ಪ್ರಾತಿನಿಧ್ಯ ಬೇಕು ಎಂದು ಅಲ್ಲ, ನಮಗೆ ಇರತಕ್ಕಂಥ ತೊಂದರೆಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂಬುದೇ ನನ್ನ ಮುಖ್ಯ ಉದ್ದೇಶವಾಗಿದೆ. ಕ್ಯೂನಲ್ಲಿ ನಿಂತಿರುವವರಿಗೆಲ್ಲಾ ಡಾಕ್ಟರ್ ಒಂದೇ ರೀತಿಯ ಔಷಧವನ್ನು ಕೊಡುವುದಕ್ಕೆ ಹೇಗೆ ಸಾಧ್ಯವಿಲ್ಲವೋ ಅದರಂತೆ ಎಲ್ಲ ಭಾಗಗಳನ್ನು ಸರ್ಕಾರದವರು ಒಂದೇ ರೀತಿ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಸರ್ಕಾರದವರು ಮಲೆನಾಡಿನ ಬಗ್ಗೆ ವಿಶೇಷ ಗಮನ ಕೊಡುವುದರ ಜೊತೆಗೆ ಒಂದು ವಿಶೇಷವಾದಂಥ ಯೋಜನೆಯನ್ನು ಮಲೆನಾಡಿನ ಬಗ್ಗೆ ಕೈಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ. ಬಡ್ಜೆಟ್‌ನಲ್ಲಿ ಅನೇಕ ವಿಷಯಗಳು ಪ್ರಸ್ತಾಪವಾಗಿವೆ. ಶಿಕ್ಷಣದ ಬಗ್ಗೆ ಗುಣವರ್ಧನ ಮಾಡುವ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಶಿಕ್ಷಣವನ್ನು ಆದಷ್ಟು ವಕೇಷನಲ್ ಮಾಡುವ ಬಗ್ಗೆ ತೀವ್ರವಾದಂಥ ಬದಲಾವಣೆಯಾಗಬೇಕಾಗಿದೆ. ಇದಕ್ಕೆ ಆದ್ಯಗಮನಕೊಡಬೇಕೆಂದು ಹೇಳುತ್ತೇನೆ. ಪೇ ಕಮಿಷನ್ ಅವಾರ್ಡ್‌ನ್ನು ಸರ್ಕಾರದವರು ಹೆಚ್ಚುಕಡಿಮೆ ಒಪ್ಪಿಕೊಂಡಿದ್ದಾರೆ. ಮತ್ತು ನೌಕರವರ್ಗದವರ ಸಂಬಳಸಾರಿಗೆಯನ್ನು ಹೆಚ್ಚು ಮಾಡಿದ್ದಾರೆ. ನೌಕರರಿಗೆ ಇನ್ನೂ ಹಲವಾರು ರೀತಿಯ ಸೌಲಭ್ಯಗಳನ್ನು ಕೊಡುವ ಬಗ್ಗೆ ಬಡ್ಜೆಟ್ ಭಾಷಣದಲ್ಲಿ ಸೂಚಿಸಲಾಗಿದೆ. ಸಂಬಳದ ಹೆಚ್ಚಳ ಅನೇಕ ಸಲ ಆಗಿದೆ. ಆದರೂ ಕೂಡ ನೌಕರವರ್ಗದವರು ಸಮರ್ಥವಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಈ ಕಾರಣಗಳಿಂದ ಹಲವಾರು ಯೋಜನೆಗಳು ನಿರ್ದಿಷ್ಟವಾದಂಥ ಪ್ರತಿಫಲ ನೀಡುತ್ತಿಲ್ಲ. ಯಾರು ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲವೋ ಅಂತಹವರನ್ನು ಕಡ್ಡಾಯವಾಗಿ ಕೆಲಸದಿಂದ ರಿಟೈರ್ ಮಾಡುತ್ತಿರುವುದು ಕಂಡುಬರುತ್ತಿದೆ. ಕರಪ್ಷನ್ ಕಂಡುಬಂದರೆ ಡಿಸ್‌ಮಿಸ್ ಮಾಡುವಂತಹ ತೀರ್ಮಾನವನ್ನು ಸರ್ಕಾರದವರು ಕೈಕೊಂಡಿದ್ದಾರೆಂದು ತಿಳಿದುಬಂತು. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಎಂ.ಸಿ.ಎಸ್.ಆರ್. ನ್ನು ಸೂಕ್ತ ರೀತಿಯಲ್ಲಿ ಬದಲಾವಣೆ ಮಾಡದೇ ಹೋದರೆ ನೌಕರವರ್ಗದಲ್ಲಿ ಕೇವಲ ಅದಕ್ಷರಿಗೇ ಹೆಚ್ಚಿನ ಅವಕಾಶವನ್ನು ಮಾಡಿಕೊಟ್ಟಂತಾಗುತ್ತದೆ. ಅದಕ್ಷರು ಹೆಚ್ಚು ಇರುವ ಕಡೆ ದಕ್ಷರಾದವರು ಸಹ ಸರಿಯಾಗಿ ಕೆಲಸ ಮಾಡುವುದು ಕಷ್ಟವಾಗುತ್ತದೆ. ಈ ಕಾರಣದಿಂದ ನೌಕರ ವರ್ಗದಲ್ಲಿ ಅದಕ್ಷತೆಯನ್ನು ಹೋಗಲಾಡಿಸಲು, ಇಲ್ಲಸಲ್ಲದ ದಾರಿಯನ್ನು ತುಳಿಯುವುದನ್ನ ತಪ್ಪಿಸಲು ಸರ್ಕಾರದವರು ನಿರ್ದಿಷ್ಟವಾದ ಪ್ರಯತ್ನ ಮಾಡಿದಲ್ಲಿ ರಾಜ್ಯದಲ್ಲಿರುವ ನೌಕರವರ್ಗ ದೇಶಭಕ್ತಿಯಿಂದ ದುಡಿಯುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಕೈಗಾರಿಕೆಗಳ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಕೈಗಾರಿಕೆಗಳಲ್ಲಿ ಸುಮಾರು 149 ಕೋಟಿ ರೂಪಾಯಿಗಳವರೆಗೆ ಬಂಡವಾಳವನ್ನು ತೊಡಗಿಸಿದ್ದರೂ ಕೂಡ ಲಾಭದ ಸೂಚನೆಗಳು ಕಂಡುಬರುತ್ತಿಲ್ಲ. ಸರ್ಕಾರದವರು ಲಾಭ ಬರುವಂತೆ ಎಷ್ಟೇ ಪ್ರಯತ್ನಗಳನ್ನು ಮಾಡುತ್ತಿದ್ದರೂ ಕೂಡ ಯಶಸ್ವಿಯಾಗಿಲ್ಲ ಎನ್ನುವುದು ತುಂಬಾ ಆಶ್ಚರ್ಯವಾದ ವಿಚಾರ. ಲಾಭದಿಂದ ಕೈಗಾರಿಕೆ ನಡೆಯುತ್ತಿಲ್ಲ ಎಂಬ ಕಾರಣದಿಂದ ಅದನ್ನು ಖಾಸಗೀಯವರಿಗೆ ಕೊಡುವುದು ಸಮಾಜವಾದ ಅಲ್ಲ ಎಂದು ಹೇಳುವುದನ್ನು ನಾನು ವಿರೋಧ ಮಾಡುವುದಕ್ಕೆ ಬಯಸುವುದಿಲ್ಲ. ಆದರೆ ಸರ್ಕಾರ ಕೈಗಾರಿಕೆಗಳನ್ನು ನಡೆಸುತ್ತಿರುವ ವಿಷಯದಲ್ಲಿ ನಮ್ಮ ನಂಬಿಕೆ ಸಡಿಲಗೊಳ್ಳುವಂತಹ ರೀತಿಯಲ್ಲಿ ಇದು ಆಗಬಾರದು. ಆ ರೀತಿ ಆದರೆ ನಾವು ಏನು ಸಮಾಜವಾದವನ್ನು ನಂಬಿಕೊಂಡಿದ್ದೇವೆ ಅದಕ್ಕೆ

ತದ್ವಿರುದ್ಧವಾದ ಕ್ರಮವಾಗುತ್ತದೆಂದು ನನಗನ್ನಿಸುತ್ತದೆ. ಸಮಾಜವಾದದ ಒಂದು ವಾದಕ್ಕೆ ಜೋತುಬೀಳಬೇಕು ಎಂದು ನನ್ನ ಅಭಿಪ್ರಾಯವಲ್ಲ. ಯಾವ ವಾದಕ್ಕೂ ಆತುಕೊಳ್ಳಬಾರದು ಎಂಬುದನ್ನು ಸಮರ್ಥನೆ ಮಾಡುವುದು ಕಷ್ಟವಾಗುತ್ತದೆ. ಎಕ್ಸೈಜ್ ಕಂಟ್ರಾಕ್ಟ್‌ನಲ್ಲಿ, ಲೋಕೋಪಯೋಗಿ ಇಲಾಖೆ ಕಂಟ್ರಾಕ್ಟ್‌ನಲ್ಲಿ, ಲಾಟರಿಯಲ್ಲಿ ಸಮಾಜವಾದವನ್ನು ಜಾರಿಗೆ ತರಬೇಕೆಂದು ಹೇಳುವುದು ಎಷ್ಟು ಅಸಂಬದ್ಧವೋ ಅಷ್ಟೇ ಅಸಂಬದ್ಧ ಇದಕ್ಕೂ ಅನ್ವಯವಾಗುತ್ತದೆ, ಕೋಸುಗಡ್ಡೆಯಲ್ಲಿರುವ ಎಲೆಗಳನ್ನು ತೆಗೆದು ಅದರಲ್ಲಿ ಗೆಡ್ಡೆಯನ್ನು ಹುಡುಕಿದಂತಾದೀತು ಎಂಬ ಶಂಕೆಯನ್ನು ವ್ಯಕ್ತಪಡಿಸುತ್ತೇನೆ.

ಈ ಸಲ ಮಾನ್ಯ ಆರ್ಥಿಕ ಮಂತ್ರಿಗಳು ಕನ್ನಡದಲ್ಲಿ ಪ್ರಪ್ರಥಮವಾಗಿ ತಮ್ಮ ಆಯವ್ಯಯ ಭಾಷಣವನ್ನು ನೀಡಿ ಈ ಸದನದ ಎಲ್ಲ ಸದಸ್ಯರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಅದಕ್ಕಾಗಿ ಅವರನ್ನು ನಾನು ಈ ಸಂದರ್ಭದಲ್ಲ ಅಭಿನಂದಿಸುತ್ತೇನೆ. ಅವರು ಕನ್ನಡದಲ್ಲಿ ಭಾಷಣ ಮಾಡಿದ್ದು ಮಾತ್ರವಲ್ಲ, ಕನ್ನಡದ ಬೆಳವಣಿಗೆಯ ಬಗ್ಗೆ ಉತ್ತಮವಾದಂಥ ಸಲಹೆಗಳನ್ನು ಮತ್ತು ಸಹಾಯದ ಭರವಸೆಯನ್ನು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. ಕನ್ನಡದ ಬೆಳವಣಿಗೆಯ ಬಗ್ಗೆ ತಮ್ಮ ಶಕ್ತಿ ಇದ್ದಷ್ಟು ಸಹಾಯ ಮಾಡುವುದಾಗಿ ಮತ್ತು ಕ್ರಮ ಕೈಕೊಳ್ಳುವುದಾಗಿ ಭರವಸೆ ಕೊಟ್ಟಿದ್ದಾರೆ. ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಸ್ವಾತಂತ್ರ್ಯ ಬರುವುದಕ್ಕೆ ಪೂರ್ವದಲ್ಲಿಯೇ ಉನ್ನತ ವಿದ್ಯಾಭ್ಯಾಸವನ್ನು ಉರ್ದುಭಾಷೆಯಲ್ಲಿಯೇ ನೀಡಲಾಗುತ್ತಿತ್ತು. ಸ್ವಾತಂತ್ರ್ಯ ಬಂದ ಇಷ್ಟು ವರ್ಷಗಳಾದರೂ ಕೂಡ ನಾವು ಇನ್ನೂ ಮಾಡುವುದಕ್ಕಾಗಲಿಲ್ಲ ಎಂದರೆ ತಲೆತಗ್ಗಿಸಬೇಕಾಗುತ್ತದೆ. ಬೇರೆ ವಿಷಯಗಳಿಗೆ ಪ್ರೋತ್ಸಾಹ ಕೊಟ್ಟಂತೆ ಇದಕ್ಕೂ ಸಾಂಕೇತಿಕ ಪ್ರೋತ್ಸಾಹ ಕೊಡುವುದು ಉಚಿತವಲ್ಲ. ಕನ್ನಡವನ್ನು ಸರ್ವಾಂಗಸುಂದರ ಭಾಷೆಯನ್ನಾಗಿ ರಾಜ್ಯದ ಆಡಳಿತ ಭಾಷೆಯನ್ನಾಗಿ ಮಾಡುವಂತಹ ತೀವ್ರ ಜವಾಬ್ದಾರಿ ಸರ್ಕಾರದ ಮೇಲೆ ಇದೆ, ಆ ಜವಾಬ್ದಾರಿಯನ್ನು ಯಶಸ್ವಿಯಾಗಿ ನೆರವೇರಿಸಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರಸಿ).—ಸನ್ಮಾನ್ಯ ಸಭಾಧ್ಯಕ್ಷರೇ, ಇಲ್ಲಿಯವರೆಗೂ ಮಾತನಾಡಿದಂತಹ ನನ್ನ ಮಿತ್ರರಾದ ಶ್ರೀ ಶ್ರೀನಿವಾಸ ಅವರು ಸಮಾಜವಾದ ಸಮಾಜವನ್ನು ರಚನೆ ಮಾಡತಕ್ಕಂತ ನೀತಿ ಅಷ್ಟೊಂದು ಹೆಚ್ಚಾಗಿ ಈ ಬಡ್ಜೆಟ್‌ನಲ್ಲಿ ಅಡಕವಾಗಿ ಇಲ್ಲ, ಆ ಒಂದು ಧೋರಣೆಯನ್ನು ಸರ್ಕಾರದವರು ತಾಳಬೇಕು ಎಂಬುದಾಗಿ ಹೇಳಿದರು. ಅದು ನಿಜವಾಗಿಯೂ ಮೆಚ್ಚತಕ್ಕಂಥ ಅಂಶ. ಮಾನ್ಯ ಆರ್ಥಿಕ ಸಚಿವರು 1970-71 ನೇ ಸಾಲಿಗೆ ಮಂಡಿಸಿದ ಬಡ್ಜೆಟ್‌ನ ಭಾಷಣದ ಮೂಲ ತತ್ವವನ್ನು ಯೋಚನೆ ಮಾಡುವುದಾದರೆ ಅದರಲ್ಲಿ ನಿರ್ಗತಿಕರಾದ ಹರಿಜನ ಗಿರಿಜನರಿಗೆ ಕಾರ್ಮಿಕವರ್ಗದವರಿಗೆ ಮತ್ತು ಇತರ ದುರ್ಬಲರಾದವರಿಗೆ ವಿಶೇಷವಾದಂತಹ ಗಮನಕೊಟ್ಟಿಲ್ಲವೆಂದು ಹೇಳಬಹುದು. ಇವರ ಅಭ್ಯುದಯನಕ್ಕಾಗಿ ಸಮಾಜವಾದ ಸಮಾಜ ರಚನೆ ಮಾಡುತ್ತೇನೆಂದು ಹೇಳಿಕೊಳ್ಳುವ ಜನ, ರಾಮರಾಜ್ಯ ಸ್ಥಾಪನೆ ಮಾಡುತ್ತೇವೆಂದು ಹೇಳಿಕೊಳ್ಳುವ ಜನ, ಸುಖೀ ರಾಜ್ಯ ಸ್ಥಾಪನೆ ಮಾಡುತ್ತೇವೆಂದು ಹೇಳಿಕೊಳ್ಳುವ ಜನ ಯಾವ ಕೆಲಸವನ್ನು ಮಾಡಬೇಕಾಗಿತ್ತೋ ಆ ಕೆಲಸವನ್ನು ಮಾಡುವುದಕ್ಕೆ ಬೇಕಾದಂಥ ಹಣದ ವ್ಯವಸ್ಥೆ ಮಾಡಿಲ್ಲ. ಮಾನ್ಯ ಆರ್ಥಿಕ ಸಚಿವರನ್ನು ಅಭಿನಂದಿಸಬೇಕಾಗಿರುವುದು ಒಂದೇ ಒಂದು ಕಾರಣಕ್ಕಾಗಿ, ಅದು ಏನೆಂದರೆ ಅವರು ತಮ್ಮ ಭಾಷಣವನ್ನು ಕನ್ನಡದಲ್ಲಿ ಅಲಂಕಾರಗರ್ಭಿತವಾದ ಶೈಲಿಯಲ್ಲಿ, ಸಾಹಿತ್ಯ ಗರ್ಭಿತವಾದ ಶೈಲಿಯಲ್ಲಿ ಓದಿರುವುದಕ್ಕಾಗಿ ಮಾತ್ರ ಕನ್ನಡಕ್ಕೆ ಹೆಚ್ಚಿನ ಆದ್ಯತೆ ಕೊಡಲಾಗುತ್ತದೆಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಕನ್ನಡವೇ ಆಡಳಿತ ಭಾಷೆಯಾಗಬೇಕು, ಎಲ್ಲ ಮಟ್ಟದ ಶಿಕ್ಷಣವನ್ನು ಸಹ ಕನ್ನಡದಲ್ಲಿಯೇ ಕೊಡಬೇಕು, ಆ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಎಂದು ಹೇಳುತ್ತೇನೆ.

ಅನ್ನ, ಬಟ್ಟೆ, ವಸತಿ, ಇವುಗಳು ಇಲ್ಲದೆ ಅನೇಕ ಜನ ನಿಮ್ಮ ವರ್ಗದವರು, ನಿಮ್ಮ ಪಂಗಡದವರು ಬೀದಿ ಭಿಕಾರಿಗಳಾಗಿ ತಿರುಗುತ್ತಿದ್ದಾರೆ. ಅವರ "ಸಮಸ್ಯೆ" ಇನ್ನೂ ಸರಿಯಾಗಿ ಪರಿಹಾರವಾಗಿಲ್ಲ. ರಾಜ್ಯಾಂಗಬದ್ಧವಾಗಿ ಅವರಿಗೆ ಅನುಕೂಲಗಳು ಕಲ್ಪನೆಯಾಗಿಲ್ಲ. ಈ ಅಂಕಿ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಹಣಕಾಸಿನ ಮಂತ್ರಿಗಳು ಬಡ್ಜೆಟ್ಟನ್ನು ತಯಾರು ಮಾಡಬೇಕಾಗಿತ್ತು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಬ್ಬರು ಡೈರೆಕ್ಟರು, ಹಲವಾರು ಅಸಿಸ್ಟೆಂಟ್ ಡೈರೆಕ್ಟರು, ಒಬ್ಬರು ಇಲಾಖಾ ಸೆಕ್ರೆಟರಿಗಳು, ಮತ್ತಿಬ್ಬರು ಅಂಡರ್ ಸೆಕ್ರೆಟರಿಗಳು, ಇವರುಗಳನ್ನೆಲ್ಲಾ ನೋಡಿ ಈ ಇಲಾಖೆಗೆ $3\frac{1}{2}$ ಕೋಟಿ ರೂಪಾಯಿಗಳು ನಾನ್‌ಪ್ಲಾನ್ ಎಕ್ಸ್‌ಪೆಂಡಿಚರಿಗಾಗಿ, ಈ ಒಂದು ಇಲಾಖೆಗೆ ಬಡ್ಜೆಟ್ಟಿನಲ್ಲಿ ಸೂಚನೆ ಮಾಡಿದ್ದಾರೆ. ಆದರೆ ಇವೊತ್ತು ನಾವು

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಒತ್ತಾಯ ಮಾಡುತ್ತಿರುವುದು 100ಕ್ಕೆ 18 ಭಾಗ ಬಡ್ಜೆಟ್ಟಿನಲ್ಲಿರತಕ್ಕ ಹಣವನ್ನು ದುರ್ಬಲವರ್ಗದವರಿಗೆ, ನಿಮ್ನ ವರ್ಗದವರಿಗೆ ಸಾಮಾಜಿಕ ಪ್ರಗತಿಗಾಗಿ ಖರ್ಚು ಮಾಡಬೇಕೆಂದು. ಆದರೆ ಬಡ್ಜೆಟ್ಟಿನಲ್ಲಿ ಅಂಥ ಒಂದು ವ್ಯವಸ್ಥೆ ಆಗಿಲ್ಲ.

ವಸತಿ ವಿಷಯದಲ್ಲಿ ಹೇಳುವುದಾದರೆ ಇವೊತ್ತು ಪ್ರಜಾ ಸರ್ಕಾರ ಸಾಮಾನ್ಯ ಜನಗಳಿಗೆ ವಸತಿಯನ್ನು ಒದಗಿಸಿಕೊಡುವುದಕ್ಕೆ ಶಕ್ತಿ ಇಲ್ಲದಿದ್ದರೆ ಇದು ಪ್ರಜಾ ಸರ್ಕಾರ ಎಂದು ಎನಿಸಿಕೊಳ್ಳುತ್ತದೆಯೇ? 1940ನೇ ಇಸವಿಯಲ್ಲಿ ಹರಿಜನರಿಗೆ ವಸತಿ ಸೌಕರ್ಯವನ್ನು ಒದಗಿಸಿಕೊಡುವುದರಲ್ಲಿ ಹೌಸಿಂಗ್ ಸಬ್ಸಿಡಿ ಕೊಡುವುದು ಜಾರಿಗೆ ಬಂತು. ಅದಕ್ಕಾಗಿ 19-20 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಪ್ರತಿವರ್ಷ ಒದಗಿಸುತ್ತಿದ್ದರು. 1967ನೇ ಇಸವಿಯಲ್ಲಿ ಅದನ್ನು ನಿಲ್ಲಿಸಿದರು. ಕೋಆಪರೇಟೀವ್ ಸೆಕ್ಟಾರ್‌ನಲ್ಲಿ ಹೌಸಿಂಗ್ ಸೊಸೈಟಿಗಳನ್ನು ಮಾಡಿ ಅದರ ಮೂಲಕ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಹಣವನ್ನು ಒದಗಿಸಿಕೊಡಲು ಆರಂಭಿಸಿದರು, 5 ವರ್ಷಗಳ ಕಾಲ ಯಾವುದೂ ಇಲ್ಲದೆ ನಿಂತಿತು. ಇವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕಾಗಿ ಒಟ್ಟು 3.40 ಕೋಟಿ ರೂಪಾಯಿಗಳನ್ನು 1967 ರಿಂದ ಕೊಟ್ಟಿದ್ದಾರೆ. ಇನ್ನೂ ನಿಮ್ನ ವರ್ಗದವರು ಮತ್ತು ನಿಮ್ನ ಪಂಗಡದವರಿಗಾಗಿ 80 ಸಾವಿರ ಮನೆಗಳನ್ನು ಕಟ್ಟಬೇಕಾಗಿದೆ. 40 ಲಕ್ಷ ಪ್ರಜಾಸಂಖ್ಯೆ ಇರತಕ್ಕ ಈ ವರ್ಗದವರ ಜನಸಂಖ್ಯೆ 1971ನೇ ಇಸವಿಯ ವೇಳೆಗೆ ಸುಮಾರು 60 ಲಕ್ಷದವರೆಗೂ ಏರಬಹುದು. ಇವರ ಸಮಸ್ಯೆಗಳನ್ನು ಬಿಡಿಸದ ಹೊರತು ರಾಜ್ಯದಲ್ಲಿ ಯಾವ ಪ್ರಗತಿಯೂ ಆಗುವುದಿಲ್ಲ. ಹರಿಜನರ ಸಮಸ್ಯೆ ರಾಜ್ಯದ ಸಮಸ್ಯೆ ಮಾತ್ರವಲ್ಲ. ರಾಷ್ಟ್ರದ ಸಮಸ್ಯೆಯೂ ಹೌದು. ಹರಿಜನರ ಸಮಸ್ಯೆಯನ್ನು ಬಗೆಹರಿಸದೇ ಹೋದರೆ ರಾಜ್ಯಕ್ಕಾಗಲೀ, ರಾಷ್ಟ್ರಕ್ಕಾಗಲೀ ಕಲ್ಯಾಣವಾಗುವುದಿಲ್ಲ; ಈ ಹರಿಜನರ ಮತ್ತು ಗಿರಿಜನರ ಹೌಸಿಂಗ್ ಸೊಸೈಟಿಗಳು ಏನಿವೆ ಇವುಗಳಲ್ಲಿ 10 ರೂಪಾಯಿಗಳನ್ನು ಕೊಟ್ಟು ಸದಸ್ಯರಾಗುವುದಕ್ಕೆ ಸಾಧ್ಯವಿಲ್ಲದೆ ಇರುವವರೂ ಇದ್ದಾರೆ. ಅವರು ಯಾವ ಸೊಸೈಟಿಯಲ್ಲಿಯೂ ಮೆಂಬರು ಆಗದೆ, ಅವರಿಗೆ ಹಣವನ್ನು ಕೊಟ್ಟಿಲ್ಲ. ಆದ್ದರಿಂದ ಈಗ ಹರಿಜನರಿಗೆ ಮನೆಕಟ್ಟಿಕೊಳ್ಳುವುದಕ್ಕೆ ಹಣ ಸಹಾಯ ಸಿಕ್ಕದೇ ಇರುವವರಿಗೆ ಯಾವ ಸಹಕಾರ ಸಂಘದಲ್ಲೂ ಸದಸ್ಯರಲ್ಲದವರಿಗೆ ಮೊದಲು ಇದ್ದಹಾಗೆ ಹೌಸಿಂಗ್ ಸಬ್ಸಿಡಿಯನ್ನು ಕೊಡಬೇಕು ಮತ್ತು ಕೋಆಪರೇಟಿವ್ ಸೊಸೈಟಿಗಳ ಮೂಲಕ 3 ಸಾವಿರ ರೂಪಾಯಿಗಳನ್ನು ಸದಸ್ಯರಾದವರಿಗೆ ಕೊಡುವುದನ್ನು ಮುಂದುವರಿಸಬೇಕು. ಈಗಾಗಲೇ ಮತ್ತೆ 3.00 ಕೋಟಿ ರೂಪಾಯಿಗಳನ್ನು ಈ ಬಗ್ಗೆ ಕೊಡುವುದಕ್ಕೆ ಕ್ಯಾಬಿನೆಟ್‌ನಲ್ಲಿ ''ಡಿಸಿಷನ್'' ತೆಗೆದುಕೊಂಡಿದ್ದಾರೆ ಎಂದು ತಿಳಿಯಿತು. ಈಗಾಗಲೇ ಇದಕ್ಕೆ 25 ಲಕ್ಷ ರೂಪಾಯಿಗಳ ಷೇರ್ ಕ್ಯಾಪಿಟಲ್ ಮತ್ತೆ ಸರ್ಕಾರ ಮಂಜೂರು ಮಾಡಿದೆ. ಆದರೂ ಈಗ ಆ ಎಲ್ಲಾ ಸೊಸೈಟಿಗಳೂ ಹಣವಿಲ್ಲದೆ ಕೆಲಸ ಇಲ್ಲದೆ ನಿಂತಿವೆ. ಅವುಗಳಿಗೆ ಜಾಗ್ರತೆಯಾಗಿ 3 ಕೋಟಿ ರೂಪಾಯಿಗಳನ್ನು ಒದಗಿಸಿ ಅದನ್ನು ಅದಷ್ಟು ಜಾಗ್ರತೆಯಾಗಿ ಕಾರ್ಯಗತ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ನಾನು ಹೇಳುತ್ತೇನೆ.

ಎರಡನೆಯದು ಜಮೀನು ವಿಷಯ. ಈಗ ನಮ್ಮ ರಾಜ್ಯದಲ್ಲಿ ಒಟ್ಟು 11 ಲಕ್ಷ ಎಕರೆ ಖಾಲಿ ಜಮೀನು ಇದೆ. ಅದನ್ನು ಸಮಿತಿಗಳ ಮೂಲಕ ಹರಿಜನರಿಗೆ ವಿಲೇವಾರಿ ಮಾಡುತ್ತೇವೆ ಎಂದು ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದ್ದಾರೆ. ಇದು ಸರಿಯಾದ ರೀತಿಯಲ್ಲಿ ವಿಲೇವಾರಿ ಆಗಬೇಕಾಗಿದೆ. 1961ನೇ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಎಲ್ಲಾ ಕಡೆಗಳಲ್ಲಿಯೂ ಹರಿಜನರಿಗೆ 50 ಪರ್ಸೆಂಟ್ ಜಮೀನನ್ನು ಕೊಡಬೇಕೆಂದು ಆದೇಶ ಇದೆ. ಇದು ಯಾವುದೂ ಸರಿಯಾಗಿ ನಡೆದಿಲ್ಲ. ಭೂಮಿ ಸರಿಯಾಗಿ ಹಂಚಿಕೆಯಾಗಿಲ್ಲ. ಇದನ್ನು ಸರಿಪಡಿಸಬೇಕು. ತೋಟಿ ತಳವಾರರ ಜಮೀನುಗಳನ್ನು ಈಗಾಗಲೇ ಅನೇಕರು ಆಯಾಯ ಗ್ರಾಮಗಳವರು ಕೊಂಡುಕೊಂಡು ಅನುಭವಿಸುತ್ತಿದ್ದಾರೆ. ಇದು ತುಂಬಾ ಅನ್ಯಾಯ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಿ ಇದನ್ನು ವಾಪಸ್ಸು ತೆಗೆದುಕೊಂಡು ಹರಿಜನರಿಗೆ ಅಂದರೆ ಈ ತೋಟಿ ತಳವಾರರಿಗೆ ತಮ್ಮ ಜಮೀನು ತಮಗೇ ದೊರೆಯುವಂತೆ ಮಾಡಬೇಕು. ಈಗ ಜಮೀನನ್ನು ವಿಲೇವಾರಿ ಮಾಡುವ ಸಂಬಂಧದಲ್ಲಿ ಸಮಿತಿಗಳನ್ನೇನು ಮಾಡುತ್ತೀರಿ ಇದರಲ್ಲಿ ಒಂದು ದೊಡ್ಡ ರಾಜಕೀಯವಾಗುತ್ತದೆ. ಆದ್ದರಿಂದ ಅದಷ್ಟು ಜಾಗ್ರತೆ ಪ್ರತಿ ತಾಲ್ಲೂಕಿನಲ್ಲಿಯೂ ಆ ಸಮಿತಿಗಳಲ್ಲಿ ಹರಿಜನ ಪ್ರತಿನಿಧಿಗಳನ್ನು ಹೆಚ್ಚಾಗಿ ಹಾಕಬೇಕು. ತಾಲ್ಲೂಕು ಬೋರ್ಡಿನ ಒಬ್ಬ ಹರಿಜನ ಸದಸ್ಯರು ಅದರಲ್ಲಿ ಇದ್ದರೂ ಕೂಡ ಅವರು ಸರಿಯಾಗಿ ಕೆಲಸ ಮಾಡುವ ಶಕ್ತಿ ಇರುವುದಿಲ್ಲ. ಆದ್ದರಿಂದ ವಿಶೇಷ ರೀತಿಯಲ್ಲಿ ಇವರ ರಕ್ಷಣೆ ಹಾಗೂ ವ್ಯವಸ್ಥೆ ಆಗಲು ತಾವು ಆಯಾಯ ಡಿಸ್ಟ್ರಿಕ್ಟಿನಲ್ಲಿರತಕ್ಕ ನಿಮ್ನವರ್ಗದ, ನಿಮ್ನ ಪಂಗಡದ ಎಂ.ಎಲ್.ಎ. ಮತ್ತು ಎಂ.ಎಲ್.ಸಿ.ಗಳನ್ನು ಜಿಲ್ಲೆಯಲ್ಲಿರುವ ಎಲ್ಲಾ ತಾಲ್ಲೂಕು

ಕಮಿಟಿಗಳಲ್ಲಿ ಎಕ್ಸ್‌ಅಫಿಷಿಯೋ ಮೆಂಬರಾಗಿ ಭಾಗವಹಿಸಿ ಸಲಹೆಕೊಡುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಆ ರೀತಿ ಮಾಡುವುದಾದರೆ ಈಗಿರತಕ್ಕ 11 ಲಕ್ಷ ಎಕರೆ ಜಮೀನಿನಲ್ಲಿ 5½ ಲಕ್ಷ ಎಕರೆ ನಿಮ್ನವರ್ಗ ಮತ್ತು ನಿಮ್ನಪಂಗಡದವರಿಗೆ ದೊರೆಯುವುದಕ್ಕೆ ಅವಕಾಶವಾಗುತ್ತದೆ.

ಬೆಂಗಳೂರು ನಗರದಲ್ಲಿ ಸ್ಲಮ್ ಕ್ಲಿಯರೆನ್ಸ್‌ಗೋಸ್ಕರ ಕೇಂದ್ರ ಸರ್ಕಾರದವರು ಬೇಕಾದಷ್ಟು ಕೊಟ್ಟರೂ ಕೂಡ ಆ ಹಣವನ್ನು ಲ್ಯಾಪ್ಸ್ ಮಾಡಿದ್ದಾರೆ. ಈ ರೀತಿ ಮಾಡಿದರೆ ನೀವು ಯಾವ ಯೋಜನೆಗಳನ್ನು ಕಾರ್ಯಗತ ಮಾಡುತ್ತೀರಾ ! ಜಬ್ಬಾರ್ ಬ್ಲಾಕ್, ಚಿಕ್ಕಣ್ಣಪ್ಪ, ಗೋರಿ ಪಾಳ್ಯ, ಈ ಪ್ರದೇಶಗಳಲ್ಲಿ ಸ್ಲಮ್ ಕ್ಲಿಯರೆನ್ಸ್ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಇವೊತ್ತು ಹರಿಜನರು ಬಡತನದಿಂದ ಸರಿಯಾಗಿ ಜೀವನವನ್ನು ನಡೆಸುವುದಕ್ಕೆ ಆಗದೆ ಅನಾಗರೀಕರಾಗಿ ಕುರಿ, ಕೋಳಿ, ನಾಯಿಗಳಿಗಿಂತ ಕಡೆಯಾಗಿ ಜೀವನವನ್ನು ನಡೆಸುತ್ತಿದ್ದಾರೆ. ಇವರನ್ನು ಈ ಸ್ಥಿತಿಯಲ್ಲಿ ಇರುವುದಕ್ಕೆ ಬಿಟ್ಟರೆ ಈ ರಾಜ್ಯಕ್ಕೆ ಗೌರವ ಬರುವುದಿಲ್ಲ. ಇದನ್ನು ಸರಿಪಡಿಸಬೇಕು. ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವ ಬಗ್ಗೆ ರಾಜ್ಯದಲ್ಲಿ ಹಾಗೂ ರಾಷ್ಟ್ರದಲ್ಲಿ ಅನೇಕ ಯೋಜನೆಗಳನ್ನು ಮಾಡಿದರು. ಆದರೂ ಸಹ ಮೈಸೂರಿನಲ್ಲಿ ಇದು ಬಹಳ ಮುಂದಗಾಮಿಯಾಗಿ ನಡೆಯುತ್ತಿದೆ. ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ಯಾವ ಪ್ರಚಾರವಾಗಲೀ, ಚಿತ್ರಮಂದಿರಗಳಲ್ಲಿ ಯಾವ ಪ್ರದರ್ಶನವನ್ನಾಗಲೀ ಮಾಡುತ್ತಿಲ್ಲ. ಅದನ್ನು ರದ್ದು ಮಾಡಿದ್ದಾರೆ. ಈ ಒಂದು ಪದ್ಧತಿಯನ್ನು ಮಹಾತ್ಮ ಗಾಂಧೀಜಿಯವರು ಆಚರಣೆಗೆ ತಂದಿದ್ದರು. ಆದ್ದರಿಂದ ಈ ಒಂದು ಪ್ರಚಾರವನ್ನು ಮುಂದುವರಿಸಬೇಕು. ಮತ್ತು ಸಮ್ಮೇಳನಗಳನ್ನು ನಡೆಸುವುದಕ್ಕೆ ಸಮಾಜ ಕಲ್ಯಾಣ ಇಲಾಖೆಯವರು ವ್ಯವಸ್ಥೆ ಮಾಡಬೇಕು. ಇದೂ ಅಲ್ಲದೆ ಪ್ರಚಾರ ಕಾರ್ಯಕ್ಕಾಗಿ, ಹರಿಜನ ಸೇವಕರ ಸಂಘ, ಆದಿಕರ್ನಾಟಕ ಸಂಘ, ಆದಿದ್ರಾವಿಡ ಸಂಘ, ಆದಿಜಾಂಬವ ಸಂಘ ಈ ಸೇವಾ ಸಂಘಗಳಿಗೆ ಸರ್ಕಾರದವರು ಸಾಕಷ್ಟು ಸಹಾಯವನ್ನು ಕೊಡುತ್ತಿದ್ದರು. ಅದನ್ನು ರದ್ದು ಮಾಡಿದ್ದಾರೆ. ಅದನ್ನೂ ಸಹ ಮುಂದುವರಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಅತ್ಯಂತ ಮುಖ್ಯ ವಿಷಯ ಎಂದರೆ ರಾಜ್ಯದಲ್ಲಿ ಮಂತ್ರಿಮಂಡಲದಲ್ಲಿ ಆಗಲೀ, ಅಥವಾ ಸರ್ಕಾರದ ಉದ್ಯೋಗದಲ್ಲಾಗಲೀ, ಹರಿಜನರಿಗೆ ಸಾಕಷ್ಟು ಪ್ರಾತಿನಿಧ್ಯ ಸಿಕ್ಕಿಲ್ಲ. 27 ಜನ ಇರುವ ಮಂತ್ರಿಮಂಡಲದಲ್ಲಿ ಇಬ್ಬರು ಹರಿಜನರಿಗೆ ಮಾತ್ರ ಪ್ರಾತಿನಿಧ್ಯ ಕೊಟ್ಟಿದ್ದಾರೆ. ಈ ದೇಶದ ಬೆನ್ನು ಮೂಳೆಯಾಗಿ ದೇಶಕ್ಕಾಗಿ ದುಡಿಯುತ್ತಿರುವ ಹರಿಜನರಿಗೆ ಮಂತ್ರಿಮಂಡಲದಲ್ಲಿ 5-6 ಜನಗಳಿಗೆ ಪ್ರಾತಿನಿಧ್ಯವನ್ನು ಕೊಟ್ಟರೆ ಏನಾಗುತ್ತದೆ ? ಅಸೆಂಬ್ಲಿಯಲ್ಲಿರುವಂತೆ ಕೌನ್ಸಿಲ್‌ನಲ್ಲೂ ಲೋಕಸಭೆಯಲ್ಲಿರುವಂತೆ ರಾಜ್ಯ ಸಭೆಯಲ್ಲೂ ಹರಿಜನರಿಗೆ ಸ್ಥಾನಗಳನ್ನು ಮೀಸಲಾಗಿಡಬೇಕು ಎನ್ನುವ 'ತತ್ವ' ಕಾನೂನು ಜಾರಿಗೆ ಬರಬೇಕು. ಈಗ ರಾಜ್ಯ ಸಭೆಗೆ ಮತ್ತು ವಿಧಾನ ಪರಿಷತ್ತಿಗೆ ಕ್ರಮವಾಗಿ 4 ಮತ್ತು 21 ಜಾಗಗಳು ಭರ್ತಿಯಾಗಬೇಕು. ಹರಿಜನ ಮತ್ತು ಗಿರಿಜನರಿಗೆ ಪ್ರಾತಿನಿಧ್ಯ ಕೊಡಬೇಕು ಮತ್ತು ಕ್ರಮವಾಗಿ 8 ಮತ್ತು 3 ಸ್ಥಾನಗಳು ಮೀಸಲಾಗಿಡಬೇಕು. ಆದ್ದರಿಂದ ಈಗ 8 ಲೆಜಿಸ್ಲೆಟೀವ್ ಕೌನ್ಸಿಲ್ಲಿಗೆ, 3 ರಾಜ್ಯ ಸಭೆಗೆ ''ಹರಿಜನರಿಗೆ'' ಪ್ರಾತಿನಿಧ್ಯವನ್ನು ಕೊಡುವ ನೀತಿಯನ್ನು ಜಾರಿಗೆ ತರಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಅಗಾಗ್ಯೆ ಸರ್ಕಾರದವರು ಸಮಿತಿಗಳನ್ನು ರಚಿಸುತ್ತಾರೆ, ಬೋರ್ಡುಗಳನ್ನು ರಚಿಸುತ್ತಾರೆ ಮತ್ತು ಕಾರ್ಪರೇಶನುಗಳನ್ನು ರಚಿಸುತ್ತಾರೆ. ಆದರೆ ಇಂಥ ಪ್ರತಿಯೊಂದು ಬೋರ್ಡು ಮತ್ತು ಸಮಿತಿಗಳಲ್ಲಿ ಹರಿಜನರಿಗೆ ಒಂದಾದರೂ ಪ್ರಾತಿನಿಧ್ಯವನ್ನು ಸರ್ಕಾರದವರು ಕೊಡಬೇಕೆಂಬ ನಿಯಮ ಇದ್ದರೂ, ಅನೇಕ ಸಮಿತಿಗಳಲ್ಲಿ ಪ್ರಾತಿನಿಧ್ಯವನ್ನು ಕೊಟ್ಟಿಲ್ಲ. ಆದ್ದರಿಂದ ಪ್ರತಿ ಬೋರ್ಡು, ಸಮಿತಿ ಮತ್ತು ಕಾರ್ಪೊರೇಶನುಗಳಲ್ಲಿ ಹರಿಜನರಿಗೆ ಪ್ರಾತಿನಿಧ್ಯವನ್ನು ಕೊಡಬೇಕು. ಈಗ ಡೆವಲಪ್‌ಮೆಂಟ್ ಸೆಕ್ಟರ್‌ಗಳಲ್ಲಿ, ತಾಲ್ಲೂಕು ಬೋರ್ಡುಗಳಲ್ಲಿ ಇವರಿಗಾಗಿ 18 ಪರ್‌ಸೆಂಟ್ ದುಡ್ಡು ರಿಸರ್ವ್ ಮಾಡಿ, ಖರ್ಚು ಮಾಡದೆ ಹೋದರೆ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಬಡ್ಜೆಟ್ ಅಪ್ರೂವ್ ಮಾಡಬಾರದು ಎಂದು ಇದೆ. ಅನೇಕ ತಾಲ್ಲೂಕು ಬೋರ್ಡುಗಳು ಇವುಗಳನ್ನು ಅನುಸರಿಸುತ್ತಾ ಇಲ್ಲ. ಮತ್ತು ಸರ್ಕಾರೀ ಉದ್ಯೋಗಗಳಲ್ಲಿ, ಕ್ಲಾಸ್ 1, 2, 3 ಮತ್ತು 4 ನೇ ಹುದ್ದೆಗಳನ್ನು ಹರಿಜನರಿಗೆ ಅವರ ಪರ್ಸೆಂಟೇಜ್ ಪ್ರಕಾರ ಕೊಡುತ್ತಾ ಇಲ್ಲ. ಅದಕ್ಕೋಸ್ಕರ ಸರ್ಕಾರದವರು ಒಂದು ವಿಶೇಷವಾದ ಆರ್ಡರ್ ಮಾಡಿ, ಒಂದು ''ಅಪಾಯಿಂಟ್‌ಮೆಂಟ್ ಡ್ರೈವ್'' ಎಂದು ಮಾಡಿ, ಇಂಥ ಅವಕಾಶಗಳು ಸರಿಯಾಗಿ ಸಿಗುವಂತೆ ಎಲ್ಲೆಲ್ಲೂ ಮಾಡಬೇಕು.

ಅದೇ ರೀತಿ ಇವತ್ತು ಪೋಲೀಸು ಇಲಾಖೆಯಲ್ಲೂ ಅನೇಕ ರೀತಿಯ ಅನ್ಯಾಯಗಳು ನಡೆಯುತ್ತಿವೆ. ಹರಿಜನರ ಕೊಲೆಗಳು ಆಗುತ್ತಾ ಇವೆ, ಮತ್ತು ಹೆಣ್ಣು ಮಕ್ಕಳ ಮಾನಭಂಗ ಕೂಡ ಅನೇಕ ಕಡೆ ನಡೆಯುತ್ತಿವೆ. ಅದೇ ರೀತಿ ಜಾತೀಯ ಆಧಾರದ ಮೇಲೆ ಅನೇಕ ದರೋಡೆಗಳು ಕೂಡ ನಡೆಯುತ್ತಿವೆ. ಉದಾಹರಣೆಗೆ ಚಿಕ್ಕಮಗಳೂರು, ಸಿದ್ಲಘಟ್ಟ, ಶಿವಮೊಗ್ಗ ಜಿಲ್ಲೆಗಳಲ್ಲಿ ಇವು

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ನಡೆಯುತ್ತಿವೆ. ಈ ರೀತಿ ಕೊಲೆ, ದರೋಡೆ, ಮಾನಭಂಗ ಮುಂತಾದವುಗಳನ್ನು ತಪ್ಪಿಸಲು ಮುಖ್ಯಮಂತ್ರಿಯವರು ತಕ್ಕ ಕ್ರಮ ತೆಗೆದುಕೊಂಡು ಹರಿಜನರ ರಕ್ಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಹೋಟಲುಗಳಲ್ಲಿ ಪ್ರವೇಶ ಪಡೆಯಲು ಗ್ರಾಮಾಂತರ ಪ್ರದೇಶದಲ್ಲಿ ಅವಕಾಶವಿಲ್ಲ. ಅವರು ತಾರತಮ್ಯದಿಂದ ನೋಡುತ್ತಿದ್ದಾರೆ. ಇಂದು ನಿಮ್ನ ವರ್ಗದವರಲ್ಲಿ "ಎಜುಕೇಟೆಡ್ ಅನ್ ಅಂಪ್ಲಾಯ್‌ಮೆಂಟ್" ಕೂಡ ದಿನೇ ದಿನೇ ಜಾಸ್ತಿಯಾಗುತ್ತಾ ಇದೆ. ಇವತ್ತು ಈ ಜನಾಂಗದವರು ಬಿ.ಎ., ಎಂ.ಎ., ಎಂ.ಬಿ.ಬಿ.ಎಸ್., ಬಿ.ಇ. ಮಾಡಿಕೊಂಡವರು ಕೆಲಸ ಇಲ್ಲದೆ ಅಲೆದಾಡುವಂತೆ ಆಗಿದೆ. ಅಂಥವರಿಗೆ ಉದ್ಯೋಗಗಳು ಸಿಗುವಂತೆ ಸರ್ಕಾರದವರು ಯೋಗ್ಯ ವ್ಯವಸ್ಥೆ ಮಾಡಬೇಕು; ಇಲ್ಲದಿದ್ದರೆ, ಸೆಂಟ್ರಲಿ ಸ್ಪಾನ್ಸರ್ಡ್ ಅಗ್ರಿಕಲ್ಚರಲ್ ಕಾಲನಿ ಸ್ಕೀಮುಗಳನ್ನು ತರಬೇಕು; ಮತ್ತು ಜ್ಯಾಯಿಂಟ್ ಫಾರ್ಮಿಂಗ್ ವ್ಯವಸ್ಥೆ ಮಾಡಬೇಕು. ಇನ್ನು ಕೋಪರೇಟಿವ್ ಸೊಸೈಟಿಗಳಿಗೆ ಬಿ.ಎಲ್. ಗೌಡರವರ ಕಮಿಟಿಯವರ ವರದಿಯನ್ನು ಜಾರಿಗೆ ಸರ್ಕಾರದವರು ತರುತ್ತಾರೆಂದು ಕಾಣುತ್ತದೆ. ಇವತ್ತು ಪ್ರೈಮರಿ ಸೊಸೈಟಿಗಳಿಂದ ಹಿಡಿದು, ಸ್ಟೇಟ್ ಲವೆಲ್ ಸೊಸೈಟಿಗಳ ವರೆಗೆ, ಹಾಗೂ ಬ್ಯಾಂಕುಗಳಿಗೆ ಹರಿಜನರಿಗೆ ಒಂದು ಮೊದಲು ಸ್ಥಾನವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೈಗಾರಿಕೆಗಳಲ್ಲೂ ಹರಿಜನರಿಗೆ ಸಾಕಷ್ಟು ಸಹಾಯ ದೊರುಕುತ್ತಾ ಇಲ್ಲ. ಆದ್ದರಿಂದ ಅವರಿಗಾಗಿ ಒಂದು ಲಿಬರಲ್ ಸ್ಕೀಮ್ ಮಾಡಿ, ಸಣ್ಣಪುಟ್ಟ ಸ್ಕೀಮ್ ಅವರಿಗಾಗಿ ತಯಾರಿಸಿ ಸಹಾಯ ದೊರೆಯುವಂತೆ ಮಾಡಬೇಕು.

ಬೆಂಗಳೂರಿನಲ್ಲಿದ್ದ ಐ.ಎ.ಎಸ್. ಟ್ರೈನಿಂಗ್ ಸೆಂಟರನ್ನು ಮದ್ರಾಸಿಗೆ ವರ್ಗಾವಣೆ ಮಾಡಿದ್ದಾರೆ. ಇದು ಬಹಳ ಅನ್ಯಾಯ. ಇದರಿಂದ ನಮ್ಮ ರಾಜ್ಯದ ಪರೀಕ್ಷಕ ವರ್ಗಕ್ಕೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಇಂತಹ ತರಬೇತಿ ಕೇಂದ್ರವನ್ನು ಬೆಂಗಳೂರಿನಲ್ಲೆ ಮತ್ತೇ ಆರಂಭಿಸಲು ಅವಕಾಶ ಮಾಡಬೇಕು.

ಮತ್ತು ಈ ಗಾಂಧೀ ಶತಾಬ್ದಿ ವರ್ಷದಲ್ಲಿ ಗಾಂಧೀ ತತ್ವ ಅನುಸರಿಸುವುದಾದರೆ, ಹರಿಜನರ ಹೆಣ್ಣುಮಕ್ಕಳು ಮತ್ತು ಗಂಡು ಮಕ್ಕಳು ಹಾಸ್ಟೆಲುಗಳಿಗೆ ಸೇರುವುದಕ್ಕೆ ಈ ವರ್ಷ ಎಷ್ಟು ಮಕ್ಕಳು ಅರ್ಜಿ ಹಾಕುತ್ತಾರೋ, ಅವರೆಲ್ಲರಿಗೂ ಸೀಟ್ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಹಾಗೆ ಮಾಡಿದರೆ ಗಾಂಧಿ ಶತಾಬ್ದಿ ಆಚರಿಸುವುದು ಸಾರ್ಥಕವಾಗುತ್ತದೆ. ಹರಿಜನರ ಅಭಿವೃದ್ಧಿಯಾದರೆ, ಅವರಿಗೆ ವಿದ್ಯಾಭ್ಯಾಸ ಒದಗಿಸಿದರೆ, ಅವರಿಗೆ ಜ್ಞಾನ ಸಂಪಾದನೆ ಮಾಡುವುದಕ್ಕೆ ಅವಕಾಶ ಮಾಡಿದರೆ, ಅವರಲ್ಲಿರುವ ಒಂದು ಅಂಧಕಾರ ಹೊರಟು ಹೋಗುತ್ತದೆ, ಇಲ್ಲದಿದ್ದರೆ, ಅವರು ಕತ್ತಲೆಯಲ್ಲಿರತಕ್ಕ ಜನರೇ ಆಗಿರುತ್ತಾರೆ. ಆದ್ದರಿಂದ ಎಲ್ಲಾ ಏಡೆಡ್ ಹಾಸ್ಟೆಲುಗಳಲ್ಲಿ ಸಹ ಯಾರು ಅರ್ಜಿ ಹಾಕುತ್ತಾರೋ, ಅವರೆಲ್ಲರಿಗೂ ಈ ವರ್ಷ ಸೀಟ್ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕಾನೂನು ಮಂತ್ರಿಯವರ ಇಲಾಖೆಯಲ್ಲಿ ಹರಿಜನರಿಗೆ ಪ್ರಾತಿನಿಧ್ಯ ಸರಿಯಾಗಿ ಸಿಗುತ್ತಾ ಇಲ್ಲ. ಲಾ ಕಾಲೇಜುಗಳಲ್ಲಿ ಪಾರ್ಟ್ ಟೈಮ್ ಪ್ರೊಫೆಸರರನ್ನು ತೆಗೆದುಕೊಳ್ಳುವಾಗ ಹರಿಜನರಿಗೆ ಅವಕಾಶ ಕೊಟ್ಟಿಲ್ಲ. ಆ ಮೇಲೆ ಪ್ರೊಸಿಕ್ಯೂಟರ್ಸ್‌ನ್ನು ತೆಗೆದುಕೊಳ್ಳುವಾಗಲೂ ಹರಿಜನರಿಗೆ ಸ್ಥಾನವಿಲ್ಲ. ಕೇಳಿದರೆ ಅರ್ಹರಾದವರು ಯಾರೂ ಇಲ್ಲವೆಂದು ಹೇಳುತ್ತಾರೆ. ಅದೇ ರೀತಿ ಸಬ್ ಇನ್‌ಸ್ಪೆಕ್ಟರ್ಸ್ ಹುದ್ದೆಗೆ 90 ಜನರನ್ನು ತೆಗೆದುಕೊಂಡರು. ಹಾಗೆಯೇ ಅಸಿಸ್ಟೆಂಟ್ ಇಂಜಿನಿಯರ್ಸ್‌ಗೆ 150 ಜನರಿಗೆ ಪ್ರೊಮೋಶನ್ಸ್ ಕೊಟ್ಟಿದ್ದಾರೆ. ಆದರೆ ಅದರಲ್ಲಿ ಹರಿಜನರಿಗೆ ಸರಿಯಾಗಿ ಪ್ರಾತಿನಿಧ್ಯ ದೊರಕಿಲ್ಲ. ಇದನ್ನು ಮಾನ್ಯ ಪಿ. ಡಬ್ಲ್ಯು. ಡಿ. ಮಂತ್ರಿಯವರು ಯೋಚಿಸಿ ಸರಿಪಡಿಸಬೇಕು.

ಇನ್ನು ಕುಡಿಯುವ ನೀರಿನ ವಿಚಾರ. ಇವತ್ತು ರಾಜ್ಯದಲ್ಲಿ ಹಲವಾರು ಗ್ರಾಮಗಳಲ್ಲಿ ಈ ಜನರು ಕೊಳಚೆ ನೀರನ್ನು ಕುಡಿಯಬೇಕಾಗಿದೆ. ಇದರಲ್ಲಿ ಹರಿಜನರಿಗೆ ನೀರನ್ನು ಒದಗಿಸುವುದರಲ್ಲಿ ಸ್ವಾವಲಂಬನೆಯನ್ನು ಮಾಡದೆ ಹೋದರೆ, ಈ ಸರ್ಕಾರ ಮತ್ತೆ ಯಾವುದನ್ನು ಮಾಡುತ್ತದೆ ಹೇಳಿ? ಆದ್ದರಿಂದ ಎಲ್ಲಾ ಕಡೆಯೂ ಹರಿಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದಲ್ಲದೆ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಅಂದರೆ ಫ್ಯಾಕ್ಟರಿಗಳಲ್ಲಿ $12\frac{1}{2}$ ಪರ್‌ಸೆಂಟ್ ರಿಸರ್ವ್ ಹುದ್ದೆಗಳಿವೆ. ಅದೂ ಕೂಡ ಸರಿಯಾಗಿ ಭರ್ತಿಯಾಗುತ್ತಿಲ್ಲ. ಅದೇ ರೀತಿ ನಿಮ್ಮ ಅಧೀನದಲ್ಲಿರತಕ್ಕ ಕಾರ್ಖಾನೆಗಳಲ್ಲೂ ಅವರಿಗೆ ಪ್ರಾತಿನಿಧ್ಯ ದೊರೆಯುತ್ತಾ ಇಲ್ಲ. ಅದನ್ನೆಲ್ಲಾ ಕಡ್ಡಾಯವಾಗಿ ಸರ್ಕಾರದವರು ಸರಿಪಡಿಸಬೇಕು.

ಮಧ್ಯಪಾನ ನಿರೋಧವನ್ನು ಈಗ ಸಡಿಲಿಸಿ ಜಾರಿಯಲ್ಲಿ ತಂದಿದ್ದಾರೆ. ಇದರಿಂದ 20 ಕೋಟಿ ರೂಪಾಯಿ ಆದಾಯ ಬರುತ್ತದೆ ಎಂದು ಹೇಳುತ್ತಿದ್ದಾರೆ. ದುರ್ಬಲರಾದ ಹರಿಜನರ ಪ್ರಯೋಜನಕ್ಕಾಗಿ, ಒಂದು ಟೆಂಪರೆನ್ಸ್ ಕಮಿಟಿ ಮಾಡುತ್ತೇವೆಂದೂ, ಅದಕ್ಕೆ ಮಾನ್ಯ ಶ್ರೀ ಪ್ರಭಾಕರ್‌ರವರನ್ನು ಅಧ್ಯಕ್ಷರನ್ನಾಗಿ ಮಾಡುತ್ತೇವೆಂದು ಹೇಳಿ, ಪೇಪರಿನಲ್ಲಿ ಎಲ್ಲಾ ಬಂತು. ಇದನ್ನು ಆದಷ್ಟು ಜಾಗ್ರತೆ ಮಾಡಬೇಕು. ಒಂದು ಟೆಂಪರೆನ್ಸ್ ಕಮಿಟಿಯನ್ನು ಕೂಡಲೇ ಮಾಡಬೇಕೆಂದು ಮಾತ್ರ ಹೇಳಿ, ಈ ರಾಜ್ಯದ ಆಯವ್ಯಯ ಪಟ್ಟಿಯಲ್ಲಿ ವಿಶೇಷವಾದ ರೀತಿಯಲ್ಲಿ ದುರ್ಬಲ ವರ್ಗಗಳಿಗೆ ಅನುಕೂಲದ ಅವಕಾಶವನ್ನು ಮಾಡಬೇಕೆಂದು ಒತ್ತಿ ಹೇಳುತ್ತೇನೆ. ಇದರಲ್ಲಿ ಸಮಾಜವಾದ ರಚನೆಯಾಗತಕ್ಕ ಅವಕಾಶವನ್ನು ಕಲ್ಪಿಸಿಕೊಟ್ಟಿಲ್ಲ ಮತ್ತು, ಸಮಾಜವಾದದ ತತ್ವ ಇದರಲ್ಲಿ ಅಡಕವಾಗಿಲ್ಲದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

11-30 A.M.

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ—ಎಸ್.ಸಿ.).—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಂಡಿಸಿದ ಬಜೆಟ್ ಮೇಲೆ ನಾನು ಒಂದೆರಡು ವಿಚಾರಗಳನ್ನು ಹೇಳ ಬಯಸುತ್ತೇನೆ. ನಾನು ಈ ಅಂದಾಜು ಪತ್ರವನ್ನು ನೋಡಿ ನನಗೆ ಒಂದು ದೃಷ್ಟಿಯಿಂದ ಬಹಳ ಅಸಮಾಧಾನವಾಗುತ್ತಿದೆ. ಅದೇನೆಂದರೆ, ಭಾಷಣದಲ್ಲಿ ಭಾಷೆ ಸೌಂದರ್ಯದಿಂದ ತುಂಬಿದ್ದರೂ ಕೂಡ ಅದರಲ್ಲಿ ಇರತಕ್ಕ ತತ್ವಗಳು ಅರ್ಥಬರುವ ಹಾಗೆ ಇಲ್ಲವೆಂಬ ಮಾತನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಹಾಗಿದ್ದರೂ ಅವರು ಮಂಡಿಸಿರತಕ್ಕ ಬಜೆಟ್ಟಿನಲ್ಲಿ ಸುಮಾರು ಮುಂದಿನ 10 ವರ್ಷಗಳ ಕನಸನ್ನು ಕಂಡಿದ್ದಾರೆ. 10 ವರ್ಷಗಳಲ್ಲಿ ಯಾವ ರೀತಿಯಲ್ಲಿ ನಮ್ಮ ರಾಜ್ಯಾಭಿವೃದ್ಧಿಯಾಗಬೇಕು ಎಂಬ ಬಗ್ಗೆ ಕೆಲವು ಮುಖ್ಯ ಗುರಿಗಳನ್ನು ಇಟ್ಟುಕೊಂಡಿರುವ ಇವರ ಕನಸು ಒಳ್ಳೆಯದಾದರೂ ಅದು ನನಸಾಗುತ್ತದೋ ಇಲ್ಲವೋ ಗೊತ್ತಿಲ್ಲ. ಇದನ್ನು ಮಾಡುವವರು ಯಾರು, ಯಾವ ರೀತಿ ಮಾಡಬೇಕೆಂಬ ಬಗ್ಗೆ ಯಾವ ಒಂದು ಅಭಿಪ್ರಾಯವನ್ನು ಕೊಟ್ಟಿಲ್ಲ. ಆದ್ದರಿಂದ ತಿರುಕನ ಕನಸು ಅವರು ಕಂಡಿದ್ದಾರೋ ಏನೋ ಎಂದು ನಾನು ಹೇಳಬೇಕಾಗಿದೆ. ಇನ್ನು ಬಜೆಟ್ಟನ್ನು ಒಳಹೊಕ್ಕಿ ನೋಡಿದಾಗ ನಿಜವಾಗಿ ಅನೇಕ ರೀತಿಯಲ್ಲಿ ಅನ್ಯಾಯವಾದಂಥ ರಾಜ್ಯದ ಬಗ್ಗೆ ಮತ್ತು ಕೇಂದ್ರ ಸರ್ಕಾರದಿಂದ ಅಥವಾ ಉಳಿದ ಅಕ್ಕಪಕ್ಕದ ರಾಜ್ಯಗಳಿಂದ ಮಾನ್ಯವಾದಂಥ ವಿಷಯಗಳ ಬಗ್ಗೆ ಯಾವುದೇ ರೀತಿಯ ಉಲ್ಲೇಖನ ಅದರಲ್ಲಿಲ್ಲ. ಇದನ್ನು ನೋಡಿದರೆ 10 ವರ್ಷಗಳ ಪಕ್ಷಿನೋಟವನ್ನು ಈ ವರ್ಷದ ಆಯವ್ಯಯ ಪತ್ರಕ್ಕೆ ಕೇವಲ ನಿರೂಪಣಾ ದೃಷ್ಟಿಯಿಂದ ವಿವರಿಸಿದ್ದಾರೆಯೇ ಹೊರತು ಇನ್ನು ಯಾವುದೂ ಇಲ್ಲ. ಈ ಮಾತುಗಳನ್ನು ಹೇಳುತ್ತಾ ನನ್ನ ಕ್ಷೇತ್ರದ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಬಳ್ಳೊಳ್ಳಿ ಮತದಾರರ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಅನೇಕ ಕೆಲಸಕಾರ್ಯಗಳನ್ನು ಮಾಡಲು ಸರ್ಕಾರಕ್ಕೆ ಮತ್ತು ಆಯಾ ಮಂತ್ರಿಗಳಿಗೆ ಎಷ್ಟೋ ರೆಪ್ರಸೆಂಟೇಷನ್‌ಗಳನ್ನು ಕೊಟ್ಟಿದ್ದೇನೆ. ಉದಾಹರಣೆಗೆ ಹೇಳುವುದಾದರೆ, ನನ್ನ ಕ್ಷೇತ್ರದ ಕೆಲವು ರಸ್ತೆಗಳ ಬಗ್ಗೆ ಹೇಳಿದ್ದೇನೆ. ಅವುಗಳ ಹೆಸರನ್ನು ಬೇಕಾದರೆ ಹೇಳುತ್ತೇನೆ.

ಅಧ್ಯಕ್ಷರು.—ಅವುಗಳನ್ನು ತಾವು ಸಂಬಂಧಪಟ್ಟ ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಹೇಳಬಹುದು. ಬಜೆಟ್ ಮೇಲೆ ಜನರಲ್ ಪ್ರಿನ್ಸಿಪಲ್ಸ್ ಬಗ್ಗೆ ಮಾತನಾಡಿ.

ಶ್ರೀ ಎಸ್. ಎಸ್. ಅರಕೇರಿ.—ಸರಿ. ಆಗಬಹುದು. ಹಾಗಿದ್ದರೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಮುಖ್ಯವಾಗಿ ನನ್ನ ಕ್ಷೇತ್ರಕ್ಕೆ ರಾಜ್ಯ ಸರಕಾರದಿಂದ ಬಹಳ ಅನ್ಯಾಯವಾಗಿದೆ. ಕೇವಲ ಮೂರು ವರ್ಷಗಳಲ್ಲಿ ಹೊಸಪಡನೂರು—ಚೌಡಿಹಾಳ ರೈಲ್ವೆ ಸ್ಟೇಷನ್ನನ್ನು ಕೇಂದ್ರ ಸರ್ಕಾರದವರು ನನ್ನ ವಿನಂತಿ ಮೇರೆಗೆ ಮಾಡಿಸಿದ್ದಾರೆ. ಅಂದಮೇಲೆ ಕೇಂದ್ರ ಸರ್ಕಾರದವರೇ ನಮ್ಮ ಇಂತಹ ಕೆಲಸಗಳನ್ನು ಮಾಡುವಾಗ ರಾಜ್ಯ ಸರ್ಕಾರ ಇಷ್ಟು ಉದಾಸೀನ ಮನೋಭಾವದಿಂದ ನಡೆಯುತ್ತಾ ಇರುವುದು ಬಹಳ ಶೋಚನೀಯವಾಗಿದೆ. ಏಕೆಂದರೆ ನಿಜವಾಗಿ ನನ್ನ ಕ್ಷೇತ್ರದ ಜನರಿಗೆ ಅನ್ಯಾಯವಾಗಿದೆ. ಆದರೂ ಆ ಡಿಮ್ಯಾಂಡ್ ಬಂದಾಗ ಮಾತನಾಡುತ್ತೇನೆ. ಇನ್ನೊಂದು ಮಾತನ್ನು ಇವರ ಬಾಯಿಂದ ಪದೇಪದೇ ಕೇಳುತ್ತಿದ್ದೇನೆ. ಇವರು ನಿಜವಾದಂಥ ಸಮಾಜವಾದದ ಹೆಸರಿನಲ್ಲಿ ಈ ಸರ್ಕಾರ ಹೊರಟಿದೆ ಎಂದು ಹೇಳುತ್ತಿರುತ್ತಾರೆ. ಆ ರೀತಿ ಅವರು ಹೋದರೂ ಅದು ಬರಲು ಇನ್ನೂ ಏನೇನು ಮಾರ್ಗಗಳಿವೆ, ಅವುಗಳ ಬಗ್ಗೆ ಏನೇನು ಸಲಹೆಗಳು ಇವೆಯೆನ್ನುವುದನ್ನು ಸರ್ಕಾರ ಇನ್ನೂ ಕಂಡಿಲ್ಲ. ಏಕೆ ಇನ್ನೂ ನೀವು ಸಮಾಜವಾದವನ್ನು ಜಾರಿಗೆ ತರಲಿಲ್ಲವೆಂದು ಕೇಳಿದರೆ, ಅದಕ್ಕೆ ರಾಜ್ಯಾಂಗ ಬಹಳ ಅಡ್ಡಿಯಾಗಿದೆ, ಅದನ್ನು ಇನ್ನೂ ತಿದ್ದುಪಡಿಮಾಡಬೇಕೆಂದು ಹೇಳುತ್ತಾರೆ. ಇನ್ನು

(ಶ್ರೀ ಎಸ್. ಎಸ್. ಅರಕೇರಿ)

ಸಮಾಜವಾದದ ಬಗ್ಗೆ ಕೆಲವು ವಿಷಯಗಳು ಇಲ್ಲಿ ಉಲ್ಲೇಖವಾಗಿವೆ. ಅದು ಭಾಷಣದ 12ನೇ ಪುಟದಲ್ಲಿದೆ. ಅದನ್ನು ಮುಂದೆ ವಿವರಣೆಮಾಡುತ್ತೇನೆ. ಯಾರು ಯಾವರೀತಿಯಲ್ಲಿ ಅಡ್ಡಿಯಾಗಿದೆ ಯೆಂದು ಹೇಳುತ್ತಾರೋ ಅಂತಹವರಿಗೆ ಬುದ್ಧಿ ಹೇಳಬೇಕಾಗಿದೆ. ಆರ್ಟಿಕಲ್ 38ರ ಪ್ರಕಾರ ಸಂವಿಧಾನದಲ್ಲಿರುವ ಪ್ರಭುತ್ವ ಧೋರಣೆಯ ನಿರ್ದೇಶಕ ತತ್ವಗಳು ಏನೆಂಬುದನ್ನು ಹೇಳಿದ್ದಾರೆ. ಆದರೆ ಅದರಲ್ಲಿ ಕ್ಲಿಯರಾಗಿ ರಾಜ್ಯ ಸರ್ಕಾರಗಳಿಗೆ ಒಂದು ಮಾರ್ಗದರ್ಶನವನ್ನು ರಾಜ್ಯಾಂಗ ಹಾಕಿಕೊಡದೆ ಇದ್ದಾರೆ. ಡಾ| ಅಂಬೇಡ್ಕರ್ ಅವರೂ ಸಹ ಸಮಾಜವಾದದ ಬಗ್ಗೆ ಹೇಳಿ ಹೋಗಿದ್ದಾರೆ. ಅದನ್ನು ಸರಿಯಾಗಿ ಅರ್ಥಮಾಡಿ ತಿಳಿದುಕೊಳ್ಳದೆ ಒಬ್ಬೊಬ್ಬರೂ ಒಂದೊಂದು ರೀತಿ ಮಾತನಾಡಿದರೆ ಹೇಗೆ ? 38ನೇ ಆರ್ಟಿಕಲ್‌ನಲ್ಲಿ ಈ ರೀತಿ ಇದೆ :

"The State shall strive to promote the welfare of the people by securing and protecting, as effectively as it may, a social order in which justice, social, economic and political, shall inform all the institutions of national life."

The State shall, in particular, direct its policy towards securing—

(a) that the citizens, men and women, equally, have the right to an adequate means of livelihood.

(b) that the ownership and control of the material resources of the community are so distributed as best to subserve the common good ;"

ಈ ಸಂಪನ್ಮೂಲಗಳನ್ನು ಸಮನಾದ ರೀತಿಯಲ್ಲಿ ಹಂಚಿದರೆ, ಈ ಸಮಾಜದಲ್ಲಿ ಮೇಲು-ಕೀಳು, ಶ್ರೀಮಂತ-ಬಡವ, ಬಡವ-ಬಲ್ಲಿದ ಎಂಬುದಾಗಿ ಭೇದ ಇರದು ಎಂದು ರಾಜ್ಯಾಂಗದಲ್ಲಿ ಏನು ನಿರ್ಮಾಣವಾಗಿದೆಯೋ ಆ ರೀತಿಯಾಗಿ ನಡೆಯದಿದ್ದರೆ ಬಹಳ ತಪ್ಪಾಗುತ್ತದೆ. ಇಲ್ಲದಿದ್ದರೆ ಯಾರ ಮೇಲಾದರೂ ದೋಷ ಹಾಕಿದ ಹಾಗಾಗುತ್ತದೆ. ಇವತ್ತು ಅಸ್ಪೃಶ್ಯತೆ ಇದೆ. ಇದರ ಬಗ್ಗೆ ಮಹಾತ್ಮ ಗಾಂಧಿಯವರೂ ಮತ್ತು ಡಾ|| ಅಂಬೇಡ್ಕರ್ ಅವರೂ ಹೋರಾಟಮಾಡಿದ್ದಾರೆ. ಆದರೆ ಅನೇಕ ಸ್ವಾಮಿಗಳಲ್ಲಿ ಕೆಲವರು ಜಾತಿ ಬೇಕೆಂದೂ ಹೇಳುತ್ತಾರೆ. ಕೆಲವು ಲಿಟರೇಚರ್‌ಗಳನ್ನು ಅವಮಾನಮಾಡುವುದೂ ಉಂಟು. ಅವಕ್ಕೆ ಸರಿಯಾದ ರೀತಿಯಲ್ಲಿ ಅರ್ಥ ವಿವರಣೆ ಮಾಡುವುದಕ್ಕೆ ಸಾಧ್ಯವಿದೆ, ಒಂದು ಉದಾಹರಣೆಯನ್ನು ಹೇಳುತ್ತೇನೆ. ಪೇಜಾವರ ಮಠದ ಸ್ವಾಮಿಗಳು ಮೊನ್ನೆ ಹುಬ್ಬಳ್ಳಿಯಲ್ಲಿ ಹರಿಜನ ಕೇರಿಗೆ ಹೋಗಿ ಅವರು ಹರಿಜನರಿಂದ ಪೂಜೆ ಮಾಡಿಸಿಕೊಂಡರೆಂದು 5—6 ದಿನಗಳ ಹಿಂದೆ ಪತ್ರಿಕೆಯಲ್ಲಿ ನೋಡಿದೆ. 1967 ರಲ್ಲಿ ನಾನು ಬ್ರಾಹ್ಮಣರಲ್ಲಿ ಮಠಾಧೀಶರೇ ಅಸ್ಪೃಶ್ಯತೆ ಬೆಳೆಯಲು ಕಾರಣರು ಎಂದು ಆಗ ನಾನು ಮಠಾಧೀಶರ ಬಗ್ಗೆ ಹೇಳಿದ್ದು ಇಂದು ಈ ಸ್ವಾಮಿಗಳಿಗೆ ಬುದ್ಧಿ ಬಂದು ಅಲ್ಲಿಗೆ ಹೋದಾಗ ನಿಜವಾಗಿ ಅವರಿಗೆ ಹುಬ್ಬಳ್ಳಿ ಹರಿಜನರಿಂದ ಸ್ವಾಗತ ಬಂತು. ಇದರಿಂದ ಸ್ವಾಮಿಗಳಿಗೂ ಬುದ್ಧಿ ಬಂತು. ಈಗ ನನಗೆ ಸಮಾಧಾನವಿದೆ. ಉಳಿದ ಸ್ವಾಮಿಗಳೂ ಸಹ ಈ ರೀತಿಯಾಗಿ ಮಾಡಬೇಕು. Let them follow the path of Pejavaramutt Swamiji who has become more revolutionary on the lines of Vivekananda. ಹೀಗೆ ನಿಜವಾಗಿ ಎಲ್ಲಾ ಸ್ವಾಮಿಗಳೂ ಹರಿಜನೋದ್ಧಾರಕ್ಕಾಗಿ ನಿಂತಿದ್ದೇ ಆದರೆ ಈ ಅಸ್ಪೃಶ್ಯದ ಭಾವನೆ ಹೋಗುವುದಕ್ಕೆ ಸಾಧ್ಯ. ಆದರೆ ರಾಜಕೀಯವಾಗಿ ಈ ಸರ್ಕಾರ ಹಾಗೂ ಗಾಂಧಿ ಹೆಸರಿನಲ್ಲಿ ಹರಿಜನೋದ್ಧಾರ ಮಾಡುತ್ತೇವೆಂದು ಹೇಳುವುದು ಸರಿಯಾದುದಲ್ಲ. ಹರಿಜನರ ಹೆಸರಿನಲ್ಲಿ ಏಕೆಂದರೆ, ಹರಿಜನರ ಏಳಿಗೆ ಸಲುವಾಗಿ ಕಾನ್‌ಕ್ರೀಟ್ ಪ್ರೊಪೋಸಲ್ಸ್ ಇಲ್ಲ. ಕಳೆದ ಮೂರು ವರ್ಷಗಳಿಂದ ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ಆಫೀಸರ್ ಇದ್ದಾರೆ. ಮಾನ್ಯ ಮಂತ್ರಿಗಳಾದ ಶ್ರೀ ಪಾಟೀಲ್ ಅವರೂ ಮತ್ತು ಮಾನ್ಯ ಉಪಮಂತ್ರಿಗಳಾಗಿರುವ ಶ್ರೀಮತಿ ಬಸವರಾಜೇಶ್ವರಿಯವರೂ ಇಬ್ಬರು ಇದ್ದಾರೆ. ಆದರೂ ಅವರು ನಮ್ಮ ಜನಾಂಗದ ಸಲುವಾಗಿ ಏನೇನು ಮಾಡಿದರೆಂದು ಹೇಳುವುದಕ್ಕಾಗುವುದಿಲ್ಲ. ಅವರು ನಮಗೆ ಇವತ್ತಿನದಿವಸ ಬೇಡದವರು ಆಗಿದ್ದಾರೆ. ಅವರಿಂದಲೇ ನಮ್ಮ ನಮ್ಮ ಸ್ಕೀಮುಗಳಿಗೆ ಒಳಗೊಳಗೇ ಕತ್ತರಿ ಇದೆ. ಇದರ ಬಗ್ಗೆ ಕೇಂದ್ರಸರ್ಕಾರದಲ್ಲಿ ಏನೇನು ರೂಲ್ಸ್ ಇವೆಯೆಂಬುದನ್ನು ಹೇಳುತ್ತೇನೆ. You have

come here to protect the interests of the scheduled castes and in that name if you are to cut out throats what is the use? ಇವತ್ತಿನದಿವಸ ಅದನ್ನು ನಾನು ನೋಡಿದರೆ ಬಹಳ ವಿಷಾದವಾಗುತ್ತದೆ. ನಮ್ಮ ಜನಾಂಗವನ್ನು ಉದ್ಧಾರಮಾಡಬೇಕೆಂದು ನಿಮಗೆ ಮನಸ್ಸು ಇಲ್ಲದಿದ್ದರೆ ಅವರನ್ನು ಬಿಟ್ಟುಬಿಡಿ. ಅವರ ಉದ್ಧಾರವನ್ನು ಅವರೇ ಮಾಡಿಕೊಳ್ಳುತ್ತಾರೆ. ಅದಕ್ಕೆ ಬೇಕಾದ ಔಷಧಿಯನ್ನು ಅವರೇ ನೋಡಿಕೊಳ್ಳುತ್ತಾರೆ. ಈ ದೃಷ್ಟಿಯಿಂದ ಮೈಸೂರು ಸರ್ಕಾರ ಇಲ್ಲಿಯವರೆಗೂ ಅಂದರೆ 22 ವರ್ಷಗಳಿಂದಲೂ ಏನೇನು ಕೆಲಸಮಾಡಿವೆಯೆಂಬ ಪರಿಸ್ಥಿತಿಯನ್ನು ನೋಡಿದರೆ, ಅನೇಕ ಕಡೆಗಳಲ್ಲಿ ಪಂಚಾಯತಿ ಸವರ್ಣೀಯ ಮೆಂಬರುಗಳಿಂದಲೇ ಹರಿಜನರ ಹಿತದ ಕೊಲೆಯಾಗುತ್ತಿದೆ ಇದರಿಂದ ಹರಿಜನರಿಗೆ ಅಲ್ಲಿ ಒಂದೊಂದು ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ಪ್ರೈವೇಟ್ ಲ್ಯಾಂಡ್ಸ್ ಇದ್ದರೆ ಅವರಿಗೆ ಕೊಡಬಹುದು. ಗೌರ್ನಮೆಂಟ್ ಲ್ಯಾಂಡ್ಸ್ ಇದ್ದರೆ, ಆಗ ಸರ್ಕಾರದವರು ಅಕ್ವಿಸಿಷನ್ ಮಾಡಿ ಕೊಡುವುದಿಲ್ಲ. ಇಂತಹ ಪ್ರಸಂಗಗಳು ಇರುವುದರಿಂದ ನಾವು ಅನೇಕ ಜನರು ರೆವಿನ್ಯೂ ಮಿನಿಸ್ಟರ್ ಜೊತೆಯಲ್ಲಿ ಅಲ್ಲಲ್ಲಿ ಹೋಗಿ ಬಂದಿದ್ದೇವೆ. ಎಷ್ಟೋ ಊರುಗಳಲ್ಲಿ ಇದರ ಬಗ್ಗೆ ತಕರಾರುಗಳು ಇವೆ. ಆದರೂ ಅವರಿಗೆ ನಿವೇಶನ ಸಿಗದೆ ಹೋಗಿದೆ. ಮೈಸೂರು ಸರ್ಕಾರದ ಸ್ಟೇಟ್ ಹೌಸಿಂಗ್ ಕಾರ್ಪೊರೇಷನ್ ಏನಿದೆಯೋ ಅದರಿಂದ ಸಾಲ ಸಿಗುವುದಕ್ಕೂ ಆಗುತ್ತಾ ಇಲ್ಲ. ಆದ್ದರಿಂದ ಪಂಚಾಯತಿಯವರು ಎಷ್ಟು ಊರುಗಳಲ್ಲಿ ಇವುಗಳ ಬಗ್ಗೆ ತಕರಾರು ಹಾಕಿಕೊಂಡು ಕೂತಿದ್ದಾರೆಂಬುದನ್ನು ಏನಾದರೂ ನೀವು ಸರ್ವೆ ಮಾಡಿದ್ದೀರಾ?

ಕೆ. ಆರ್. ನಗರ ತಾಲ್ಲೂಕಿನಲ್ಲಿ ಹಂಪಾಪುರದ ಹರಿಜನರಿಗೆ ಕೊಡಬೇಕಾದ ಭೂಮಿಯನ್ನು ಸ್ಕೂಲಿಗೆ ಬೇಕು ಎಂದು T. D. B. ಅವರು ರೆಜಲ್ಯೂಷನ್ ಮಾಡಿದ್ದಾರೆ. ಹರಿಜನರಿಗೆ ಭೂಮಿ ಹೋಗುತ್ತದೆ ಎಂದು ತಿಳಿದು ಹೊಲದ ಮಾಲೀಕ ಗಿಫ್ಟ್ ಡೀಡ್ ಬರೆದು ಆ ಜಮೀನನ್ನು ಸ್ಕೂಲಿಗೆ ಕೊಟ್ಟಿದ್ದಾರೆ. ಹಿಂದೆ ಮಾನ್ಯ ಕಂದಾಯ ಸಚಿವ ಶ್ರೀ ರಾಚಯ್ಯನವರು ಅಲ್ಲಿಗೆ ಹೋದಾಗ ನಾಲ್ಕು ಎಕರೆ ಜಮೀನನ್ನು ಹರಿಜನರಿಗೆ ಕೂಡಿ ಎಂದು ಹೇಳಿದರು. ಕೌಜಲಗಿಯವರು ಹೊಸದಾಗಿ ಕಂದಾಯ ಸಚಿವರು ಆಗಿ ಅಲ್ಲಿಗೆ ಬಂದಾಗ ಆ ಜಮೀನನ್ನು ಸ್ಕೂಲಿಗೆ ಕೊಟ್ಟಿದ್ದಾರೆ. What have the Social Welfare Ministers done to us in respect of this land for a school? ಈ ರೀತಿ ರೆವಿನ್ಯೂ ಮಿನಿಸ್ಟರ್ ಹತ್ತಿರ ಹೋಗಿ ರೆಪ್ರಜೆಂಟೇಷನ್ ಕೊಟ್ಟರೆ ಅದನ್ನು ಡೈರೆಕ್ಟರವರಿಗೆ ಕಳುಹಿಸಿದಿರಿ. ಮಿನಿಸ್ಟರಿಗೆ ನಾವು ಯಾತಕ್ಕೆ ರೆಪ್ರಜೆಂಟೇಷನ್ ಕೊಡಬೇಕು. If the Director were to consider all these things, what is the purpose of your being our representatives? ನನ್ನ ಕಾನ್ಸಿಟ್ಯೂಯೆನ್ಸಿಯಲ್ಲಿ ಹಾಗೆ ಬೇಕಾದಷ್ಟು ಅನ್ಯಾಯವಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ಬೇಕಾದಷ್ಟು ತಕರಾರು ಬಂದಿದೆ. ಹರಿಜನರ ಕಾಲೋನಿ ಸಲುವಾಗಿ ಸರಕಾರಿ ಜಮೀನು ಇದ್ದರೆ ಅದನ್ನು ಗ್ರ್ಯಾಂಟ್ ಮಾಡುವುದಿಲ್ಲ. ಈ ರೀತಿ ತಕರಾರು ಬಂದು ಕೆಲಸಗಳು ಆಗುತ್ತಾ ಇಲ್ಲ. If it is so how can the Harijans own sites and houses? ಹಾಗದದಮೇಲೆ ಬೇಕಾದಷ್ಟು ಸ್ಕೀಂಗಳನ್ನು ಇಟ್ಟುಕೊಂಡಿರುತ್ತೀರಿ. ಅವನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಸಾಧ್ಯವಿಲ್ಲದಿದ್ದರೆ I ask both the Ministers and the Deputy Minister for Social Welfare to resign. The entire Government has failed in giving the Harijans the necessary protection. Therefore I demand the resignation of the entire Government.

ಸಮಾಜವಾದ ತರುತ್ತೇವೆ ಅದರ ಉದ್ಧಾರ ಮಾಡುತ್ತೇವೆಂದು 22 ವರ್ಷಗಳಿಂದಲೂ ಹೇಳುತ್ತಾ ಬಂದಿದ್ದೀರಿ. ಉಡಲಿಕ್ಕೆ ಬಟ್ಟೆ ಊಟ ಮಾಡಲಿಕ್ಕೆ ಹಿಟ್ಟು ಮತ್ತು ವಾಸ ಮಾಡಲಿಕ್ಕೆ ಮನೆ ಇಲ್ಲದಿದ್ದರೆ What is the use of this samajavada in this country? ಈ ತತ್ವವನ್ನು ಕಾರ್ಯಾಚರಣೆಗೆ ತರುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ. ಇನ್ನು ಮಾನ್ಯ ಮಂತ್ರಿಗಳು ನಿರುದ್ಯೋಗ ಸಮಸ್ಯೆ ಬಗ್ಗೆ ಮಾತನಾಡುತ್ತಾ ಅದು ಬೃಹದಾಕಾರವಾಗಿ ಬೆಳೆದಿದೆ ಎಜುಕೇಟೆಡ್ ಎಂಪ್ಲಾಯಮೆಂಟ್ ಅಂಡ್ ಅನ್ ಎಜುಕೇಟೆಡ್ ಅನ್ ಎಂಪ್ಲಾಯಮೆಂಟ್ ಒಂದು ಗಂಭೀರವಾದ ಸಮಸ್ಯೆ ಎಂದು ಹೇಳಿದ್ದಾರೆ. ಇಂತಹ ಸಮಯದಲ್ಲಿ ಹರಿಜನರ ಸಮಸ್ಯೆ ಕೇಳುವವರೇ ಇಲ್ಲ. 18 ಪರ್ಸೆಂಟ್ ರೊಟೇಷನ್ ರ್‍ಯಾಂಕಿಂಗ್ ಕೊಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಪೋಸ್ಟಿಂಗ್ ಆರ್ಡರ್ ಮಾಡುವಾಗ ಮೆರಿಟ್ ಪ್ರಕಾರ ಶೇಕಡ 52 ಬೇರೆಯವರಿಗೆ ಕೊಟ್ಟಿದೆ 30 ಭಾಗ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಕೊಟ್ಟರೆ ಉಳಿದ ಭಾಗ ಎಂದರೆ ಶೇಕಡ 15 ಷೆಡ್ಯೂಲ್ ಕ್ಯಾಸ್ಟ್‌ಗೂ ಶೇಕಡಾ ಮೂರು ಭಾಗ ಷೆಡ್ಯೂಲ್ ಟ್ರಯಬ್ಸಿಗೂ ಕೊಡುತ್ತೇವೆ ಎಂದು ಹೇಳಿದ್ದಾರೆ. ಈ ರೀತಿ ಶೇಕಡಾ 50 ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಉಳಿದ ಶೇಕಡಾ

(ಶ್ರೀ ಎಸ್. ಎಸ್. ಅರಕೇರಿ)

50 ಭಾಗ ಆ ಜನರಿಗೆ ಕೆಲಸ ಸಿಕ್ಕುವುದಿಲ್ಲ. ಆದುದರಿಂದ ಇಂತಹ ಆರ್ಡರಿನಿಂದ ಪ್ರಯೋಜನ ಏನು? ಈ ಅನ್ಯಾಯವನ್ನು ರಾಜ್ಯಸರಕಾರ ಬೇಗನೆ ನಿವಾರಣೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ನಿರುದ್ಯೋಗ ಸಮಸ್ಯೆ ಬೃಹದಾಕಾರವಾಗಿ ಬೆಳೆದಿದ್ದರೂ ಅದರ ಬಗ್ಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನವರು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಅದು ಲಂಚದ ಕೇಂದ್ರವಾಗಿದೆ. ಅವು ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಿ ದುರ್ಬಲವರ್ಗದವರಿಗೆ ಕೆಲಸ ಸಿಕ್ಕುವ ರೀತಿಯಲ್ಲಿ ನಡೆಯುವಂತೆ ಮಾಡಿ ಹರಿಜನರಿಗೆ ಅನ್ಯಾಯವಾಗುತ್ತಾ ಇರುವುದನ್ನು ತಪ್ಪಿಸಿ ಅವರಿಗೆ ಸರಿಯಾದ ಪ್ರೊಟೆಕ್ಷನ್ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧಿನಗರ).—ಸಭಾಪತಿಗಳೇ, ಮಾನ್ಯ ಅರ್ಥ ಸಚಿವರು ಮಂಡಿಸಿರುವ ಆಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತೇನೆ ಮತ್ತು ಆಯವ್ಯಯ ಪಟ್ಟಿಯನ್ನು ಕನ್ನಡದಲ್ಲಿ ಮಂಡಿಸಿರುವುದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ, ಕನ್ನಡ ಕಲಾವಿದರಿಗೆ ಸನ್ಮಾನ ಮಾಡುವುದರ ಮೂಲಕ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿಗೆ ಹಣ ಸಹಾಯ ಮಾಡಿ ಕನ್ನಡಕ್ಕೆ ಪ್ರೋತ್ಸಾಹ ತೋರಿಸುವುದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇನ್ನು ಆಯವ್ಯಯ ವರದಿ ಬಗ್ಗೆ ಆಗಿರುವ ಲೋಪದೋಷಗಳನ್ನು ಒಪ್ಪಿಕೊಂಡಿದ್ದಾರೆ ಮತ್ತು ತಿದ್ದಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಹೀಗೆ ಇದ್ದದ್ದನ್ನು ಇದ್ದಂತೆ ಹೇಳಿರುವುದಕ್ಕಾಗಿ ಪ್ರಾಮಾಣಿಕ ಅರ್ಥಸಚಿವರಿಗೆ ನನ್ನ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆಯವ್ಯಯದ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ವಿಶಾಲಸಾಗರದಲ್ಲಿ ದೋಣಿಯೊಂದು ಬಿರುಕು ಬಿಟ್ಟು ನೀರು ರಭಸದಿಂದ ಒಳಗೆ ನುಗ್ಗುತ್ತಿರುವಾಗ ಏಕಾಂಗಿ ನಾವಿಕ ಬೊಗಸೆಯಿಂದ ನೀರನ್ನು ಎತ್ತಿ ಹೊರಗೆ ಹಾಕಲು ಯತ್ನಿಸುತ್ತಿದ್ದನಂತೆ. ಅವನು ಬೊಗಸೆಯಿಂದ ಎಷ್ಟು ನೀರು ಎತ್ತಿ ಹಾಕಿದರೂ ದೋಣಿಯಲ್ಲಿ ನೀರು ತುಂಬುತ್ತಲೇ ಇತ್ತಂತೆ. ಆ ದೋಣಿಯಂತೆ ರಾಜ್ಯದ ಆರ್ಥಿಕ ಪರಿಸ್ಥಿತಿಯೂ ಆಗಿದೆ. ಏಕಾಂಗಿ ನಾವಿಕನಂತೆ ಹೆಣಗಾಡುತ್ತಾ ಬೊಗಸೆ ಬೊಗಸೆ ನೀರನ್ನು ಎತ್ತಿಹಾಕುತ್ತಾ ಹೇಗೋ ದೋಣಿಯನ್ನು ದಡ ಸೇರಿಸಲು ಯತ್ನಿಸುತ್ತಿರುವ ಹೆಗ್ಗಡೆಯವರ ಅದಮ್ಯ ಚೇತನ ಉತ್ಸಾಹ ಅಭಿನಂದನೀಯ. ಅವರ ಈ ಪ್ರಯತ್ನ ಯಶಸ್ವಿಯಾಗಲಿ ಎಂದು ಆ ಸರ್ವಶಕ್ತನನ್ನು ನಾನು ಪ್ರಾರ್ಥಿಸುತ್ತೇನೆ.

ಕಳೆದ ದಶಕದಲ್ಲಿ ಆಗಿರುವ ಪ್ರಗತಿ ಬೆಳವಣಿಗೆ ಗಣನೀಯ ಎಂಬ ಅರ್ಥ ಸಚಿವರ ಮಾತನ್ನು ಒಪ್ಪುತ್ತೇನೆ. ಆದರೆ ಅದು ನಿರೀಕ್ಷೆಯಷ್ಟು ಆಗಿಲ್ಲ ಎಂಬ ಅರ್ಥ ಸಚಿವರ ಮಾತನ್ನು ಎಲ್ಲರೂ ಒಪ್ಪುತ್ತಾರೆ. ಆಗಿರುವುದರ ಸಂಪೂರ್ಣ ಪ್ರಯೋಜನ ಎಲ್ಲರಿಗೂ ಸರಿಸಮಾನವಾಗಿ ದೊರೆತಿಲ್ಲ ಎಂದು ವಿಷಾದದಿಂದ ಹೇಳುತ್ತೇನೆ. ತಲಾ ಆದಾಯ 285 ರಿಂದ 590ಕ್ಕೆ ಏರಿರಬಹುದು. ಆದರೆ ಏರಿರುವ ಜೀವನ ಮಟ್ಟ ಗಗನಕ್ಕೇರಿರುವ ಜೀವನೋಪಯೋಗಿ ವಸ್ತುಗಳ ಬೆಲೆಗಳನ್ನು ಗಮನಿಸಿದರೆ ಈ ಏರಿಕೆ ತೃಪ್ತಿದಾಯಕವಾಗಿಲ್ಲ ಎಂದರೆ ಸತ್ಯಕ್ಕೆ ದೂರವಾಗಲಾರದು.

ವಿದ್ಯುಚ್ಛಕ್ತಿಯ ಬೆಲೆ ಭಾರತದ ಇತರ ಯಾವುದೇ ರಾಜ್ಯಗಳಿಗಿಂತ ಕಡಿಮೆ ಇದೆ, ಆದ್ದರಿಂದ ಬೇರೆ ಬೇರೆ ವರ್ಗಗಳ ಬಳಕೆಗೆ ಉಪಯೋಗಿಸುತ್ತಿರುವ ವಿದ್ಯುತ್ತಿನ ದರ ಶೇಕಡ 50 ರಷ್ಟನ್ನು ಹೆಚ್ಚಿಸಬೇಕೆಂದಿರುವುದನ್ನು ಅರ್ಥಸಚಿವರು ಹೇಳಿದ್ದಾರೆ. ಆದರೆ ನಮ್ಮ ರಾಜ್ಯದ ವಿದ್ಯುಚ್ಛಕ್ತಿಯ ತಲಾ ಯೂನಿಟ್ಟಿನ ಉತ್ಪಾದನೆಯ ವೆಚ್ಚ ಕೂಡ, ರಾಷ್ಟ್ರದಲ್ಲಿಯೇ ಕಡಿಮೆ ಎಂದು ಅವರು ಹೇಳಲಿಲ್ಲ. ಈ ದೃಷ್ಟಿಯಿಂದ ನಾವು ನೀಡುತ್ತಿರುವ ವಿದ್ಯುತ್ತಿನ ದರ ಹೆಚ್ಚಿನದು, ಆದ್ದರಿಂದ ದರವನ್ನು ಅಷ್ಟೊಂದು ಏರಿಸಲು ಹೋಗಬೇಡಿ. ಎಲ್ಲರೂ ನೀರು ಕುಡಿಯುತ್ತಿದ್ದಾರೆ. ನಾವೇಕೆ ಹಾಲು ಕುಡಿಯಬೇಕು ಎನ್ನುವ ಭಾವನೆ ಬೇಡ. ಬೇರೆ ರಾಜ್ಯದವರೂ ಹಾಲು ಕುಡಿಯಲಿ. ಬೇರೆ ರಾಜ್ಯಗಳನ್ನು ಹೋಲಿಸಿ ನಮಗೆ ನೀರು ಕುಡಿಯಬೇಕೆಂದು ಹೇಳಬೇಡಿ. ಅರ್ಥ ಸಚಿವರು ತಮ್ಮ ಭಾಷಣದ ಆರಂಭದಲ್ಲಿ ಹೇಳಿರುವಂತೆ ಪ್ರಭಾಮಯವಾದ ಈ ಜಗತ್ತಿನಲ್ಲಿ ಅಂಧಕಾರಮಯವಾದ ಕೆಲವು ಪ್ರದೇಶಗಳು ನೀವು ವಿದ್ಯುಚ್ಛಕ್ತಿಯ ಬೆಲೆ ಏರಿಸಿದರೆ ಹಾಗೇ ಅಂಧಕಾರಮಯವಾಗಿಯೇ ಉಳಿಯುತ್ತವೆ.

ತಾಂತ್ರಿಕ ಶಾಲೆಗಳು ಮೆಡಿಕಲ್ ಕಾಲೇಜುಗಳು ಗಮನಾರ್ಹ ಸಂಖ್ಯೆಯಲ್ಲಿವೆ ಎಂಬುದು ನಿಜ. ಆದರೆ ಅವುಗಳ ಮಟ್ಟ, ಗುಣ ಕೂಡ ಗಮನಾರ್ಹವಾಗಿದ್ದರೆ ನಿಜವಾದ ಪ್ರಯೋಜನ ದೊರಕುತ್ತಿತ್ತು. ಇನ್ನು ಮುಂದೆ ಇಂಜನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳ ಸ್ಥಾಪನೆಯಲ್ಲಿ ದೂರದೃಷ್ಟಿ ಅವಶ್ಯಕ. ಹೆಚ್ಚು ಸಂಖ್ಯೆಯಲ್ಲಿ ಅವುಗಳನ್ನು ಸ್ಥಾಪಿಸುವ ಬದಲು ಇರುವ

ಕಾಲೇಜುಗಳನ್ನು ಉತ್ತಮ ಪಡಿಸಲು ಪ್ರಯತ್ನಿಸಿ. ಮೆಡಿಕಲ್ ಕಾಲೇಜುಗಳಲ್ಲಿ 200—250 ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕರಿದ್ದರೆ ಅವುಗಳ ಮಟ್ಟ ಹೇಗಿರಬಹುದು ? ಕೇವಲ ಕ್ವಾಂಟಿಟಿ ಹೆಚ್ಚಿಸದೆ, ಕ್ವಾಲಿಟಿ ಕೂಡ ಹೆಚ್ಚಿಸಿ ಎಂದು ಸೂಚಿಸುತ್ತೇನೆ.

ಸರ್ಕಾರಿ ಕೈಗಾರಿಕೆಗಳ ಬಗ್ಗೆ ಹೇಳುವಾಗ ಇತ್ತೀಚೆಗೆ ನಮ್ಮ ಮುಖ್ಯಮಂತ್ರಿಗಳು ಹೇಳಿದ ಒಂದು ಮಾತು ನೆನಪಿಗೆ ಬರುತ್ತದೆ. ಭದ್ರಾವತಿಯ ಕಾರ್ಖಾನೆಯ ಒಂದು ಸಂದರ್ಭದಲ್ಲಿ ಸರ್ಕಾರಿ ಕೈಗಾರಿಕೆಗಳ ಬಗ್ಗೆ ಟೀಕಿಸುವುದು ಒಂದು ಫ್ಯಾಷನ್ ಆಗಿದೆ ಎಂದರು. ಅವರೇ ಮತ್ತೊಮ್ಮೆ ಬೆಂಗಳೂರಿನಲ್ಲಿ ಮಾತನಾಡುತ್ತಾ ರೆಮ್ಕೋ ಕಾರ್ಖಾನೆ ಒಂದು ಸಮಸ್ಯೆಯಾಗಿದೆ. ಅಪಾರ ನಷ್ಟ ವಾಗುತ್ತಿರುವ ಈ ಕಾರ್ಖಾನೆಗಳಿಗೆ ನಾವು ದಾರಿ ತೋರಬೇಕು ಎಂದು ಅವರೇ ಹೇಳಿದ್ದಾರೆ. ಇದ್ದ ವಿಚಾರವನ್ನು ವಾಸ್ತವಿಕವಾದ ವಿಷಯವನ್ನು ಜನತಾ ಪ್ರತಿನಿಧಿಗಳಾದ ನಾವು ಹೇಳುವುದು ಫ್ಯಾಷನ್‌ಗಾಗಿ ಅಲ್ಲ, ಸಾಧ್ಯವಾದರೆ ಸರಿಪಡಿಸಲಿ ಎಂದು. ಅದರ ಬಗ್ಗೆ ಮುಖ್ಯ ಮಂತ್ರಿಗಳು ಈ ರೀತಿ ಹೇಳುವ ಅಗತ್ಯವಿರಲಿಲ್ಲ.

ನಮ್ಮ ರಾಜ್ಯದ ಸರ್ಕಾರಿ ಕಾರ್ಖಾನೆಗಳಾದ ಭದ್ರಾವತಿ ಕಬ್ಬಿಣದ ಕಾರ್ಖಾನೆ. ಬೆಂಗಳೂರಿನ ರೆಮ್ಕೋ ಕಾರ್ಖಾನೆಗಳ ಅವ್ಯವಸ್ಥೆ ಜನಜನಿತವಾದದ್ದು. ರಾಜ್ಯದ ಹೆಮ್ಮೆಯ ಕಾರ್ಖಾನೆಯಾಗಿದ್ದ ಚಿನ್ನದ ಗಣಿಯಾಗಬೇಕಾಗಿದ್ದ ಭದ್ರಾವತಿ ಕಬ್ಬಿಣದ ಕಾರ್ಖಾನೆ ದಿವಾಳಿತನದ ಅಂಚಿಗೆ ಬರಲು ಅದಕ್ಷ, ಅಸಮರ್ಪಕ, ಕಾರ್ಯನಿರ್ವಹಣೆಯೇ ಕಾರಣ. ಅಲ್ಲಿ ನಡೆದಿರುವ ಅಕ್ರಮ, ಅನ್ಯಾಯಗಳು, ಶರಾವತಿಯಲ್ಲಿ ಮುಳುಗಿದರೂ ಇನ್ನೂ ಉಳಿಯುತ್ತವೆ. ಸಾರ್ವಜನಿಕ ಕೈಗಾರಿಕಾ ಕ್ಷೇತ್ರದ ದಕ್ಷತೆಗೆ ಸವಾಲಾಗಿರುವ, ನುಂಗಲೂ ಆಗದ, ಉಗಿಯಲೂ ಆಗದ ಈ ಕಾರ್ಖಾನೆಯ ಬಗ್ಗೆ ತೀವ್ರಗಮನ ಅಗತ್ಯ. ಅಲ್ಲಿಯ ಕೆಲವರು ಭ್ರಷ್ಟ, ಅನರ್ಹ, ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಅತ್ಯಂತ ನೋವಿನ ಸಂಗತಿ ಎಂದರೆ, ಉತ್ಸಾಹಿಗಳೂ, ದಕ್ಷರೂ, ನಿಸ್ಪೃಹರೂ ಆದಂಥ ಸಚಿವರನ್ನು ಹೊಂದಿದ್ದರೂ ಕೈಗಾರಿಕಾ ಇಲಾಖೆಗೆ ಈ ದುರವಸ್ಥೆ ಬಂದಿದೆಯಲ್ಲಾ ಎಂಬುದು. ಶ್ರೀ ರಾಜಶೇಖರ ಮೂರ್ತಿಯವರು ತಮ್ಮ ಇಲಾಖೆಗೆ ಒಂದು ಹೊಸ ಚೇತನ ನೀಡಬೇಕು. ಅದರ ಜಡತ್ವ ತೊಲಗಿಸಬೇಕು ಎಂದು ನನ್ನ ಕಳಕಳಿಯ ವಿನಂತಿ. ಅಪಾರ ಸಾರ್ವಜನಿಕ ಹಣವನ್ನು ಈ ಬಿಳಿಯಾನೆಗೆ ಪೋಲು ಮಾಡಿ ಜನಸಾಮಾನ್ಯರ ಮೇಲೆ ತೆರಿಗೆಯ ಭಾರವನ್ನು ಹೆಚ್ಚಿಸುತ್ತಾ ಹೋಗುವುದರಲ್ಲಿ ಅರ್ಥವಿಲ್ಲ, ಸುಖವಿಲ್ಲ, ಎಂಬ ದೃಷ್ಟಿಯಿಂದ ಇದನ್ನು ಹೇಳುತ್ತಿದ್ದೇನೆ. ಈ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ನೌಕರ ವರ್ಗಕ್ಕೆ ಸ್ವಲ್ಪ ಮಟ್ಟಿನ ಪಾಲು (ಷೇರು) ಗಳನ್ನು ಕೊಟ್ಟರಾದರೂ ಅವರು ಶ್ರದ್ಧೆ ಉತ್ಸಾಹದಿಂದ ಕೆಲಸ ಮಾಡಬಹುದೇನೋ ಎಂಬ ಬಗ್ಗೆ ಕೈಗಾರಿಕಾ ಸಚಿವರು ಯೋಚಿಸಬೇಕೆಂದು ಹೇಳಬಯಸುತ್ತೇನೆ.

ರಾಷ್ಟ್ರೀಕೃತ ಸಾರಿಗೆ ಮಾರ್ಗಗಳಲ್ಲಿ ಟೂರಿಸ್ಟ್ ಬಸ್ಸುಗಳ ಹೆಸರಿನಲ್ಲಿ ಪುನಃ ಖಾಸಗಿ ವ್ಯವಸ್ಥೆ ಶುರುವಾಗಿದೆ. ಟೂರಿಸ್ಟ್ ಬಸ್ಸುಗಳ ಒಡೆಯರು ಲಕ್ಷಾಧೀಶರಾಗುತ್ತಿದ್ದಾರೆ. ಯಾವುದೇ ಒಂದು ನೀತಿಯನ್ನು ಕಟ್ಟುನಿಟ್ಟಾಗಿ ಅನುಸರಿಸದಿದ್ದರೆ. ಸಾರಿಗೆ ರಾಷ್ಟ್ರೀಕರಣವೂ ಪಾನನಿರೋಧದ ಹಾದಿ ಹಿಡಿಯುವುದರಲ್ಲಿ ಅನುಮಾನವಿಲ್ಲ. ಪ್ರಾದೇಶಿಕ ಸಾರಿಗೆ ಇಲಾಖೆಯಲ್ಲಿ ಗುಮಾಸ್ತರಿಂದ ಉನ್ನತಾಧಿಕಾರಿಯವರೆಗೆ ದೂರುಗಳು ಕೇಳಿ ಬರುತ್ತಿವೆ. ಆರ್. ಟಿ. ಓ. ಗಳಿಗೆ ಇಂತಿಷ್ಟು ಕೊಡಬೇಕು ಎಂದು ಅದಕ್ಕಾಗಿ ಬ್ರೇಕ್ ಇನ್‌ಸ್ಪೆಕ್ಟರುಗಳು ಅಕ್ರಮ ಸಂಭಾವನೆ ಪಡೆಯದೆ ವಿಧಿಯಿಲ್ಲ. ಆರ್. ಟಿ. ಓ. ಗಳು ತಮ್ಮ ಮೇಲಿನವರಿಗೆ ಕೊಡಬೇಕೆಂದು ಅವರು ಬ್ರೇಕ್ ಇನ್‌ಸ್ಪೆಕ್ಟರುಗಳನ್ನು ಕೇಳದೇ ವಿಧಿಯಿಲ್ಲ. ಹೀಗಾಗಿ ಇದು ವಿಷ ವ್ಯೂಹದಂತೆ ಹೋಗುತ್ತಿದೆ. ಅದರ ಬಗ್ಗೆ ಸಂಬಂಧಿಸಿದವರು ತೀವ್ರ ಗಮನಕೊಡಲಿ ಎಂದು ಹೇಳುತ್ತೇನೆ.

ಇನ್ನು ಸಹಕಾರ ಇಲಾಖೆಯಂತೂ ಹೇಳುವುದೇ ಬೇಡ. ಅದನ್ನು ಯಾರು ಸೃಷ್ಟಿಸಿದರೋ, ಯಾಕೆ ಸೃಷ್ಟಿಸಿದರೋ ದೇವರೇ ಬಲ್ಲ. ಸಹಕಾರ ಇಲಾಖೆಯಲ್ಲಿ ತುಂಬಿರುವ ಅನ್ಯಾಯ, ಅಕ್ರಮ ಅದಕ್ಷತೆ, ಅವ್ಯವಸ್ಥೆ ಯಾರಿಗೂ ಹೆಸರು ತರುವಂತಹದಲ್ಲ. ಅದನ್ನು ಕಟ್ಟಿಕೊಂಡ ತಪ್ಪಿಗೆ ಆದರ ಪಾಪದ ಫಲದಿಂದ ಮುಕ್ತರಾಗಲು ಶ್ರೀ ನಾಡಗೌಡರು ಸಪ್ತಸಮುದ್ರಗಳ ಜಲಪ್ರೋಕ್ಷಿಸಿ ಕೊಂಡರೂ ಹೋಗಲಾರದೇನೋ ಅನಿಸುತ್ತದೆ.

ವಿದ್ಯಾ ಇಲಾಖೆಯಲ್ಲಿ ಶಾಲೆಗಳಿಗೆ ಗ್ರ್ಯಾಂಟ್ ನೀಡುವಲ್ಲಿ ವಿಳಂಬ, ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ, ಇದರ ಬಗ್ಗೆ ಸ್ಪಷ್ಟ ನೀತಿ ನಿರೂಪಣೆ ಅವಶ್ಯಕ. ವಿದ್ಯಾಭ್ಯಾಸದ ಹೆಸರಿನಲ್ಲಿ ಖಾಸಗಿ ಶಾಲೆಗಳವರು ವಿದ್ಯಾ ಇಲಾಖೆಯ ಕೃಪಾಛತ್ರದಲ್ಲಿಯೇ ನಡೆಸುತ್ತಿರುವ (ರ್‍ಯಾಕೆಟ್) ನ್ನು ನಿರ್ಮೂಲ ಮಾಡುವ ಧಾರ್ಷ್ಟ್ಯವನ್ನು ಶಂಕರಗೌಡರಿಗೆ ನೀಡಲಿ ಎಂದು ಶಂಕರನನ್ನು ಪ್ರಾರ್ಥಿಸುತ್ತೇನೆ.

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಲೋಕೋಪಯೋಗಿ ಇಲಾಖೆಯಲ್ಲಿ ಭಡ್ತಿ ನೀಡುವಾಗ್ಯೆ ಹಳೆಯ ಮೈಸೂರಿನ ಜ್ಯೂನಿಯರ್ ಇಂಜನಿಯರ್‌ಗಳಿಗೆ ಅನ್ಯಾಯವಾಗಿದೆ ಎಂದು ತಿಳಿದು ಬಂದಿದೆ. ಪ್ರಾದೇಶಿಕ ದೃಷ್ಟಿಕೋನ ವಿಲ್ಲದೆ ಕೇವಲ ಸೀನಿಯಾರಿಟಿ ಆಧಾರದ ಮೇಲೆ ಅವರಿಗೆ ನ್ಯಾಯ ದೊರಕಿಸಿ ಆಗಿರುವ ಅಸಮಾಧಾನ, ಅನ್ಯಾಯವನ್ನು ಸರಿಪಡಿಸಿರೆಂದು ಹೇಳಬಯಸುತ್ತೇನೆ. ಏಕೆಂದರೆ ಅಲ್ಲಿ 15–16 ವರ್ಷದಿಂದ ಬಿ. ಇ. ಗ್ರ್ಯಾಜ್ಯುಯೇಟ್‌ಗಳಾಗಿರುವವರು ಜೂನಿಯರ್ ಇಂಜನಿಯರುಗಳಾಗಿ ಕೆಲಸ ಮಾಡುತ್ತಾ ಇದ್ದಾರೆ. ಅವರ ಮೇಲೆ ಎಸ್.ಎಸ್.ಎಲ್.ಸಿ. ಪಾಸ್ ಮಾಡಿ ಜ್ಯೂನಿಯರ್ ಇಂಜನಿಯರುಗಳಾಗಿದ್ದ ಅವರನ್ನು ಅಸಿಸ್ಟೆಂಟ್ ಇಂಜನಿಯರನ್ನಾಗಿ ಹಾಕಿರುವುದು ಅನ್ಯಾಯ. ಇದು ಅಸಮಾಧಾನಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ. ಇಂತಹ ಅಸಮಾಧಾನ ಅನ್ಯಾಯವನ್ನು ಸರಿಪಡಿಸಿ ಅವರಿಗೂ ಕೂಡ ಅಸಿಸ್ಟೆಂಟ್ ಇಂಜನಿಯರುಗಳ ಕೆಲಸವನ್ನು ಕೊಟ್ಟು ಸಮಾಧಾನ ಪಡಿಸಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಇನ್ನು ದೇಶದ ಅಭಿವೃದ್ಧಿಗಾಗಿ, ಜನತೆಯ ಅನುಕೂಲಕ್ಕಾಗಿ ತೆರಿಗೆ ಹಾಕಬೇಕು, ನಿಜ. ಸರ್ಕಾರ ಯಾವುದೇ ತೆರಿಗೆ ಹಾಕಬೇಕಾದರೆ ಮಾನವ ದೃಷ್ಟಿಯಿಂದ ಯೋಚಿಸಬೇಕಾಗುತ್ತದೆ. ದಾನವ ದೃಷ್ಟಿಯಿಂದ ಯೋಚಿಸಬಾರದು. ಜನಸಾಮಾನ್ಯರ ಹಿತದೃಷ್ಟಿಯನ್ನು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಮನೆ ಬಾಡಿಗೆ ವರಮಾನದ ಮೇಲೆ ಸರ್‌ಚಾರ್ಜ್ 50 ಪರ್ಸೆಂಟ್ ಹಾಕಬೇಕೆಂದಿದ್ದೀರಿ. ಯಾರಿಗೆ ಹಾಕುತ್ತೀರಿ? ಎಷ್ಟು ವರಮಾನವಿರುವವರಿಗೆ ಹಾಕುತ್ತೀರಿ? ಇದರ ಸಾಧಕ ಬಾಧಕಗಳೇನು ಯೋಚಿಸಿದ್ದೀರಾ? ತಿಂಗಳಿಗೆ 500 ರೂಪಾಯಿ ಬಾಡಿಗೆ ಬರುವವರು ತಿಂಗಳಿಗೆ 100 ರೂಪಾಯಿ ಕಾರ್ಪೊರೇಷನ್ ಟ್ಯಾಕ್ಸ್ ಕೊಡುತ್ತಿದ್ದಾರೆ. ಅವರಿಗೆ ಸರ್‌ಚಾರ್ಜ್ ಸೇರಿ ತಿಂಗಳಿಗೆ 150 ರೂಪಾಯಿ ಆಯ್ತು. ಎಲೆಕ್ಟ್ರಿಕ್ ವಾಟರ್ ಚಾರ್ಜು ಸೇರಿ ತಿಂಗಳಿಗೆ 100 ರೂಪಾಯಿ ಆಗುತ್ತದೆ. ಒಟ್ಟು 250 ರೂಪಾಯಿ ಕೊಟ್ಟು ಉಳಿದ 250 ರೂಪಾಯಿಗಳಲ್ಲಿ ಜೀವನ ಮಟ್ಟ ತುತ್ತತುದಿಗೆ ಏರುತ್ತಿರುವ ಕಾಲದಲ್ಲಿ ಅವರ ಗತಿ ಏನು ಎಂದು ಯೋಚಿಸಿದ್ದೀರಾ? ಜೀವನಕ್ಕೆ ಭವಣೆ ಪಡುವ ಅವರ ನಿಟ್ಟುಸಿರಿನ ಶಾಪ ನಿಮಗೆ ತಟ್ಟುವುದಿಲ್ಲವೇ? ಸರ್‌ಚಾರ್ಜ ಹಾಕುವುದೇ ಆದರೆ ಅದಕ್ಕೊಂದು ಮಿತಿ ಇಡಿರಿ. ತಿಂಗಳಿಗೆ 1500 ರೂಪಾಯಿಗಳ ಮೇಲ್ಪಟ್ಟು ಬಾಡಿಗೆ ಪಡೆಯುವವರಿಗೆ ಸರ್‌ಚಾರ್ಜ್ ಹಾಕಿರಿ, ಇದರ ಆಗುಹೋಗು ಸಾಧಕ ಬಾಧಕಗಳನ್ನು ಪೂರ್ಣ ಯೋಚಿಸಿ ಒಂದು ನಿರ್ದಿಷ್ಟ ಮಿತಿ ಇಟ್ಟು ಸರ್‌ಚಾರ್ಜು ವಿಧಿಸಬೇಕೆಂದು ಹೇಳಬಯಸುತ್ತೇನೆ. ಹೆಣ್ಣುಮಕ್ಕಳು ಇದರಿಂದ ತೊಂದರೆಯಾಗುವುದೆಂದು ತಿಳಿಸಿದ್ದಾರೆ. ಅವರಿಗೆ ಪುನರ್ವಿಮರ್ಶೆ ಮಾಡುವಂತೆ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆಂದು ಹೇಳಿದ್ದೇನೆ. ಆದುದರಿಂದ ಮಾನ್ಯ ಸಚಿವರು ವಿಶಾಲ ಮನಸ್ಸಿನಿಂದ ಎರಡು ಸಾವಿರ ರೂಪಾಯಿ ಮೇಲೆ ಬಾಡಿಗೆ ಬರುವವರಿಗೆ ಮಾತ್ರ ಇದನ್ನು ಅನ್ವಯಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆ ಮಾಡಿದರೆ ಹೆಣ್ಣುಮಕ್ಕಳ ಶಾಪಕ್ಕೆ ಮಂತ್ರಿಗಳು ಗುರಿಯಾಗುವುದಿಲ್ಲವೆಂದು ಭಾವಿಸಿದ್ದೇನೆ.

12-00 NOON

ಸರ್ಕಾರದ ಇಲಾಖೆಗಳ ದುಂದುವ್ಯಯ, ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಮಾರಾಟ ತೆರಿಗೆಯಲ್ಲಿ ಸೋರಿಹೋಗುವ ಅಪಾರ ಹಣ, ಅರಣ್ಯಗಳಿಂದ ಬರುವ ಆದಾಯ, ಇವುಗಳಕಡೆ ಗಮನವಿರಿಸಿ ತೆರಿಗೆಗಳನ್ನು ಕೊಡಬೇಕಾದವರು ತಪ್ಪಿಸಿಕೊಳ್ಳದಂತೆ ಸ್ವಲ್ಪ ಜಾಗರೂಕತೆ ವಹಿಸಿದರೆ ಹೊಸ ತೆರಿಗೆ ವಿಧಿಸುವ ಸಂದರ್ಭ ಬರಲಾರದೆಂದು ನನ್ನ ಭಾವನೆ. ಸಭೆಯ ಸದಸ್ಯರು ಇದನ್ನು ಹೇಳುತ್ತಲೇ ಬಂದಿದ್ದಾರೆ. ನೀವು ಕೇಳುತ್ತಲೇ ಬಂದಿದ್ದೀರಿ. ಆದರೆ ಅಲಕ್ಷ ಆಡಳಿತದಿಂದ ಆಗುವ ನಷ್ಟ ಹೆಚ್ಚುತ್ತಲೇ ಇದೆ. ನಾವು ಹೇಳಿದ್ದು ಗೋರ್ಕಲ್ಲಮೇಲೆ ಮಳೆಗರೆದಂತಾಗಿದೆ. ಶ್ರೀಮಂತರ ಮಾತು ಬೇಡ. ಬಡವರು, ಜನಸಾಮಾನ್ಯರು ಇಂತಹ ಆಡಳಿತ ಕಲ್ಪಿಸುವ ಸೌಕರ್ಯಗಳಲ್ಲಿ ಜೀವಿಸುವುದಕ್ಕಿಂತಲೂ ಜಗತ್ತಿನಿಂದ ನಮ್ಮನ್ನು ಪಾರುಮಾಡು ಎಂದು ದೇವರಲ್ಲಿ ಬೇಡಿಕೊಳ್ಳಬೇಕಾಗಿದೆ.

ಆರ್ಥಿಕ ಬೆಳವಣಿಗೆ ಉಪಯೋಗದ ದೃಷ್ಟಿಯಿಂದ ಸಣ್ಣ ಪ್ರಮಾಣದ ಹಣಕಾಸಿನ ಸಂಸ್ಥೆಗಳ ಸ್ಥಾಪನೆಯನ್ನು ಸ್ವಾಗತಿಸುತ್ತೇನೆ. ಆದರೆ ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವ ಈ ಫೈನಾನ್ಸ್ ಕಾರ್ಪೊರೇಷನ್ನುಗಳಲ್ಲಿ ಸ್ವಾರ್ಥ ವ್ಯಕ್ತಿಗಳು ಸೇರಿ ವೈಯಕ್ತಿಕ ಹಿತಸಾಧನೆಗಾಗಿ ಜನಸಾಮಾನ್ಯರಿಗೆ ಅನ್ಯಾಯ ಮಾಡುತ್ತಿರುವ ನಿದರ್ಶನಗಳಿವೆ. ಹಣಕಾಸಿನ ಸಮತೋಲನದ ದೃಷ್ಟಿಯಿಂದ ಇಂಥಹ ಸಂಸ್ಥೆಗಳು ಹೆಚ್ಚಾಗಲು ಅವಕಾಶ ನೀಡಬೇಡಿ. ಇವುಗಳ ಬಗ್ಗೆ ಹಣಕಾಸಿನ ಸಚಿವರು ಖುದ್ದು ನಿಗಾ ಇಡುವುದು ಒಳ್ಳೆಯದೆಂದು ಹೇಳಬಯಸುತ್ತೇನೆ.

ಬೆಂಗಳೂರು ನಗರದ ಅಭಿವೃದ್ಧಿಯ ಮತ್ತು ಸೌಂದರ್ಯದ ಬಗ್ಗೆ ನೀವು ಏನು ಮಾಡಿದರೂ ಅದನ್ನು ಸ್ವಾಗತಿಸುತ್ತೇನೆ. ಆದರೆ ಕೇವಲ ಅಂತಸ್ತುಗಳ ಭವನಗಳನ್ನು ನಿರ್ಮಿಸಿ ನಗರವನ್ನು ಬೆಳೆಸುವುದರ ಬದಲು ಪಾಪಾಸುಕಳ್ಳಿಯಂತೆ ಹಬ್ಬಿರುವ ಕೊಳಚೆ ಪ್ರದೇಶಗಳ ನಿರ್ಮೂಲನ ಕನಿಷ್ಠ 5 ವರ್ಷದಲ್ಲಿಯಾದರೂ ಆಗುವಂತೆ ಒಂದು ಯೋಜನೆ ಅವಶ್ಯಕ. ನಗರದ ಸೌಂದರ್ಯಕ್ಕೆ ಕಳಂಕ ತರುತ್ತಿರುವ ನಾನಾ ಬಗೆಯ ಸಮಸ್ಯೆಗಳ ಈ ಪಾಪಕೂಪಗಳನ್ನು ನಿರ್ಮೂಲಗೊಳಿಸಲು ಕ್ರಮಬದ್ಧವಾದ ಮಾನವೀಯ ದೃಷ್ಟಿ ಹೊಂದಿದ ಯೋಜನೆ ಹಾಕಿರಿ, ಅದಕ್ಕೆ ನಮ್ಮ ಹೃತ್ಪೂರ್ವಕ ಸಹಕಾರವಿದೆ.

ಇತ್ತೀಚೆಗೆ ನಗರದ ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್‌ಗಳಲ್ಲಿ ವಾಹನ ಸಂಚಾರ ಪ್ರತಿಬಂಧಿಸಿದೆ. ಅದೂ ಅಲ್ಲದೆ ಲಾಲ್‌ಬಾಗಿನಲ್ಲಿ ಸಾರ್ವಜನಿಕ ಸಂಚಾರಕ್ಕೆ ಪ್ರವೇಶವಿಲ್ಲ. ಇನ್ನು ಮೇಲೆ ತಲೆಗಿಂತಿಷ್ಟು ವಸೂಲುಮಾಡಲಾಗುತ್ತದೆ ಎಂಬ ವದಂತಿ ಹಬ್ಬಿದೆ. ಇದು ನಿಜವಾದರೆ ಖಂಡನೀಯ. ಎಲ್ಲ ಉದ್ಯಾನವನಗಳಿಗೂ ಗೋಡೆ ಕಟ್ಟಿ ಅವುಗಳಲ್ಲಿ ಸೇವಿಸುವ ಗಾಳಿಗೂ ತೆರಿಗೆ ಹಾಕಿದರೆ ಹಣ ಬರುತ್ತದೆ. ಸ್ವಾಮಿ, ಮಂತ್ರಿಗಳ ಮನೆ ಸುತ್ತ ಉದ್ಯಾನವನವಿರುತ್ತದೆ, ಅವರು ಬೇರೆ ಕಡೆಗೆ ಗಾಳಿ ಸೇವನೆಗೆ ಹೋಗುವ ಅವಶ್ಯಕತೆ ಇಲ್ಲ. ಹೋದರೂ ನಿಮ್ಮನ್ನು ಬಿಡುತ್ತಾರೆ. ಆದರೆ ನನ್ನಂಥವರಿಗೆ ಸಂಜೆಯ ಹೊತ್ತು ವಿಶ್ರಾಂತಿಗೆ ಹೋಗುವವರಿಗೆ, ಓದಲು ಹೋಗುವ ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆಯಾಗಿದೆ. ಹೀಗೆ ಮಾಡಲು ಕಾರ್ಪೊರೇಷನ್ ಹೊಣೆಯೋ, ಅಥವ ಸರಕಾರ ಹೊಣೆಯೋ ನನಗೆ ತಿಳಿಯದು. ದಯವಿಟ್ಟು ಇಂಥಹ (ತೊಗಲಕ್) ಕಾನೂನುಗಳನ್ನು ಮಾಡಬೇಡಿ ಎಂದು ವಿನಂತಿಸುತ್ತೇನೆ.

ಇನ್ನು ಕೆಲವು ಬೋರ್ಡುಗಳು, ಕಾರ್ಪೊರೇಷನ್‌ಗಳ ಅಧ್ಯಕ್ಷಗಿರಿ, ಛೇರ್ಮನ್‌ಗಿರಿಗಳು ಮತ್ತು ಲೈಸೆನ್ಸ್‌ಗಳು, ಪರ್ಮಿಟ್ಟುಗಳು, ಏಜೆನ್ಸಿಗಳ ಬಗ್ಗೆ ಒಂದು ಮಾತು. ಆ ಹುದ್ದೆಗಳನ್ನು ನಿಮ್ಮ ಇಷ್ಟ ಬಂದವರಿಗೆ ಕೊಡಿ, ಬೇಡವೆನ್ನುವುದಿಲ್ಲ. ಆದರೆ ಅಧಿಕಾರದಲ್ಲಿದ್ದವರಿಗೇ ಪುನಃ ಪುನಃ 10–20 ವರ್ಷಗಳಾದರೂ ಅವರಿಗೇ ಕೊಡಬೇಡಿ. ತ್ಯಾಗಮಾಡಿದವರೂ, ಪ್ರಾಮಾಣಿಕರೂ, ತೊಂದರೆಯಲ್ಲಿರುವವರೂ ಇದ್ದಾರೆ. ಅಂಥವರನ್ನು ಕಡೆಗಣಿಸುವುದು ಒಳ್ಳೆಯದಲ್ಲ. ಸಾಯುವವರೆಗೂ ಅಧಿಕಾರದಲ್ಲಿರಬೇಕು, ಕೊನೆಯ ಯಾತ್ರೆಯ ಖರ್ಚೂ ಸರಕಾರದಲ್ಲೇ ಆಗಬೇಕು ಎನ್ನುವುದು ಸರಿಯೇ? ಇದರಲ್ಲೂ ರಾಜಕೀಯ ಬೇಡ. ಬಾಯಲ್ಲಿ ಸಮಾಜವಾದ, ಕೃತಿಯಲ್ಲಿ ಸ್ವಾರ್ಥ ರಾಜಕೀಯವಾದ. ಹೀಗಾದರೆ ಜನಸಾಮಾನ್ಯರಲ್ಲಿ ನಿಮ್ಮ ಬಗ್ಗೆ ಹೇಗೆ ವಿಶ್ವಾಸ ಮೂಡುತ್ತದೆ? ನಮ್ಮ ರಾಜ್ಯದ ಜನ ಉದಾರಮನಸ್ಕರೂ ವಿಶಾಲ ದೃಷ್ಟಿಯವರೂ ಆಗಿದ್ದಾರೆಂಬುದು ನಿಜ. ಬಹುಶಃ ಈ ನಮ್ಮ ಅತಿ ಉದಾರತೆಯೇ ನಮ್ಮ ದೌರ್ಬಲ್ಯದ ಲಕ್ಷಣವಾಗಿದೆ. ಇದರ ಪರಿಣಾಮವಾಗಿ ನೀರಿನ ಬಗ್ಗೆ ಕಾರ್ಖಾನೆಗಳ ಬಗ್ಗೆ, ಗಡಿ ಬಗ್ಗೆ ನಮಗೆ ಅನ್ಯಾಯವಾಗಿದೆ. ಕೇಂದ್ರದ ಈ ತಾತ್ಸಾರ, ಪಕ್ಷಪಾತ ನೀತಿ ಹೋಗಬೇಕಾದರೆ ನಾವು ದೃಢ ನಿಲುವು ತಾಳಬೇಕು. ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ಕೇಳಬೇಕು. ರಾಜ್ಯಾಂಗದ ಚೌಕಟ್ಟಿನೊಳಗೆ ಯಾವ ಕ್ಷೇತ್ರಗಳಲ್ಲಿ ನಾವು ಹೆಚ್ಚಿನ ಅಧಿಕಾರ ಪಡೆಯಬಹುದು ಎಂದು ಸಲಹೆ ನೀಡಲು ತಮಿಳುನಾಡಿನಲ್ಲಿ ನೇಮಿಸಿರುವಂತೆ ಒಂದು ತಜ್ಞರ ಸಮಿತಿಯನ್ನು ನೀವು ನೇಮಿಸಬೇಕೆಂದು ಸಲಹೆಮಾಡುತ್ತೇನೆ.

ಇನ್ನು ಕನ್ನಡದ ಬಗ್ಗೆ ತೋರಿರುವ ಅಭಿಮಾನಕ್ಕಾಗಿ ಅರ್ಥ ಸಚಿವರಿಗೆ ಅಭಿನಂದನೆಗಳು. ಕನ್ನಡ ಅಧಿಕೃತ ಭಾಷೆ ಎಂದಿದ್ದೀರಿ. ಆದರೆ ಸಂಪೂರ್ಣವಾಗಿ ಆಡಳಿತ ಭಾಷೆಯಾಗಲು ಮೊದಲು ಕನ್ನಡವನ್ನು ಎಲ್ಲ ಮಟ್ಟಗಳಲ್ಲಿ ಆಡಳಿತ ಭಾಷೆ ಎಂದು ಸಾರಿರಿ. ಅನಂತರ ಅದರ ಬೆಳವಣಿಗೆ ತಾನೇ ತಾನಾಗಿ ಆಗುತ್ತದೆ. ಇನ್ನು 13 ವರ್ಷಗಳಿಂದ ಹೇಳುತ್ತಿದ್ದೇವೆ, ಅಖಂಡ ಕರ್ನಾಟಕವಾದರೂ ಕರ್ನಾಟಕ ಎಂಬ ಹೆಸರನ್ನು ರಾಜ್ಯಕ್ಕಿಡದಿರುವುದು ಮರೆಯಲಾಗದ ಕೊರತೆ. ಕರ್ನಾಟಕ ಕೇವಲ ಒಂದು ಹೆಸರಲ್ಲ. ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ನಮ್ಮನ್ನು ಎಚ್ಚರಿಸುವ, ಅಭಿಮಾನ ಮೂಡಿಸುವ ಒಂದು ಶಕ್ತಿ. ಯಾವುದೇ ಕೆಲಸ ಮಾಡಬೇಕಾದರೆ ಎಲ್ಲರೂ ಒಪ್ಪುವಂತೆ ಯಾರ ಮನವೂ ನೋಯದಂತೆ ಮಾಡುವುದು ಕಷ್ಟ. ಕರ್ನಾಟಕ ನಾಮಧೇಯಕ್ಕೆ ಕಾಲ ಪಕ್ವವಾಗಿದೆ. ಈ ಅಧಿವೇಶನದಲ್ಲಿಯೇ ಅದನ್ನು ತರುವ, ಧೈರ್ಯ ಸರಕಾರ ಮಾಡಲಿ, ಬೆಂಬಲಿಸುವ ಮನಸ್ಸನ್ನ ನಮ್ಮ ಸದಸ್ಯರು ಮಾಡಲಿ ಎಂದು ಕೈಮುಗಿದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಟೀಕೆ ಮಾಡಬೇಕು ಎಂಬ ಕಾರಣಕ್ಕಾಗಿ ನಾನು ಟೀಕಿಸುವುದಿಲ್ಲ. ಆಗಿರುವ ತಪ್ಪುಗಳನ್ನು ತಿದ್ದಿಕೊಳ್ಳಲು ಪ್ರಾಮಾಣಿಕವಾಗಿ ಯತ್ನಿಸಿರಿ. ಅದನ್ನು ಬಿಟು ಕೆಲವೊಂದು ತಪ್ಪುಗಳಿದ್ದರೂ ಸುಮ್ಮ ಸುಮ್ಮನೆ ನಿಮ್ಮನ್ನು ನಿಮ್ಮ ಖಾತೆಗಳನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಬೇಡಿ. ಸಮಸ್ಯೆಗಳ ಪರಿಹಾರದಲ್ಲಿ ಏನಾದರೂ ಪ್ರಾಯೋಗಿಕ ಅಡಚಣೆಗಳಿದ್ದಲ್ಲಿ ಅವುಗಳನ್ನು ಹೇಳಿ. ನಮ್ಮ ಸಲಹೆ, ಸಹಕಾರ ನೀಡುತ್ತೇವೆ. ಆ ಬುದ್ಧಿಯನ್ನು ಗಾಂದಿ ಶತಾಬ್ಧಿ ವರ್ಷದಲ್ಲಿ ಆ ಪುಣ್ಯಪುರುಷ ದಯಪಾಲಿಸಲಿ.

ಕೊನೆಯದಾಗಿ ಭಾರತದ ಸದ್ಯದ ರಾಜಕೀಯ ಪರಿಸ್ಥಿತಿ ಎಷ್ಟು ಅನಿರ್ದಿಷ್ಟ ಸ್ಥಿತಿಯಲ್ಲಿದೆಯೋ ಅಷ್ಟೇ ಅನಿರ್ದಿಷ್ಟ ಸ್ಥಿತಿಯಿಂದ ಕೂಡಿರುವ ನಮ್ಮ ರಾಜ್ಯದ ಆಯವ್ಯಯ ವರದಿಯನ್ನು ನಮಗೆ ಉಗಾದಿಯ ಉಡುಗರೆಯಾಗಿ ಕೊಟ್ಟಿದ್ದಾರೆ ಮಾನ್ಯ ಹೆಗ್ಗಡೆಯವರು. ಪಾಪ, ಅವರು ಏನು ಮಾಡುತ್ತಾರೆ ? ಅವರಿಗೆ ದಿಕ್ಕು ತೋಚದಂತಾಗಿ, ದಿಗ್ಭ್ರಾಂತಿಯಾಗಿದೆ. ಅಂದಮೇಲೆ ನಾವೂ ದಿಗ್ಭ್ರಾಂತರಾಗಿ ಈ ವರದಿಯನ್ನು ಸ್ವಾಗತಿಸಬೇಕಾಗಿದೆ. ಇದುವರೆಗೂ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ, ಈ ವರದಿಯನ್ನು ಒಪ್ಪಿ ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

† Smt. WINNIFRED F. FERNANDES (Coondapur).—Mr. Speaker, Sir, I thank the Hon. Finance Minister for placing before us the budget for 1970-71. It is fairly more satisfactory than last year's budget. But I am sorry to say that much injustice has been done to South Kanara District regarding budget allotment. I can say that you have simply forgotten us though you are nearer to us as you belong to North Kanara District. May be your head is not on your shoulders or may be it is due to the split in the Congress. Anyway, I can say that it is worse than stepmotherly treatment shown to us. While going through the Budget one can see the discrimination shown to our district and when you compare it with other districts, it is quite apparent. Under the different heads no proper allotement has been made to South Kanara District. So, I request you to open your eyes and see that justice is done to South Kanara District. I can also say that there is some partiality shown as between the northernmost and southernmost parts of South Kanara. We belong to the northernmost part of South Kanara; from Mangalore; Coorg up to Sulya where there is your M. P. and your Minister, you have given adequate allotement, but you have not done justice to the northernmost part.

Smt. K. LEELAVATI RAI (Bantwal).—The hon. Member is saying 'your M. P. and your Ministers'. I cannot understand what she is saying.

Smt. WINNIFRED F. FERNANDES.—That means, the M. P. belongs to your ruling party *i. e.* the Syndicate. I think it is a discrimination made for developmental works in our area. I request you not to do it. You give us a supplementary grant and see that all development works are taken up alike.

I can thank you on one point, namely, old age pension. It is praiseworthy that you have raised it from Rs. 15 to 25 and thus rememered the old people. I request you to raise it to Rs. 30 so that it will be one rupee per day. In these hard days what can you get for even one rupee ? If you go to a hotel and eat something and take a cup of coffee, the bill will be more than one rupee.

I am sorry to say that you have not mentioned anything about our less forunate brothers and sisters, the handicapped, the deaf and the blind. You have just two institutions for the whole of the State. I therefore, urge the Government to see that for each district there is one such institution so that they can eke out their livelihood in a better manner.

About pension to teachers who retired before the Reorganisation of States, they are only a handful and they are mostly in South Kanara District. They have represented and sent appeals to the Government but they have fallen on deaf ears. Many a time when I approached the Government in this matter, they simply said " it is under consideration" For the last three years they have not taken any action. Is it because they were in Madras Presidency before States Reorganisation that they are now suppressed ? So, the Government must see that something is done to these retired teachers who were retired before the States Reorganisation.

The Government has also sanctioned D. A. to the teachers but so far it has not been implemented, I am told that the papers are tossed about from one office to another, from the Education Department to the Accountant-General and from the Accountant General back to the Department, and yet no decision has been taken. I urge upon the Government to see that it is sanctioned immediately and given to them.

For Irrigation the budget provision is only Rs. 16 crores, but what works have the Government taken up ? In South Kanara for 1970-71 there are no major, medium or minor irrigation works. When the Government says that it wants to give top priority to agriculture, why have they not included all the minor irrigation works in South Kanara District where all along the coastal belt we have got saltish water which cannot be used for any cultivation. I therefore suggest to the Minor Irrigation Department to put up salt water exclusion dams all along the coastal belt and see that water is used for cultivation. By this our people can at least have two crops. Though we are self-sufficient in food, most part of it is taken away by levy and supplied to Bangalore and other places ; but we are not given any facilities for minor irrigation. So at least a huge amount for minor irrigation may be allotted to my constituency. There is an estimate prepared for a salt water exclusion dam and by this thousands of acres can be reclaimed. At present they are all submerged under salt water. If these dams are put up the food problem would be solved to a larger extent.

The Government have mentioned some measures to slove the unemployment problem. I want to ask the Government : Is it only preaching or is the Government practising what it preaches ? Will all these measures be only on paper or are they going to be implemented by the Government ? If the Government have a mind and are earnest about them, let them implement them. Thousands of boys and girls are

(SMT. WINNIFRED F. FERNANDES)

coming out of schools and colleges every year and they are unemployed. To find employment for them has become a great problem. The educated people have become desperate. Therefore these measures should be implemented immediately. In addition to providing sheds for unemployed engineers and diploma holders for starting and running industries, lands also should be provided for unemployed educated people. At least 3 to 5 acres of lands should be distributed to each unemployed educated person. Lands should be given not only to boys but also to girls so that they can eke out their livelihood through agriculture.

In the Fourth Five-Year Plan, the Government should give top priority to animal husbandry also. I do not know why the Government is neglecting animal husbandry. What allotment have they given for the Animal Husbandry Department? There are veterinary hospitals only here and there in taluk and district head quarters but there are no rural dispensaries in malnad areas or elsewhere for treating the diseased animals. Without cattle, how can farming be done? So I urge the Government to give huge amount for animal husbandry. If the Government is keen on development of cultivation and agriculture, they should also see that animal husbandry develops side by side.

In this connection, I invite the attention of the Government to the hunger strike launched by the representative of the students of the Veterinary College demanding improvement in the working conditions of Veterinary Assistant Surgeons. They have urged sanction of the same scales of pay as are given to the Medical Graduates in the Medical Department. The Medical Surgeons look after human beings; the veterinarians look after animals. The human beings are treated in rooms in the hospitals; whereas animals are treated in stables. That is all the difference. In fact, the work of the Veterinary Doctors is more risky than the surgeons in the Medical Department. Both the professions should be treated with equal respect and given equal prospects. Therefore, I appeal to the Government to see that the scales of pay of the Veterinary Assistant Surgeons be equated with that of the Assistant Surgeons in the Medical Department.

I conclude by thanking the Chair.

†ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಯವರೇ 1970-71 ನೇ ಸಾಲಿನ ಆಯವ್ಯಯ ಪಟ್ಟಿಯಮೇಲೆ ನಡೆಯುತ್ತಿರುವ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡತಕ್ಕ ಬಗ್ಗೆ ನನಗೆ ಸಾಕಷ್ಟು ಕಾಲಾವಕಾಶವಿಲ್ಲ; ಆದ್ದರಿಂದ ಈ ದಿವಸ ಹಳೇ ಮೈಸೂರಿನ ಕಾವೇರಿ ಕಣಿವೆಯ ನೀರಾವರಿ ಯೋಜನೆಗಳ ವಿಚಾರದಲ್ಲಿ ಎದ್ದಿರತಕ್ಕ ಅನೇಕ ವಿಚಾರಗಳ ಬಗ್ಗೆ ಮಾತನಾಡಲು ನನಗೆ ಸಾಕಷ್ಟು ಕಾಲಾವಕಾಶವಿಲ್ಲದಿದ್ದರೂ ನಾನು ಕೇವಲ ಒಂದೆರಡು ಸಲಹೆಗಳನ್ನು ಮಾತ್ರ ಸರ್ಕಾರಕ್ಕೆ ಕೊಡಬೇಕೆಂದು ನಿಂತಿದ್ದೇನೆ. ಈ ದಿವಸ ಹಳೇ ಮೈಸೂರು ಜನರಿಗೇನು ಒಂದು ಜೀವನಾಡಿಯ ಮಾದರಿಯಲ್ಲಿ ಈ ಕೆಲವು ನೀರಾವರಿ ಯೋಜನೆಗಳಿರುತ್ತವೆ ಅಂದರೆ ಈ ಕಾವೇರಿ ಕಣಿವೆಯಲ್ಲಿ ಕೈಗೊಂಡಿರತಕ್ಕ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡತಕ್ಕ ಹಾದಿಯನ್ನು ಕೇಂದ್ರ ಸರ್ಕಾರದವರು ಅವುಗಳನ್ನು ತಡೇ ಹಿಡಿಯಬೇಕು ಅಥವಾ ನಿಲ್ಲಿಸಬೇಕು ಎಂಬುದಾಗಿ ನಮ್ಮ

ರಾಜ್ಯ ಸರ್ಕಾರಕ್ಕೇನು ಒಂದು ಆದೇಶ ನೀಡಿದ್ದಾರೆಂಬುದಾಗಿ ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ ಅದು ನಿಜವಾಗಿಯೂ ನಮ್ಮ ಜನರನ್ನು ಘಾಬರಿಪಡಿಸತಕ್ಕದ್ದಾಗಿದೆ. ಅಷ್ಟೇ ಅಲ್ಲದೆ ಕೆಲವು ವಿರೋಧಪಕ್ಷಗಳ ಜೊತೆಯಲ್ಲಿ ಈ ವಿಚಾರವನ್ನು ಚರ್ಚೆ ಮಾಡಿದ್ದಾರೆಂಬುದಾಗಿಯೂ ಪತ್ರಿಕೆಗಳ ವರದಿಗಳು ತಿಳಿಸುತ್ತವೆ. ಇದೇ ಮನೆಯಲ್ಲಿ ಈ ವಿಚಾರಗಳು 1964 ರಿಂದಲೂ ಚರ್ಚೆಯಾಗುತ್ತವೆ. ಆದರೆ ಈ ಹೊತ್ತಿನ ದಿನ ಕೇಂದ್ರ ಸರ್ಕಾರದವರು ಏನೊಂದು ರಾಜ್ಯ ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದಾರೆ, ಆ ಸೂಚನೆಯನ್ನು ನಾವು ವಿಮರ್ಶೆಮಾಡಿದ್ದೇ ಆದರೆ ಕೇಂದ್ರ ಸರ್ಕಾರ ಈ ರಾಜ್ಯ ಸರ್ಕಾರವನ್ನು ಒಂದು ಮಲತಾಯಿ ಧೋರಣೆಯಿಂದ ನೋಡುತ್ತಿದೆ ಎಂದು ಹೇಳಬೇಕಾಗುತ್ತದೆ. ದೇಶದಲ್ಲಿ ಕಾಂಗ್ರೆಸ್ ಇಭ್ಭಾಗವಾದ ಮೇಲಂತೂ ಕೇಂದ್ರದಲ್ಲಿರತಕ್ಕ ಸರ್ಕಾರ ನಮ್ಮ ರಾಜ್ಯ ಸರ್ಕಾರಕ್ಕೆ ತದ್ವಿರುದ್ಧ ರೀತಿಯಲ್ಲಿ ನಡೆದುಕೊಳ್ಳುತ್ತಿದೆ. ನಾನು ಈ ಸಭೆಗೆ 1952 ರಲ್ಲಿ ಸದಸ್ಯನಾಗಿ ಬಂದೆ. ಆಗಿನಿಂದಲೂ ನಾನು ವೀಕ್ಷನಾಗಿ ನೋಡುತ್ತಿರುವಂತೆ ಕೇಂದ್ರ ಸರ್ಕಾರ ಯಾವತ್ತೂ ಈ ರಾಜ್ಯ ಸರ್ಕಾರಕ್ಕೆ ಅನುಕೂಲವಾಗಿಲ್ಲ ವಿರೋಧವನ್ನೇ ವ್ಯಕ್ತಪಡಿಸುತ್ತಾ ಬಂದಿದೆ. ಇದೇ ಸಭೆಯಲ್ಲಿ ಕಾವೇರಿ ಕಣಿವೆಯ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಸರ್ವಾನುಮತದ ಒಪ್ಪಿಗೆಯನ್ನು ಪಡೆದು ನಿರ್ಣಯವನ್ನು ಪಾಸ್ ಮಾಡಿ ಕೇಂದ್ರಕ್ಕೆ ಅನುಮತಿಗಾಗಿ ಕಳುಹಿಸಲಾದ ಸಂಬಂಧದಲ್ಲಿ ನಮಗಿನ್ನೂ ಕ್ಲಿಯರೆನ್ಸ್ ಸಿಕ್ಕುವುದರಲ್ಲೇ ಇದೆ. ಇದು ನಿಜವಾಗಿಯೂ ನಮ್ಮ ರಾಜ್ಯದ ದುರ್ದೈವ. ಕೇಂದ್ರದಲ್ಲಿ ಈ ರಾಜ್ಯಕ್ಕೆ ಯಾವರೀತಿಯಿಂದಲೂ ಸಹಾನುಭೂತಿಯನ್ನು ತೋರಿಸುತ್ತಿಲ್ಲ ಕಾಂಗ್ರೆಸ್ ದೇಶದಲ್ಲಿ ಇಭ್ಭಾಗವಾದ ಮೇಲಂತೂ ಈ ಕಾರ್ಯಗಳನ್ನು ಒಂದು ಸೇಡನ್ನು ತೀರಿಸಿಕೊಳ್ಳತಕ್ಕ ಮಾದರಿಯಲ್ಲಿ ನಡೆಸುತ್ತಿದ್ದಾರೆ. ಕೇಂದ್ರದಲ್ಲಿ ನೀರಾವರಿ ಸಚಿವರಾಗಿ ರತಕ್ಕ ಕೆ. ಎಲ್. ರಾವ್ ಅವರು ಅಲ್ಲಿರುವತನಕ ಮೈಸೂರಿಗೆ ನ್ಯಾಯ ಸಿಕ್ಕುವುದಿಲ್ಲ. ನಮ್ಮ ರಾಜ್ಯ ಸರ್ಕಾರ ಎಲ್ಲ ಯೋಜನೆಗಳನ್ನೂ ನಿಲ್ಲಿಸಬೇಕಾಗುವುದು. ಆದರೆ ರಾಜ್ಯಾಂಗದ ಪ್ರಕಾರ ಅವರಿಗೆ ಇಂಥ ಒಂದು ಪವರಿದೆಯೇ ಎಂಬುದಾಗಿ ನೋಡುವುದಾದರೆ ಅವರಿಗೆ ಈ ಅಧಿಕಾರಗಳು ಇದ್ದಂತೆ ಕಾಣುವುದಿಲ್ಲ. ಎರಡು ರಾಜ್ಯಗಳಿಗೆ ಒಂದು ನದೀ ನೀರಿನ ಬಗ್ಗೆ ವಾದವಿವಾದಗಳು ಉದ್ಭವಿಸಿದಾಗ ಉಭಯ ರ್ರಾಜಗಳ ಮುಖ್ಯ ಮಂತ್ರಿಗಳನ್ನೂ ಕರೆಸಿ ಅವರೊಂದಿಗೆ ನೆಗೋಷಿಯೇಟ್ ಮಾಡಬಹುದೆಂದು ರಾಜ್ಯಾಂಗದಲ್ಲಿ ಹೇಳಿದೆ. ಆದರೆ ಅದನ್ನು ಬಿಟ್ಟು ಈ ದಿವಸ ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕ ಸೂಚನೆಯೇನಿದೆ ಅದು ಅವರ ಅಧಿಕಾರ ವ್ಯಾಪ್ತಿಯನ್ನು ಮೀರಿ ಹೋಗಿದೆ. ಅಷ್ಟೇ ಅಲ್ಲ ಕೇಂದ್ರದಲ್ಲಿ ನೀರಾವರಿ ಸಚಿವರಾದ ಶ್ರೀ ಕೆ. ಎಲ್. ರಾವ್ ಅವರು ಇರುವವರೆಗೂ ಮೈಸೂರು ರಾಜ್ಯಕ್ಕೆ ನ್ಯಾಯ ದೊರಕುವುದಿಲ್ಲ ಎಂಬುದನ್ನು ನಾನು ಒತ್ತಿ ಹೇಳಬಯಸುತ್ತೇನೆ.

12-30 P. M.

ಶ್ರೀ ಹೆಚ್. ಎನ್. ನಂಜೇಗೌಡ.—ಈ ಮಲತಾಯಿ ಧೋರಣೆ ಮೊದಲಿನಿಂದಲೂ ಇದೆ. ಅದು ನಿಜ. ಮೊದಲೇ ಮಲತಾಯಿ ಧೋರಣೆ ಇದ್ದಿದ್ದರೆ ಟ್ರಿಬ್ಯೂನಲ್‌ಗೆ ಹೋಗುತ್ತಾ ಇದ್ದರು ಎಂದು ಶ್ರೀಮಾನ್ ದಯಾನಂದಸಾಗರ್‌ರವರು ಹೇಳಿದರು. ಅವರು ಸ್ಟೇ ಆರ್ಡರ್ ಏತಕ್ಕೆ ಕೊಡಲಿಲ್ಲ? Either the Prime Minister or somebody in the Centre have taken personality as a greater issue than the cause of the Country.

ಶ್ರೀ ಹೆಚ್. ಡಿ. ದೇವೇಗೌಡ.—ಈವೊತ್ತು ಏನು ಒಂದು ರಾಜಕೀಯ ಗೊಂದಲ ಇದೆಯೋ ಆ ಗೊಂದಲದಿಂದಾಗಿ ತಡೆ ಆರ್ಡರ್ ಕೊಡುವುದಾದರೆ ಬಹುಶಃ ಆ ತಡೆ ಆರ್ಡರನ್ನು ವೇಸ್ಟ್‌ಪೇಪರ್ ಬ್ಯಾಸ್ಕೆಟ್‌ಗೆ ಹಾಕಬೇಕಾಗುತ್ತೆ. ಅವರು ಯಾರೇ ಆಗಿರಲಿ ಅವರು ತಮ್ಮ ಶಕ್ತಿಯನ್ನು ಪ್ರದರ್ಶನ ಮಾಡುವುದಕ್ಕೆ ಹೋದರೆ, ಈ ಪ್ರಾಜೆಕ್ಟ್‌ಗಳನ್ನು ನಿಲ್ಲಿಸುತ್ತೇವೆ ಎಂದು ಹೇಳಿದರೆ ಅದಕ್ಕೆ ಆಸ್ಪದ ಕೊಡುವುದಿಲ್ಲ. ಕಡೆಗೆ ಅವರ ಶಕ್ತಿಯನ್ನು ತೋರಿಸಬೇಕಾಗುತ್ತದೆ. ಕೇಂದ್ರದ ಮೇಲೆ ಪ್ರಭಾವ ಬೀರಿ ರಾಜ್ಯ ಸರ್ಕಾರಕ್ಕೆ ತೊಂದರೆಗಳನ್ನು ಉಂಟು ಮಾಡಿ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಾದರೆ ಬಹುಶಃ ರಾಜ್ಯ ಸರ್ಕಾರ ಒಂದೇ ಅಲ್ಲ, ದೇಶದ ಜನತೆಯೂ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ನಾನು ಹೇಳುತ್ತೇನೆ. ಈವೊತ್ತು ರಾಜ್ಯ ಸರ್ಕಾರದ ಆಡಳಿತ ಸೂತ್ರಗಳನ್ನು ಹೊತ್ತಿರತಕ್ಕಂಥ ಕೇಂದ್ರ ಸರ್ಕಾರ ಒಂದು ಸೇಡಿನ ರೂಪದಲ್ಲಿ ಒಂದುವೇಳೆ ನಮ್ಮ ರಾಜ್ಯ ಸರ್ಕಾರವನ್ನು ಡಿಸ್‌ಮಿಸ್ ಮಾಡಿದ್ದೇ ಆದರೆ ಅಥವಾ ರಾಷ್ಟ್ರಪತಿ ಆಡಳಿತವನ್ನು ತಂದರೂ ಏನು ಸಂಕಷ್ಟ ಪರಿಸ್ಥಿತಿ ಬಂದರೂ ಕೇಂದ್ರದ ಆಜ್ಞೆಗಳಿಗೆ ತಲೆಬಾಗಬೇಕಾಗಿಲ್ಲ ಎಂದು ಈ ಸಂದರ್ಭದಲ್ಲಿ ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಈವೊತ್ತು ನಮ್ಮ ಮುಂದಿರತಕ್ಕಂಥ ವಿಷಯಗಳು ಏನು ಇವೆಯೋ ಅವನ್ನು ನಾವು ಆರ್ಬಿಟ್ರೇಷನ್ ಮುಂದೆ ತೆಗೆದುಕೊಂಡು ಹೋಗಿ

(ಶ್ರೀ ಹೆಚ್. ಡಿ. ದೇವೇಗೌಡ)

ಬಗ್ಗೆಹರಿಸಬೇಕಾಗಬಹುದು. ನನಗೆ ತಿಳಿದ ಹಾಗೆ 1924ನೇ ಇಸವಿ ಅಗ್ರಿಮೆಂಟ್‌ನಲ್ಲಿ ಕಾವೇರಿ ನೀರು ಹಂಚತಕ್ಕಂಥ ಅಗ್ರಿಮೆಂಟ್ ಆಗಿಲ್ಲ. ಕೃಷ್ಣರಾಜಸಾಗರ ಕಟ್ಟುವಂಥ ಕಾಲದಲ್ಲಿ ಮದ್ರಾಸ್ ಸರ್ಕಾರದವರು ಏನು ಒಂದು ಆಕ್ಷೇಪಣೆಯನ್ನು ಎತ್ತಿದ್ದಾರೆ ಅದನ್ನು ಸರಿಮಾಡುವುದಕ್ಕೋಸ್ಕರವೇ ಈ ವರ್ಕಿಂಗ್ ಟೇಬಲ್ಸ್ ಮಾಡಿದ್ದಾರೆ ಯಾವಯಾವ ರೀತಿ ಮಾಡಬೇಕು ಎಂಬುದರ ಬಗ್ಗೆ ಆ ಒಂದು ಸಂದರ್ಭದಲ್ಲಿ ಈ ಎರಡು ಸರ್ಕಾರಗಳಿಗೂ ಒಂದು ಒಪ್ಪಂದವಾಗಿದೆಯೇ ಹೊರತು ಕಾವೇರಿ ಬೇಸಿನ್‌ನ ಪೂರ್ಣ ನೀರನ್ನು ಈ ಎರಡು ರಾಜ್ಯಗಳಿಗೂ ಯಾವ ಯಾವ ಪ್ರಮಾಣದಲ್ಲಿ ಹಂಚಬೇಕೆಂಬುದರ ಬಗ್ಗೆ ಯಾವ ತರಹ ನಿರ್ಣಯವಾಗಲಿ ಆಗಿಲ್ಲ. ಇದು ಎಲ್ಲರೂ ಒಪ್ಪತಕ್ಕಂಥ ನಿರ್ಣಯ ಎಂದು ನಾನು ತಿಳಿದುಕೊಂಡಿದ್ದೇನೆ. ಈವೊತ್ತು ನಮ್ಮ ಮುಂದಿರತಕ್ಕಂಥ ಸಮಸ್ಯೆ ಇಷ್ಟು. ಹಿಂದೆ ಇದೇ ಸಭೆಯಲ್ಲಿ ಒಂದು ನಾನ್ ಅಫಿಷಿಯಲ್ ರೆಸಲ್ಯೂಷನ್ ಮೇಲೆ ಚರ್ಚೆ ಆಗತಕ್ಕಂಥ ಕಾಲದಲ್ಲಿ ಒಂದು ಅಭಿಪ್ರಾಯ ಕೊಟ್ಟಿದ್ದಾರೆ ಈ ಅಗ್ರಿಮೆಂಟನ್ನು ಒಪ್ಪುವುದಕ್ಕೆ ಸಾಧ್ಯ ಇಲ್ಲ ಎಂದು. ಕಾರಣ ಏನೆಂದರೆ 1956ರಲ್ಲಿ ರಾಜ್ಯಗಳ ಪುನರ್ವಿಂಗಡಣೆ ಆದಮೇಲೆ ಅನೇಕ ಹೊಸ ಪ್ರಾಂತಗಳು ಬಂದಿವೆ. ಇದನ್ನು ವಿಶದವಾಗಿ ಹೇಳುವುದಕ್ಕೆ ಸಮಯ ಇಲ್ಲ. ಈವೊತ್ತು ನಮ್ಮ ರಾಜ್ಯವಾದರೂ ಕೂಡ ಎರಡು ನಿರ್ದಿಷ್ಟವಾದ ನಿಲುವನ್ನು ತಾಳಬೇಕಾಗುತ್ತದೆ. ಏತಕ್ಕೆಂದರೆ ಆರ್ಬಿಟ್ರೇಷನ್ ಮುಂದೆ ಹೋಗುವುದಕ್ಕೆ ಸರಿಯಾದಂಥ ಪ್ರಭಾವಶಾಲಿಗಳಾದಂಥ ಲೀಗಲ್ ಎಕ್ಸ್‌ಪರ್ಟ್‌ನ ಅಭಿಪ್ರಾಯ ಪಡೆದುಕೊಂಡು ಹೋಗಬೇಕಾಗುತ್ತೆ. ಒಂದು ವೇಳೆ ಆರ್ಬಿಟ್ರೇಷನ್‌ಗೆ ಹೋಗುವುದು ಸೂಕ್ತ ಎಂದು ಕಂಡುಬಂದರೆ ಈ ಅಗ್ರಿಮೆಂಟನ್ನು ರಿವೈಸ್ ಮಾಡುವುದಕ್ಕೆ ಸಾಧ್ಯ ಇಲ್ಲ. ಒಂದು ಹೊಸ ವಾದವನ್ನು ಹೂಡಬೇಕಾಗುತ್ತದೆ. ಅದು ಏನೆಂದರೆ ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಪೂರ್ಣ ನೀರು ಏನು ಇದೆ ಅದರ ವಿತರಣೆಯನ್ನು ಕೇಳುವ ಬಗ್ಗೆ ನಮ್ಮ ವಾದವನ್ನು ಇಡಬೇಕು ಎಂದು ನನ್ನ ವೈಯುಕ್ತಿಕ ಅಭಿಪ್ರಾಯ ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ಆರ್ಬಿಟ್ರೇಷನ್‌ಗೆ ಹೋಗತಕ್ಕಂಥ ಸಂದರ್ಭ ಯಾವಾಗ ನಾವು ಕಟ್ಟತಕ್ಕಂಥ ಯೋಜನೆಗಳಿಗೆ ತಡೆ ಬರುತ್ತದೋ ಅಥವಾ ಆತಂಕವಾಗುತ್ತದೋ ಆವಾಗ ಅದರ ಬಗ್ಗೆ ಲೀಗಲ್ ಎಕ್ಸ್‌ಪರ್ಟ್ ಅವರ ಅಭಿಪ್ರಾಯ ಪಡೆಯುವುದು ಸೂಕ್ತ ಎಂಬುದು ನನ್ನ ಅಭಿಪ್ರಾಯ. ಒಂದು ವೇಳೆ ಹಾಗೇನಾದರೂ ಈಗ ನಡೆಯುತ್ತಾ ಇರತಕ್ಕಂಥ ಕಾಮಗಾರಿಗಳನ್ನು ನಿಲ್ಲಿಸುವುದಾದರೆ ಅಥವಾ ತಡೆ ಮಾಡುವುದು ಇನ್‌ಎವಿಟಬಲ್ ಆದರೆ ಅದನ್ನು ನಾವು ಒಪ್ಪುವುದಕ್ಕೆ ಸಾಧ್ಯ ಇಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈವೊತ್ತು ಶ್ರೀಮಾನ್ ನಂಜೇಗೌಡರು ಮಾತನಾಡುವಾಗ ಹೇಳಿದರು. ನರ್ಮದಾ ನದಿ ನೀರನ್ನು ಹಂಚಿಕೊಳ್ಳತಕ್ಕ ಬಗ್ಗೆ ವಾದವಿವಾದಗಳು ನಡೆದು ಕೇಂದ್ರದವರು ಟ್ರಿಬ್ಯೂನಲ್ ಮಾಡಿದರು. ಎಂದು ನನಗೆಗೊತ್ತಿರುವ ಹಾಗೆ ಪ್ರತಿಭಟನೆ ಮಾಡಿ ಸುಪ್ರೀಂಕೋರ್ಟಿಗೆ ಮಧ್ಯ ಪ್ರದೇಶದವರು ಹೋಗಿದ್ದಾರೆ ಈ ರೀತಿ ಆರ್ಬಿಟ್ರೇಷನ್‌ಗೆ ಹೋಗಬೇಕಾದರೆ ಈ ಎರಡು ಸರ್ಕಾರಗಳು ಒಪ್ಪಿದರೆ ಸಾಧ್ಯವೇ ವಿನ ಇಲ್ಲದಿದ್ದರೆ ಮಾಡುವುದಕ್ಕಾಗುವುದಿಲ್ಲ. ಟ್ರಿಬ್ಯೂನಲ್ ಮಾಡಬೇಕಾದರೆ with the mutual consent of the both the parties ಮಾತ್ರ ಸಾಧ್ಯ. ಆದುದರಿಂದ ಈ ಆರ್ಬಿಟ್ರೇಷನ್ ಅನಾನುಕೂಲವಾಗಿದೆ ಎಂದು ಕಂಡುಬಂದರೂ ಕೂಡ ಅದಕ್ಕೆ ನಾವು ಒಪ್ಪಬೇಕಾಗಿಲ್ಲ. 1974ನೇ ಇಸವಿಯವರೆಗೆ ಈ ಕಾವೇರಿ ನೀರಿನ ಯೋಜನೆ ಬಗ್ಗೆ ಏನು ಒಂದು ಅಗ್ರಿಮೆಂಟ್ ಆಗಿತ್ತೋ ಆ ಅವಕಾಶವನ್ನೇ ಈಗ ರಾಜ್ಯ ಸರ್ಕಾರದವರು ಏಕಪಕ್ಷೀಯವಾಗಿ ಮುಂದುವರಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈವೊತ್ತು ಆದರಿಂದ 45 ಟಿ. ಎಂ. ಸಿ. ಎಫ್. ಟಿ. ನೀರು ಬರಬೇಕು ಎಂದು ಏನು ಒಂದು ಅಗ್ರಿಮೆಂಟ್ ಇದೆಯೋ ಅದನ್ನು ಉಪಯೋಗಿಸಿಕೊಂಡಿರತಕ್ಕ ಬಗ್ಗೆ ಏನು ಒಂದು ಅಡಚಣೆಯನ್ನು ತರುತ್ತಿದ್ದಾರೋ ಅದರ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕು. ಈ ರೈಪೇರಿಯನ್ ರೈಟ್ಸ್ ನಮಗೆ ಇದೆ ಎಂದು ತಿಳಿದುಕೊಂಡು ಶ್ರೀಮಾನ್ ಕರುಣಾನಿಧಿಯವರು 1924ನೇ ಇಸವಿಯಲ್ಲಿ ಅಗ್ರಿಮೆಂಟ್ ಆದಮೇಲೆ ಮದ್ರಾಸ್ ಸರ್ಕಾರದವರು ಮಾಡಿರುವ ಪ್ರಾಜೆಕ್ಟಿನಿಂದ ಆಗಿರುವ ಹೊಸ ಪ್ರದೇಶ ಅಭಿವೃದ್ಧಿ ಮಾಡಿಕೊಂಡು ಹೋಗಿದ್ದಾರೆ. ಅದನ್ನು ನಾವು ಪತ್ರಿಕೆಗಳಲ್ಲೂ ಓದಿದ್ದೇವೆ. ಈ ಹೊಸ ಪ್ರದೇಶದ ಬಗ್ಗೆ ರೈಪೇರಿಯನ್ ರೈಟ್ಸ್‌ನಿಂದ ಈವೊತ್ತಿನ ದಿವಸ ಮೈಸೂರು ಸರ್ಕಾರದವರಿಗೆ ನೀರನ್ನು ಕೊಡತಕ್ಕಂಥ ಬಗ್ಗೆ ತಲೆ ತೂಗಡಿಸುತ್ತಿದ್ದಾರೆ. ಕೇಂದ್ರ ಸರ್ಕಾರದವರು ಮದ್ರಾಸ್ ರಾಜ್ಯಕ್ಕೆ ಈ ಪ್ರಾಜೆಕ್ಟ್‌ಗಳನ್ನು ಕಟ್ಟುವಾಗ ಕ್ಲಿಯರೆನ್ಸ್ ಕೊಡುವ ಕಾಲದಲ್ಲಿ ನಮ್ಮ ಸರ್ಕಾರವನ್ನು ಕೇಳಲಿಲ್ಲ ಸಂದರ್ಭ ಹೀಗಿರುವಾಗ ಈ ಅಗ್ರಿಮೆಂಟನ್ನು ವ್ಯಾಲಿಡ್ ಮಾಡಿ ಹೊಸ ಭಾಗಗಳನ್ನು ಡೆವಲಪ್ ಮಾಡಿರುವಾಗ ಈ ಒಂದು ರೈಪೇರಿಯನ್ ರೈಟ್ಸ್ ಕೊಡುವ ಬಗ್ಗೆ ನಾವೇನು ಬೈಂಡ್ ಆಗಬೇಕಾಗಿಲ್ಲ. ಈವೊತ್ತು ಆರ್ಬಿಟ್ರೇಷನ್ ಆಗುವಂಥ ಸಂದರ್ಭದಲ್ಲಿ ವಾಟರ್ ರೀಅಲೋಕೇಷನ್ ಏನು ಇದೆ

ಅದನ್ನು ಪುನರ್‌ಹಂಚಿಕೆ ಮಾಡಬೇಕು. 1924ನೇ ಇಸವಿ ಅಗ್ರಿಮೆಂಟ್‌ಗೆ ವಿರುದ್ಧವಾಗಿ ಕೇಂದ್ರ ಸರ್ಕಾರ ಮದ್ರಾಸ್ ಸರ್ಕಾರಕ್ಕೆ ಸಿ. ಪಿ. ಡಬ್ಲ್ಯು. ಡಿ. ಗೆ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಯಾವುದೇ ಕಾರಣದಿಂದಾಗಲಿ ಅವರಿಗೆ ರೈಪೇರಿಯನ್ ರೈಟ್ಸ್ ಕೊಡುವುದಕ್ಕೆ ಸಾಧ್ಯ ಇಲ್ಲ ಎಂದು ನಾನು ಖಡಾಖಂಡಿತವಾಗಿ ಹೇಳಬೇಕಾಗಿದೆ.

ಇನ್ನೊಂದು ವಿಷಯ ಏನೆಂದರೆ ಈ ಅಗ್ರಿಮೆಂಟ್ ಪ್ರಕಾರ ಈ ನೀರನ್ನು ಯಾವರೀತಿ ಹಂಚಿಕೊಳ್ಳಬೇಕೆಂದು ಅದರ ಉಪಯೋಗ ಮಾಡಿಕೊಳ್ಳುವುದಕ್ಕೆ ರೂಲ್ಸ್ ಅಂಡ್ ರೆಗ್ಯುಲೇಷನ್ ಏನು ಇದೆಯೋ ಅದಕ್ಕೆ ಬದ್ಧರಾಗಿಲ್ಲವೆಂದು ಸ್ಪಷ್ಟವಾಗಿ ತಿಳಿಸುತ್ತೇನೆ.

ಕೊನೆಯದಾಗಿ ಇನ್ನೊಂದು ವಿಷಯ ಹೇಳುತ್ತೇನೆ. ಈವೊತ್ತು ಯಾವುದೇ ಸರ್ಕಾರ ಇರಲಿ ಇಂಡಿಕೇಟ್ ಸರ್ಕಾರವೇ ಇರಲಿ ಸಿಂಡಿಕೇಟ್ ಸರ್ಕಾರವೇ ಇರಲಿ ಸರ್ಕಾರದ ಒಂದು ಪ್ರಶ್ನೆ ಮುಖ್ಯವಲ್ಲ. ಈವೊತ್ತು ಮೈಸೂರಿನ 5-6 ಜಿಲ್ಲೆಗಳಿಗೆ ಇದು ಅನಾಹುತವಾಗುತ್ತದೆ ಈವೊತ್ತು ದೇಶದ ಪ್ರಶ್ನೆ ಬಂದಾಗ ಎಲ್ಲಾ ಸದಸ್ಯರೂ ಏಕ ಮನಸ್ಸಿನಿಂದ ಯಾರು ಯಾವ ಪಕ್ಷಕ್ಕೇ ಸೇರಿರಲಿ ರಾಜ್ಯದ ಹಕ್ಕನ್ನು ಉಳಿಸಿಕೊಳ್ಳುವುದಕ್ಕೆ ಹಿಂಜರಿಯಲಾರರು ಎಂದು ಹೇಳುತ್ತೇನೆ. ಶ್ರೀಮಾನ್ ನಂಜೇಗೌಡರೂ ಕೂಡ ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಶ್ರೀಮಾನ್ ವೀರೇಂದ್ರಪಾಟೀಲರು ನಿರ್ಧಾರ ಕೈಗೊಳ್ಳಬೇಕು. ಕೇಂದ್ರದವರು ಕೊಡತಕ್ಕಂಥ ತೊಂದರೆಗಳಿಗೆ ತಲೆಬಾಗಬೇಕಾಗಿಲ್ಲ. ಅವರ ಸನ್ನಿವೇಶಕ್ಕೆ ತಕ್ಕಂತೆ ಹೊಂದಿಕೊಂಡು ಹೋಗಬೇಕಾಗಿಲ್ಲ. ಅವರು ನಮ್ಮ ರಾಜ್ಯ ಸರ್ಕಾರವನ್ನು ಡಿಸ್ಮಿಸ್ ಮಾಡಿ ರಾಷ್ಟ್ರಪತಿಗಳ ಆಡಳಿತವನ್ನು ಜಾರಿಗೆ ತಂದರೂ ತಲೆಬಾಗಬೇಕಾಗಿಲ್ಲ. ಈ ಶಾಸನ ಸಭೆಯಲ್ಲಿಯೇ ಇರಬೇಕು, ಮುಖ್ಯಮಂತ್ರಿಗಳಾಗಿಯೇ ಇರಬೇಕು ಎನ್ನುವ ಆಸೆ ಅವರಿಗಿದ್ದರೆ ಅದನ್ನು ಬಿಟ್ಟು ಬಿಡಬೇಕು. ಏತಕ್ಕೆಂದರೆ ಅವರು ರಾಜ್ಯದ ಒಂದು ಹಿತವನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದವರಿಗೆ ಒತ್ತಾಯ ಮಾಡಿ ನಮ್ಮ ಕೆಲಸ ಮಾಡಿಸಬೇಕು. ನಾವು ಏನೂ ಬೆದರಬೇಕಾಗಿಲ್ಲ. ರಾಜ್ಯದಲ್ಲಿ ಪ್ರೆಸಿಡೆಂಟ್ ರೂಲ್ ಬಂದರೂ ಪ್ರತಿಭಟನೆ ಮಾಡುವುದಕ್ಕೆ ಜನ ಸಿದ್ಧರಾಗಿದ್ದಾರೆ ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ವಿಷಯವನ್ನು ಹೇಳುತ್ತೇನೆ. ಶ್ರೀಮಾನ್ ವೀರೇಂದ್ರಪಾಟೀಲರು ಈ ಕಾವೇರಿ ಬೇಸಿನ್‌ನ ಬಗ್ಗೆ ಕೆಲಸ ಮಾಡಲು ಸಾಕಷ್ಟು ಆಸ್ತೆ ವಹಿಸಿದ್ದಾರೆ. ಇದು ಸತ್ಯ. 1965 ರಲ್ಲೇ ಅವರು ನೀರಾವರಿ ಮಂತ್ರಿಗಳಾಗಿದ್ದಾಗ ಅಂದರೆ ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿದ್ದಾಗಲೇ ಅವರು ಇದರಮೇಲೆ ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದರು. 1962 ರಿಂದ 1965 ರವರೆಗೆ ಶ್ರೀಮಾನ್ ಕೆ. ಮಲ್ಲಪ್ಪನವರು ಇಂಡಸ್ಟ್ರಿ ಮಿನಿಸ್ಟರ್ ಆಗಿದ್ದು ದಿವಂಗತರಾದಮೇಲೆ ಪೋರ್ಟ್‌ಫೋಲಿಯೋ ಹಂಚಿಕೆಯಾದಾಗ ಶ್ರೀಮಾನ್ ವೀರೇಂದ್ರ ಪಾಟೀಲರು ನೀರಾವರಿ ಸಚಿವರಾಗಿ ಅಧಿಕಾರ ವಹಿಸಿಕೊಂಡರು. ಕಳೆದ ನಾಲ್ಕು ವರ್ಷದಿಂದಲೂ ಕಾವೇರಿ ಬೇಸಿನ್‌ನ ಪ್ರತಿಯೊಂದು ಪ್ರಾಜೆಕ್ಟು ಬಗ್ಗೆ ಎಷ್ಟು ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದಾರೆಂದು ನಾನು ಈ ಸಂದರ್ಭದಲ್ಲಿ ಮನವರಿಕೆ ಮಾಡಿಕೊಳ್ಳಬೇಕಾಗಿದೆ.

ಏಕೆಂದರೆ ಹಳೆಯ ಮೈಸೂರಿನ ಬಗ್ಗೆ ಹೆಚ್ಚು ಆಸಕ್ತಿ ಇಲ್ಲ, ಒಂದು ರೀತಿಯ ಅಸಡ್ಡೆ ಮನೋಭಾವದಿಂದ ವರ್ತಿಸಿದರು ಎನ್ನುವ ವಾದ ಇಲ್ಲಿ ಮಾಡುವುದು ಸಾಧುವಲ್ಲ. ಹಳೆಯ ಮೈಸೂರಿನ ಯೋಜನೆಗಳ ಬಗ್ಗೆ ಉಲ್ಲೇಖಿಸಬೇಕಾದರೆ, 1964 ರಲ್ಲೇ ಕೇಂದ್ರಕ್ಕೆ ಇದರ ಬಗ್ಗೆ ಎಲ್ಲ ವಿವರಗಳನ್ನೂ ಕಳಿಸಲಾಗಿತ್ತು ಮತ್ತು 1924 ರ ಅಗ್ರಿಮೆಂಟನ್ನು ಪುನರ್ವಿಮರ್ಶೆ ಮಾಡಲು ಸಾಧ್ಯವೇ ಎನ್ನುವುದಕ್ಕೆ ಒಂದು ಟೆಕ್ನಿಕಲ್ ಕಮಿಟಿ ಮಾಡಿಕೊಂಡು ಅದರ ಅಭಿಪ್ರಾಯಗಳನ್ನು ಕೂಡ ಅನೇಕ ಸಲ ನಮ್ಮ ಈ ಅಸೆಂಬ್ಲಿಯಲ್ಲಿ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಕಳೆದ ಸಾರಿಯೂ ಕೂಡ ಇದರ ಬಗ್ಗೆ ಹೇಳಿದರು ಮತ್ತು ಇದಕ್ಕೆ ಸಾಕಷ್ಟು ಹಣವನ್ನೂ ಕೂಡ ಒದಗಿಸಿ ತೀವ್ರವಾಗಿ ಕೆಲಸವಾಗುವಂತೆ ಕೆಲಸಗಳನ್ನು ಮಾಡುತ್ತಿದ್ದಾರೆ. ಇದರಿಂದಾಗಿ ನಮ್ಮ ಕಬಿನಿ ಪ್ರಾಜೆಕ್ಟು ಇನ್ನು ಎರಡು ವರ್ಷದೊಳಗೆ ಮುಗಿಯುವುದರಲ್ಲಿದೆ. ಮತ್ತು ಇದರಿಂದ ಜನರಿಗೆ ನೀರು ಸಿಗುವ ಸೌಕರ್ಯ ಸಿಗುತ್ತದೆ. ಇದನ್ನೆಲ್ಲಾ ನಾವು ಸರಿಯಾಗಿ ಗಮನಕ್ಕೆ ತೆಗೆದುಕೊಂಡರೆ ನಮ್ಮ ಸರಕಾರ ಹಳೆಯ ಮೈಸೂರಿನ ಬಗ್ಗೆ ಅಸಡ್ಡೆಯಿಂದ ಕೂಡಿದ ಮನೋಭಾವ ಉಳ್ಳದ್ದಾಗಿದೆ ಎನ್ನುವ ವಾದವನ್ನು ಯಾರೂ ಈ ಸಂದರ್ಭದಲ್ಲಿ ಒಪ್ಪುವುದಕ್ಕಾಗುವುದಿಲ್ಲ. ಮೊನ್ನೆಯ ದಿನ ಮಾನ್ಯ ಹಣಕಾಸಿನ ಮಂತ್ರಿಗಳು ಸಂಪನ್ಮೂಲ ಸಮಿತಿಗಳ ಬಗ್ಗೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಕೆಲವು ಯೋಜನೆಗಳ ಬಗ್ಗೆ ಹಣವನ್ನು ಕೊಡುವುದರ ಬಗ್ಗೆ ವಿವರಗಳನ್ನು ಹೇಳುತ್ತಾ ಇದರಲ್ಲಿ ಎರಡು ಜೋನ್‌ಗಳನ್ನಾಗಿ ಮಾಡಲಾಗಿದೆ. ಇದರಲ್ಲಿ ಸೌತ್ ಜೋನಿಗೆ ಇಷ್ಟು ಖರ್ಚು

(ಶ್ರೀ ಎಚ್. ಡಿ. ದೇವೇಗೌಡ)

ನಾರ್ತ್ ಜೋನಿಗೆ ಇಷ್ಟು ಖರ್ಚು ಆಗಿದೆ ಎಂದು ತಿಳಿಸುವಾಗ 1969-70 ರಲ್ಲಿ ನಾರ್ತ್ ಜೋನಿನಲ್ಲಿ ಮೇಜರು ಇರಿಗೇಷನ್ ಪ್ರಾಜೆಕ್ಟ್‌ಗಳಿಗಾಗಿ ಎಷ್ಟು ಹಣ ಕೊಡಲಾಗಿದೆ ಎಂದು ಹೇಳಿದರು ಮತ್ತು ಇದೇ ಸೌತ್ ಜೋನಿನ ನೀರಾವರಿ ಯೋಜನೆಗಳಿಗೆ ಎಷ್ಟು ಆಗಿದೆ ಎನ್ನುವ ವಿವರಗಳನ್ನೂ ಹೇಳಿದರು. ಇದನ್ನು ತ್ವರಿತವಾಗಿ ಕಾರ್ಯಗತವಾಗುವಂತೆ ಮಾಡಲು ಇದಕ್ಕೆ ಆರ್ವಿರ್ ಆಫ್ ಆಫೀಸರ್ಸ್‌ಗಳನ್ನು ನೇಮಕ ಮಾಡಿದ್ದಾರೆ ಮತ್ತು ಹೆಚ್ಚು ವೇಗದಿಂದ ಕೆಲಸವಾಗುವಂತೆ ಮಾಡುತ್ತಿದ್ದಾರೆ. ಸುಮಾರು 11 ಕೋಟಿಯವರೆಗೆ ನಾರ್ತ್ ಜೋನಿನಲ್ಲಿ ಖರ್ಚಾಗಿದೆ ಮತ್ತು ಇದುವರೆಗೆ ಸೌತ್ ಜೋನಿನಲ್ಲಿ ನಾಲ್ಕು, ನಾಲ್ಕುವರೆ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿದ್ದಾರೆ. ಇಷ್ಟು ಹಣ ಖರ್ಚಾಗದಿದ್ದರೆ ಈ ಯೋಜನೆಗಳು ಇಷ್ಟು ಬೇಗ ಆಗುತ್ತಿರಲಿಲ್ಲ. ಇದನ್ನು ನಾವೆಲ್ಲರೂ ಯೋಚನೆ ಮಾಡಬೇಕು. ಆದರೆ ಸೌತ್ ಜೋನಿನ ಬಗ್ಗೆ ಸರಕಾರ ಹಣ ಕೊಟ್ಟಿದ್ದರೂ ಇದರಲ್ಲಿ ಉಳಿತಾಯ ತೋರಿಸಿದ್ದಾರೆ. ಇದಕ್ಕೆ ಕಾರಣ ಇಲ್ಲಿರುವ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಮುಖ್ಯ ಮಂತ್ರಿಗಳು ಇದಕ್ಕೆ ಬೇಕಾಗುವ ಹಣವನ್ನು ಪೂರ್ತಿ ಕೊಟ್ಟಿರುವಾಗ ಇದಕ್ಕೆ ಸರಿಯಾದ ನಿರ್ದೇಶನ ಸರಕಾರದಿಂದ ಸಿಗಲಿಲ್ಲ ಎಂದು ಕಾಯುತ್ತಾ ಇಲ್ಲಿನ ಕೆಲಸಗಳು ನಿಧಾನವಾಗಲು ಕಾರಣವಾಯಿತು. ಸಕಾಲದಲ್ಲಿ ಅಧಿಕಾರಿಗಳು ಇಂತಹ ತ್ವರಿತವಾದ ಯೋಜನೆಗಳ ಬಗ್ಗೆ ತೀರ್ಮಾನ ಮಾಡುವುದರಲ್ಲಿ ತಡ ಮಾಡಿರುವುದಕ್ಕಾಗಿ ಇಲ್ಲಿ ಅಂತಹ ಯಾವ ಅಧಿಕಾರಿಗಳಿದ್ದರೋ ಅವರ ಮೇಲೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇಲ್ಲಿ ನಾರ್ತ್ ಜೋನು ಹಾಗೂ ಸೌತ್ ಜೋನು ಎಂದು ಕ್ರಿಯೇಟ್ ಮಾಡಿದುದರ ಉದ್ದೇಶವೇ ಇಲ್ಲಿ ತ್ವರಿತವಾಗಿ ಎಲ್ಲಾ ಕಾರ್ಯಕ್ರಮಗಳನ್ನೂ ಮಾಡಬೇಕು ಎಂಬುದಾಗಿತ್ತು. ಇದರಲ್ಲಿ ಅಧಿಕಾರಿಗಳು ನಿರ್ಲಕ್ಷ ತಾಳಬಾರದು ಮತ್ತು ಇದಕ್ಕೆ ಅವಕಾಶವನ್ನೂ ಕೊಡಬಾರದು. ಆದುದರಿಂದ ಮಾನ್ಯ ಸದಸ್ಯರು ಮುಖ್ಯ ಮಂತ್ರಿಗಳು ಒಂದು ರೀತಿಯ ಅಸಡ್ಡೆ ಮನೋಭಾವ ಹಳೇ ಮೈಸೂರಿನ ವಿಚಾರದಲ್ಲಿ ತಳೆದರು ಎಂದು ಹೇಳುವುದು ಸರಿಯಲ್ಲ. ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಸಲಹೆ ಮಾಡುವುದು, ಲೀಗಲೀ ಆರ್ ಇಲ್ಲೀಗಲೀ, ಇದಕ್ಕಾಗಿ ಮುಂದೆ ರಾಷ್ಟ್ರಪತಿಗಳ ಆಡಳಿತ ಬಂದರೂ ಚಿಂತೆಯಿಲ್ಲ, ಮತ್ತು ಮುಂದೆ ಅಸೆಂಬ್ಲಿ ಡಿಸಾಲ್ವ್ ಮಾಡಬೇಕೆಂದು ಹೇಳಿದರೂ ಪರವಾಗಿಲ್ಲ. ಯಾವುದಕ್ಕೂ ಹೆದರದೇ ನಮ್ಮ ಪ್ರಾಜೆಕ್ಟ್ ಕೆಲಸಗಳು ಎಲ್ಲೆಲ್ಲಿ ಆಗಬೇಕೋ ಅವನ್ನೆಲ್ಲಾ ಮಾಡಲು ಅದಕ್ಕೆ ಬೇಕಾದ ಟೆಕ್ನಿಕಲ್ ಅಪ್ರೂವಲ್ ಹಾಗೂ ಅಡ್ಮಿನಿಸ್ಟ್ರೇಟೀವ್ ಅಪ್ರೋವಲ್ ಇವುಗಳನ್ನು ಬೇಗನೆ ಆಗುವಂತೆ ಮಾಡಿ ಎಲ್ಲ ದೃಷ್ಟಿಯಿಂಲೂ ಇವನ್ನು ಪೂರೈಸಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಆಮೇಲೆ ಬೇಕಾದರೆ ಆರ್‌ಬಿಟ್ರೇಷನ್‌ಗೆ ಹೋಗೋಣ. ಈಗ ಯಾರ ಒತ್ತಾಯಕ್ಕೂ ಬೆಲೆ ಕೊಡದೇ ಎಲ್ಲ ಯೋಜನೆಗಳನ್ನು ಪೂರ್ತಿಯಾಗಿ ಮುಗಿಸಲೇಬೇಕು ಎಂದು ನಾನು ಸರಕಾರದಲ್ಲಿ ಮನವಿ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ವಿ. ಐತಾಳ (ಸುರತ್ಕಲ್).—ಮಾನ್ಯ ಅಧ್ಯಕ್ಷರೇ, 1970-71 ರ ಬಡ್ಜೆಟ್ಟನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಇಲ್ಲಿ ಹೇಳುತ್ತೇನೆ. ಈ ಬಡ್ಜೆಟ್ಟನ್ನು ಪರಿಶೀಲನೆ ಮಾಡುವಾಗ ಶ್ರೀಮತಿ ವಿನ್‌ಫ್ರೆಡ್ ಫರ್ನಾಂಡೀಸ್‌ರವರು ಹೇಳಿದಂತೆ ನಾನೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ನಮ್ಮ ಸರಕಾರ ಪೂರ್ಣ ಅಲಕ್ಷ ಮಾಡುತ್ತಿದೆ ಎಂದು ಬೇರೆ ಇಲ್ಲಿ ಹೇಳಬೇಕಾಗಿಲ್ಲ. ಈಗ್ಗೆ ನಾಲ್ಕೈದು ವರ್ಷಗಳಿಂದಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ರಸ್ತೆಗಳನ್ನೂ ದುರಸ್ತು ಮಾಡಿಲ್ಲ. ಅಧಿಕಾರಿಗಳಿಗೆ ಖರ್ಚು ಮಾಡಲು ಹಣ ಕೊಟ್ಟರೆ ಅವರು ಅದನ್ನು ವೆಚ್ಚ ಮಾಡದೇ ಬಂಗಲೆಗಳಲ್ಲಿ ಸುಖವಾಗಿ ಕುಳಿತುಕೊಂಡು ಯಾವ ಖರ್ಚನ್ನೂ ಇಲ್ಲಿ ಮಾಡಿಲ್ಲ ಎನ್ನುವುದು ಇದರಿಂದ ವ್ಯಕ್ತವಾಗುತ್ತದೆ. ಅಧಿಕಾರಿಗಳು ಇಲ್ಲಿ ವಿರೋಧ ಪಕ್ಷದವರು ಆರಿಸಿಬಂದಿದ್ದಾರೆ ಎಂದು ಇಲ್ಲಿ ಯಾವ ಕೆಲಸಗಳನ್ನೂ ಮಾಡಬಾರದು ಎಂದು ಹೇಳುತ್ತಿದ್ದಾರೇನು ? ನಮ್ಮ ರಾಜ್ಯದಲ್ಲಿರುವ ಎಲ್ಲ ಭಾಗಗಳಿಗಿಂತಲೂ ನಮ್ಮ ಪ್ರದೇಶ ಬಹಳ ಫಲವತ್ತಾದ ಭತ್ತ ಬೆಳೆಯುವ ಪ್ರದೇಶ. ಇಲ್ಲಿಗೆ ಸರಕಾರ ಯಾವ ಖರ್ಚನ್ನೂ ಮಾಡುತ್ತಿಲ್ಲ.

ಶ್ರೀ ಎಸ್.ವಿ. ಅಗ್ನಿಹೋತ್ರಿ.—ರೋಡುಗಳು ಬ್ರಿಡ್ಜುಗಳು ಮುಂತಾದ ಕೆಲಸಗಳಾಗಿಲ್ಲವೇ ?

ಶ್ರೀ ಪಿ. ವಿ. ಐತಾಳ.—ಮಾನ್ಯ ಸದಸ್ಯರಾದ ಅಗ್ನಿಹೋತ್ರಿಯವರು ಹೇಳುತ್ತಿರುವುದು ನ್ಯಾಷನಲ್ ಹೈವೇ ಹಾಗೂ ಹಾರ್ಬರು ವಿಚಾರ. ಇವುಗಳ ಬಗ್ಗೆ ಖರ್ಚು ಮಾಡಿರುವುದರಲ್ಲಿ ರಾಜ್ಯ ಸರಕಾರ ಒಂದು ಚಿಕ್ಕಾಸನ್ನೂ ವೆಚ್ಚ ಮಾಡಿಲ್ಲ. ಇವೆಲ್ಲಾ ಕೇಂದ್ರ ಸರಕಾರದಿಂದ ಬಂದ ಹಣ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಫರ್ಟಿಲೈಸರು ಫ್ಯಾಕ್ಟರಿ ಆಗಿದೆ.

ಶ್ರೀ ಪಿ. ವಿ. ಐತಾಳ.—ಫರ್ಟಿಲೈಸರು ಪ್ರಾಜೆಕ್ಟ್ ಪ್ರೈವೇಟು ಕಂಪನಿಯವರಿಂದ ಮಾಡುತ್ತಿರುವುದು. ಇದೂ ಕೂಡ ಸೆಂಟ್ರಲ್ ಗವರ್ನಮೆಂಟಿನಿಂದ ಸಹಾಯ ಪಡೆದು ಮಾಡುತ್ತಿದ್ದಾರೆ. ಮತ್ತೆ ಫರ್ಟಿಲೈಸರು ಫ್ಯಾಕ್ಟರಿಗಾಗಿ ಭೂಮಿ ಅಕ್ವೈರು ಮಾಡಿದ್ದಾರೆ ಇನ್ನು ಇದರ ಬಗ್ಗೆ ಸರಿಯಾಗಿ ಇನ್ನೂ ಯಾವ ಕಾರ್ಯಕ್ರಮವನ್ನು ಕೈಕೊಂಡಿಲ್ಲ. ಇಲ್ಲಿಗೆ ಹಾಕಿರುವ ಅಧಿಕಾರಿಗಳೆಲ್ಲಾ ಮನೆಗಳಿಲ್ಲದೆ ಎಲ್ಲರೂ ವರಾಂಡದಲ್ಲೇ ಮಲಗಿ ಕಷ್ಟಪಟ್ಟು ಓಡಾಡುತ್ತಿದ್ದಾರೆ. ಇದಕ್ಕೆ ರಾಜ್ಯಸರಕಾರ ಏನೂ ಖರ್ಚು ಮಾಡುತ್ತಿಲ್ಲ. ಸರಕಾರದವರು ಇಲ್ಲಿಗೆ ನೌಕರರುಗಳನ್ನು ನೇಮಿಸಿದರೂ ಅವರಿಗೆ ವಾಸ ಇರಲು ಮನೆಗಳನ್ನು ಕೊಡದೆ ಇನ್ನೂ ವರಾಂಡದಲ್ಲೇ ಇದ್ದಾರೆ. ಇಂತಹ ಪರಿಸ್ಥಿತಿ ಇಲ್ಲಿ ಬಂದಿದೆ. ನಮ್ಮ ಸರಕಾರದವರೇ ರೀಜನಲ್ ಇಂಬ್ಯಾಲೆನ್ಸ್ ಎನ್ನುವುದರ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ಇದರಲ್ಲಿ ಯಾವ ಯಾವ ಪ್ರದೇಶಗಳಲ್ಲಿ ಎಷ್ಟು ಖರ್ಚು ಮಾಡಿದೆ ಮತ್ತು ಎಷ್ಟು ಪ್ರಗತಿಯಾಗಿದೆ ಎನ್ನುವ ವಿವರಗಳೆಲ್ಲಾ ಇವೆ. ಇದರಲ್ಲಿ ನಾವು ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ನೋಡಿದರೆ ನಮ್ಮ ಮಂತ್ರಿಗಳಾದ ಶ್ರೀ ವಿಠಲದಾಸ ಶೆಟ್ಟಿಯವರ ಕ್ಷೇತ್ರ ಯಾವುದಿದೆಯೋ ಅಲ್ಲಿ ಮಾತ್ರ ಸರಕಾರ ಕೆಲಸಗಳನ್ನು ಮಾಡಿದೆ ಮತ್ತು ಶ್ರೀಮತಿ ಲೀಲಾವತಿ ರೇ ಇರುವ ಕ್ಷೇತ್ರದಲ್ಲಿ ಮಾತ್ರ ಸರಕಾರ ಕೆಲವು ಕೆಲಸಗಳನ್ನು ಮಾಡಿದೆ. ಆದರೆ ನಾನು ವಿರೋಧಿ ಪಕ್ಷದಲ್ಲಿದ್ದೇನೆ ಎಂದೋ ಏನೋ ನಮ್ಮ ಸರಕಾರ ಇಲ್ಲಿ ಯಾವ ಒಂದು ಸಣ್ಣ ಕೆಲಸವನ್ನೂ ಮಾಡಿಲ್ಲ. ಈ ರೀತಿ ಭೇದ ಭಾವನೆಯಿಂದ ಏಕೆ ಸರಕಾರ ಕೆಲಸ ಮಾಡಬೇಕು ಎಂದು ನಾನು ಶ್ರೀಮತಿ ಇಂದಿರಾ ಗಾಂಧಿಯವರಿಗೆ ಕಾಗದಗಳನ್ನು ಬರೆಯುತ್ತೇನೆ ಮತ್ತು ಇಂತಹ ನೂರಾರು ಕಾಗದ ಪತ್ರಗಳು ನನ್ನಲ್ಲಿವೆ. ಇವೆಲ್ಲವನ್ನೂ ಕೇಂದ್ರ ಸರಕಾರಕ್ಕೆ ಕಳುಹಿಸುತ್ತೇನೆ. ಪಿ.ಡಬ್ಲ್ಯೂ.ಡಿ. ಬಾಬಿನಲ್ಲೇ ಆಗಲಿ ಇತರ ಯಾವ ಬಾಬಿನಲ್ಲೇ ಆಗಲಿ ಯಾವ ಕೆಲಸಗಳೂ ಇಲ್ಲಿ ಆಗಿಲ್ಲ. ನಾನು ಈ ಹಿಂದೆ ಪಿ.ಡಬ್ಲ್ಯೂ.ಡಿ. ಮಂತ್ರಿಗಳಲ್ಲಿ ನಮ್ಮ ಏರಿಯಾದಲ್ಲಿ ಒಂದು ಸಣ್ಣ ಬ್ರಿಜ್ ಕಟ್ಟಬೇಕೆಂದು ಸುಮಾರು ಮೂರು ನಾಲ್ಕು ವರ್ಷಗಳಿಂದಲೂ ಕೇಳುತ್ತಿದ್ದರೂ ಇದನ್ನು ಬರುವ ವರ್ಷ ಮಾಡುತ್ತೇವೆ ಎಂದು ಬರೀ ಬಾಯಲ್ಲಿ ಹೇಳುತ್ತ ಬರುತ್ತಿದ್ದಾರೆಯೇ ವಿನಾ ಕಾರ್ಯಗತಃ ಯಾವ ಕೆಲಸವನ್ನೂ ಮಾಡಿಲ್ಲ. 1967 ರಲ್ಲಿ ಹೇಳಿದೆ, 1968 ರಲ್ಲಿ ಮಾಡುತ್ತೇವೆ ಎಂದರು. 1968 ರಲ್ಲಿ ನೋಡಿದರೆ 1969 ರಲ್ಲಿ ಮಾಡುತ್ತೇವೆ ಎಂದು ಹೇಳುತ್ತಾರೆ. ಇನ್ನೂ ಇಲ್ಲಿನ ಸಣ್ಣ ಕೆಲಸ ಆಗಲಿಲ್ಲ. ನನಲ್ಲಿ ಇದರ ಬಗ್ಗೆ ಕಾಗದ ಪತ್ರಗಳ ಒಂದು ದೊಡ್ಡ ಬಂಡಲ್‌ಗಳೇ ಇವೆ. ಇಲ್ಲಿ ಒಂದು ಬ್ರಿಜ್ ಆಗದೆ ಮಳೆ ಬಂದಾಗ ಹಳ್ಳದಲ್ಲಿ ನೀರು ತುಂಬಿ ಶಾಲೆಗೆ ಹೋಗುವ ಮಕ್ಕಳಿಗೆ ತೊಂದರೆಯಾಗುತ್ತದೆ ಎಂದು ಕಾಗದ ಬರೆದೆ ಮತ್ತು ಪ್ರವಾಸ ಬಂದಾಗ ಮಂತ್ರಿಗಳಿಗೂ ತೋರಿಸಿದ್ದೆ. ಮೂರು ಪಂಚವಾರ್ಷಿಕ ಯೋಜನೆಗಳಾದರೂ ಇನ್ನೂ ಈ ಬ್ರಿಡ್ಜ್ ಕಟ್ಟಲಿಕ್ಕೆ ಆಗಲಿಲ್ಲ. ಇದರಿಂದಾಗಿ ಈಚೆಗೆ ಈ ಹಳ್ಳದಲ್ಲಿ ಎರಡು ಮೂರು ಶಾಲೆ ಮಕ್ಕಳು ಸತ್ತವು. ಇದಕ್ಕೆ ಇನ್ನೂ ಏಕೆ ಸರಕಾರ ಗಮನ ಕೊಡುತ್ತಿಲ್ಲ ಎಂದು ನಾನು ಇಲ್ಲಿ ಕೇಳುತ್ತೇನೆ.

ಇನ್ನು ನಮ್ಮ ಅರಣ್ಯ ಮಂತ್ರಿಗಳಾದ ಶ್ರೀ ಆಲೂರು ಹನುಮಂತಪ್ಪನವರು ಕಳ್ಳರನ್ನು ರಕ್ಷಣೆ ಮಾಡುವ ಮಂತ್ರಿಗಳಾಗಿದ್ದಾರೆ. ನಮ್ಮ ಭಾಗದ ಅರಣ್ಯದಲ್ಲಿ ಖಾಸಗಿಯವರ ಬಳಿ ಸುಮಾರು ಮುನ್ನೂರು ರೂಪಾಯಿ ಬೆಲೆ ಬಾಳುವ ಗಂಧದ ಮರ ಸಿಕ್ಕಿತ್ತು. ಇದರ ಮೇಲೆ ಇಲ್ಲಿರುವ ಫಾರೆಸ್ಟು ರೇಂಜ್ ಅಧಿಕಾರಿಗಳು ಇದನ್ನು ಕೊಂಡುಕೊಳ್ಳಲು ಏಳೆಂಟುಜನ ಮುಂದೆ ಬಂದು ಹೆಚ್ಚು ಹಣ ಕೊಡಲಿದ್ದಾರೆ, ಇದನ್ನು ಹರಾಜು ಮಾಡಲಿ ಎಂದು ಸೂಚನೆ ಮಾಡಿದ್ದರು. ಆದರೆ ಇಲ್ಲಿರುವ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು ಒಬ್ಬರು ಮುಸ್ಲಿಂ ಆಗಿದ್ದರು ಮತ್ತು ಇದನ್ನು 300 ರೂಪಾಯಿಗಳಿಗೆ ಕೊಳ್ಳಲು ಇದ್ದವರೂ ಅವರಿಗೆ ಬೇಕಾದವರು ಎಂದು ಇದರಲ್ಲಿ ನೂರು ರೂಪಾಯಿಗಳನ್ನು ಸರಕಾರಕ್ಕೆ ಕಟ್ಟಿದರೆ ಸಾಕು ಮರವನ್ನು ಅವರಿಗೆ ಬಿಡಬಹುದು ಎಂದು ಆರ್ಡರು ಮಾಡಿದರು. ನಾನು ಇದರ ಬಗ್ಗೆ ಮೂರು ಸಾರಿ ಪತ್ರ ಬರೆದೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದೆ. ಅವರಿಂದ ಅಕ್‌ನಾಲೆಡ್ಜ್‌ಮೆಂಟ್ ಬಂತು, ಅರಣ್ಯ ಮಂತ್ರಿಗಳಾದ ಶ್ರೀ ಆಲೂರು ಹನುಮಂತಪ್ಪನವರಿಗೂ ಬರೆದಿದ್ದೇನೆ. ಇದುವರೆಗೆ ನನ್ನ ಪತ್ರಕ್ಕೆ ಜವಾಬೇ ಇಲ್ಲ.

I have got 101 charges against the Veerendra Patil's Ministry. ಶ್ರೀಮಾನ್ ಆಲೂರು ಹನುಮಂತಪ್ಪನವರ ಬಳಿಗೆ ಒಂದೇ ಒಂದು ಸಾರಿ ಪತ್ರ ಬರೆದು ಕೇಳಿದೆ ಮತ್ತು ಇದರ ಬಗ್ಗೆ ಇವರೇನು ಮಾಡುತ್ತಿದ್ದಾರೆ ಎನ್ನುವುದಕ್ಕೆ ನನ್ನ ಬಳಿ ಎಲ್ಲಾ ರಿಕಾರ್ಡ್‌ಗಳೂ ಇವೆ. ಯಾವ ಅಧಿಕಾರಿಯಿಂದ ಇಲ್ಲಿರುವ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು 300 ರೂಪಾಯಿ ಬೆಲೆ ಗಂಧದ ಮರಗಳನ್ನು ನೂರು ರೂಪಾಯಿಗೆ ಕೊಡಬಹುದು ಎಂದು ಆರ್ಡರು ಮಾಡಿದರು ? ಇದಕ್ಕೆ ನೂರು ರೂಪಾಯಿಗಳ ಬ್ಯಾಂಕ್ ಡ್ರಾಫ್ಟನ್ನು ಕೂಡ ತೆಗೆದುಕೊಂಡಿದ್ದಾರೆ. ಇದನ್ನು ಪಬ್ಲಿಕ್ ಆಕ್ಷನ್ ಮಾಡಬೇಕೆಂದು ಜನ ಬಂದು ಕೇಳುತ್ತಿದ್ದಾರೆ. ಹಾಗಿದ್ದರೂ ಅವರಿಗೆ ಅವಕಾಶ ಕೊಡಲಿಲ್ಲ

(ಶ್ರೀ ಪಿ. ವಿ. ಐತಾಳ)

ಮತ್ತು ಸರಕಾರಕ್ಕೆ ಬರುವ ವರಮಾನ ನಷ್ಟವಾಯಿತು. ಇವರುಗಳು ಏನೇನು ಮಾಡಿದ್ದಾರೆ ಎನ್ನುವ ಪಟ್ಟಿಗಳೆಲ್ಲಾ ನನ್ನಲ್ಲಿದೆ. ಸಮಯ ಬಂದಾಗ ಅವನ್ನೆಲ್ಲಾ ರಿಲೀಸು ಮಾಡುತ್ತೇನೆ. ಶ್ರೀಮಾನ್ ಆಲೂರು ಹನುಮಂತಪ್ಪನವರು ಅರಣ್ಯ ಇಲಾಖೆಯಲ್ಲಿ ಸೇರಿಕೊಂಡು ಬರೀ ಕಳ್ಳರ ಹಿತಸಂರಕ್ಷಣೆ ಮಾಡುತ್ತಿದ್ದಾರೆಯೇ ವಿನ ಇವರಿಂದೇನೂ ಆಗುವುದಿಲ್ಲ. ಆಗುವ ಕೆಲಸವೂ ಆಗುತ್ತಿಲ್ಲ.

Sri ALUR HANUMANTHAPPA.—I will answer the Hon. Member at the appropriate time.

Sri P. V. AITHAL.—I will show the records as to what action you have taken. ಇದೇ ರೀತಿ ಪಣಂಬೂರಿನ ಕೋಆಪರೇಟಿವ್ ಸೊಸೈಟಿಯಲ್ಲಿ ಒಬ್ಬ ಮನುಷ್ಯ 18 ಸಾವಿರ ರೂಪಾಯಿಗಳನ್ನು ತಿಂದುಹಾಕಿದ್ದಾನೆ. ಈ ವಿಚಾರದಲ್ಲಿ ನಾನು ಮತ್ತು ಶ್ರೀ ರತ್ನಕುಮಾರ್‌ಕಟ್ಟೀಮಾರ್ ಅವರು ಕೋಆಪರೇಟಿವ್ ಇಲಾಖೆಯ ಮಂತ್ರಿಗಳಿಗೆ ಎರಡು ಕಾಗದ ವನ್ನು ಬರೆದರೂ ಕೂಡ ಆ ಮನುಷ್ಯನ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ. ಮತ್ತು ನಾವು ಬರೆದ ಕಾಗದ ತಲುಪಿದ ಬಗ್ಗೆ ಒಂದು ಉತ್ತರವನ್ನು ಸಹ ಕೊಡಲಿಲ್ಲ. ಮುಖ್ಯಮಂತ್ರಿಗಳಿಗೆ ಕಾಗದ ಬರೆ ದರೆ ಅವರು ಕೂಡಲೇ ಉತ್ತರ ಕೊಡುತ್ತಾರೆ. ಆದರೆ ನನಗೆ ಈ ಇಬ್ಬರು ಮಂತ್ರಿಗಳಿಂದ ಉತ್ತರ ಬರಲಿಲ್ಲ. ಅವರಿಗೆ ಬರೆದ ಕಾಗದಕ್ಕೆ ಉತ್ತರ ಕೊಡುವಂತಹ ಯೋಗ್ಯತೆಯೂ ಇಲ್ಲವೆಂದು ಕಾಣುತ್ತದೆ.

Sri ALUR HANUMANTHAPPA.—Sir, I rise to a Point of Order. The hon. Member has got every right to remark about the drawbacks, if there are any, in any department. We are here to make a note of it and clarify the position. He just now raised a point that the District Forest Officer, Mangalore, has sold Rs. 300 worth of timber for Rs. 100. I have noted it down. I have already stated that I will answer him at the appropriate time. In the meanwhile he went on saying ಯೋಗ್ಯತೆ ಇಲ್ಲ. I request the hon. Member to use some other words instead of making such remarks. I will verify what answers have been furnished to him, whether his letter has been acknowledged, whether we have received the report from the Chief Conservator of Forests and I will have to clarify the position at the appropriate time.

ಶ್ರೀ ಬಿ. ಭಾಸ್ಕರಶೆಟ್ಟಿ.—ಎರಡು ಮೂರು ಕಾಗದ ಬರೆದರೂ ಕೂಡ ಮಾನ್ಯ ಮಂತ್ರಿಗಳು ಉತ್ತರ ಕೊಡದಿದ್ದರೆ ಇನ್ನು ಯಾವ ರೀತಿ ಹೇಳಬೇಕು ?

ಶ್ರೀ ಪಿ. ವಿ. ಐತಾಳ.—ಮುಖ್ಯಮಂತ್ರಿಗಳಿಂದ ಉತ್ತರ ಪಡೆಯುವ ಯೋಗ್ಯತೆ ನನಗೆ ಇದ್ದರೂ ಕೂಡ ಈ ಇಬ್ಬರು ಮಂತ್ರಿಗಳಿಂದ ಉತ್ತರ ಪಡೆಯುವ ಯೋಗ್ಯತೆ ನನಗೆ ಇನ್ನೂ ಬಂದಿಲ್ಲ. ಪಣಂಬೂರಿನ ಕೋಆಪರೇಟಿವ್ ಸೊಸೈಟಿಯಲ್ಲಿ ಒಬ್ಬ ಮನುಷ್ಯ 18 ಸಾವಿರ ರೂಪಾಯಿಗಳನ್ನು ತಿಂದುಹಾಕಿದ್ದಾನೆಂದು ಒಂದು ಕಾಗದವನ್ನು ಮಾನ್ಯಮಂತ್ರಿಗಳಾದ ಶ್ರೀ ನಾಡಗೌಡರಿಗೆ ಬರೆದರೆ ಅವರು ನನಗೆ ಉತ್ತರವನ್ನೇ ಕೊಡಲಿಲ್ಲ. ಮತ್ತು ಸಂಬಂಧಪಟ್ಟ ಮನುಷ್ಯನ ಮೇಲೆ ಲೀಗಲ್ ಆಕ್ಷನ್ನಾಗಲೀ, ಕ್ರಿಮಿನಲ್ ಆಕ್ಷನ್ನಾಗಲೀ ಇದುವರಗೆ ತೆಗೆದುಕೊಂಡಿಲ್ಲ. ಮೊನ್ನೆ ನಮ್ಮ ಕ್ಷೇತ್ರಕ್ಕೆ ಮುಖ್ಯಮಂತ್ರಿಗಳು ಬಂದಿದ್ದಾಗ್ಗೆ ಹಣ ತಿಂದುಹಾಕಿರುವ ಮನುಷ್ಯನೇ ಅವರಿಗೆ ಸುಸ್ವಾಗತ ಮಾಡಿದ್ದಾನೆ. ಇದರಿಂದ ಸರ್ಕಾರಕ್ಕೆ ಯಾರೂ ಬೇಕಾದ್ದಾರೆ ಮತ್ತು ಸರ್ಕಾರದವರು ಯಾರಿಗೆ ಮಾನ್ಯತೆ ಕೊಡುತ್ತಾರೆಂಬುದನ್ನು ತಿಳಿದುಕೊಳ್ಳಬಹುದು. ಮೇಲಿನಿಂದ ಟ್ರೈಟ್ ಆಗಿರಬಹುದೆಂದು ಕಾಣುತ್ತದೆ, ಈ ಹಣ ತಿಂದ ಮನುಷ್ಯನ ಮೇಲೆ ಶ್ರೀ ನಾಡಗೌಡರು ಯಾವ ಕ್ರಮವನ್ನೂ ತೆಗೆದು ಕೊಳ್ಳಲಿಲ್ಲ. ಇವತ್ತಿನದಿವಸ ಕೋಆಪರೇಟಿವ್ ಸೊಸೈಟಿಗಳಲ್ಲಿ ಹೆಗ್ಗಣಗಳು ಸೇರಿಕೊಂಡು ಲಕ್ಷಾಂತರ ರೂಪಾಯಿಗಳನ್ನು ತಿಂದುಹಾಕುತ್ತಿವೆ. ಇಂತಹವರು ಹಣವನ್ನು ತಿಂದುಹಾಕುತ್ತಿದ್ದಾ ರೆಂದು ನಾವು ಹೇಳಿದರೂ ಕೂಡ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಳ್ಳದಿದ್ದರೆ ನಾವು ತಾನೆ ಏನು ಮಾಡುವುದು ? ಬಡ್ಜೆಟ್ ಇದ್ದೂ ಕೂಡ ಏನು ಪ್ರಯೋಜನ ? ಮೊನ್ನೆ ನನ್ನ ಕ್ಷೇತ್ರದಲ್ಲಿ ಉಪಮಂತ್ರಿಗಳಾದ ಶ್ರೀ ಮಗಾವಿ ಅವರು ಮತ್ತು ಶ್ರೀಮತಿ ಲೀಲಾವತಿರೈ ಅವರು

ಒಂದು ಜೀಪ್‌ನಲ್ಲಿ ಕುಳಿತುಕೊಂಡು ಚೆರಾರ್‌ಕಟ್ಟೆ ಬಳಿ ಹೋಗುತ್ತಿದ್ದಾಗ ಮಂತ್ರಿಗಳು ಏನು, ಈ ರಸ್ತೆ ಇಷ್ಟೊಂದು ಕೆಟ್ಟು ಹೋಗಿದೆ, ಈ ಮಾರ್ಗದುರಸ್ಥಿಯಾಗದಿರುವುದನ್ನು ನೋಡಿದರೆ ಆಶ್ಚರ್ಯ ವಾಗುತ್ತದೆ ಎಂದು ಹೇಳಿದಾಗ ಶ್ರೀಮತಿ ಲೀಲಾವತಿ ರೈ ಅವರು ಇದು ಐತಾಳ್ ಅವರ ಕ್ಷೇತ್ರ ಎಂದು ಹೇಳಿದರಂತೆ. ಮೂರು ವರ್ಷದಿಂದ ನನ್ನ ಕ್ಷೇತ್ರದಲ್ಲಿ ಯಾವ ಒಂದು ದುರಸ್ತಿ ಕೆಲಸವನ್ನು ಮಾಡಿಸಿಲ್ಲ. ಯಾವ ಒಂದು ಸೇತುವೆಯನ್ನು ಸಹ ಕಟ್ಟಿಸಿಲ್ಲ.

ಶ್ರೀ ಬಸವರಾಜ ಮಾಗಾವಿ (ಲೋಕೋಪಯೋಗಿ ಶಾಖೆಯ ಉಪಮಂತ್ರಿಗಳು).—ಅವರು ತಪ್ಪು ಹೇಳುತ್ತಿದ್ದಾರೆ.

ಶ್ರೀ ಪಿ. ವಿ. ಐತಾಳ.—ನಾನು ಸಾಕ್ಷಿ ಕೊಡುತ್ತೇನೆ.

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು ತಪ್ಪು ಹೇಳುತ್ತಿದ್ದಾರೆ. ನನ್ನ ಕಾರಿನಲ್ಲಿ ಶ್ರೀಮತಿ ಲೀಲಾವತಿರೈ ಅವರು ಇರಲಿಲ್ಲ.

ಶ್ರೀ ಪಿ. ವಿ. ಐತಾಳ.—ಹೋಗಲೀ, ತಾವು ಚರಾಲ್‌ಕಟ್ಟೆ ನೋಡಿದ್ದೀರೋ ಇಲ್ಲವೋ? ಅಲ್ಲಿರುವ ರಸ್ತೆಗಳು ಒಂದೂ ಕೂಡ ಚೆನ್ನಾಗಿಲ್ಲವೆಂದು ತಮಗೆ ತಿಳಿದೂ ಕೂಡ ಅಲ್ಲಿ ಯಾವ ದುರಸ್ತಿ ಕೆಲಸವನ್ನು ಮಾಡಿಸುವುದಕ್ಕೆ ತಾವು ಮನಸ್ಸು ಮಾಡಲಿಲ್ಲ. ಅಲ್ಲಿ ಸ್ಕೂಲಿಗೆ ಹೋಗುವ ಹುಡುಗರಿಗೆ ತೊಂದರೆಯಾಗುತ್ತದೆ, ಒಂದು ಸೇತುವೆ ಕಟ್ಟಿಸಿಕೊಡಿ ಎಂದು ನಾನು ಅನೇಕ ಸಲ ಕೇಳಿ ಕೊಂಡಿದ್ದರೂ ಕೂಡ ಕಟ್ಟಿಸಲಿಲ್ಲ. ನಾನು ಒಂದು ಪುಸ್ತಕ ಬರೆಯುತ್ತೇನೆ. ವೀರೇಂದ್ರಪಾಟೀಲರ ಮೇಲಿನ 101 ಅಪಾದನೆಗಳು ಎಂಬ ಹೆಸರಿನ ಮೇಲೆ ಒಂದು ಪುಸ್ತಕ ಬರೆದು ಅದನ್ನು ಶ್ರೀಮತಿ ಇಂದಿರಾಗಾಂಧಿಯವರಿಗೆ ಕಳುಹಿಸುತ್ತೇನೆ. ತಮ್ಮ ಪಾರ್ಟಿಯವರ ಕ್ಷೇತ್ರದಲ್ಲಿ ಕೆಲಸಗಳನ್ನು ಮಾಡಿಸುತ್ತೀರಿ, ಆದರೆ ನನ್ನ ಕ್ಷೇತ್ರದಲ್ಲಿ ಒಂದು ಸೇತುವೆಯನ್ನು ಸಹ ಕಟ್ಟಿಸಲಿಲ್ಲ.

ಇನ್ನು ಸೇಲ್ಸ್ ಟ್ಯಾಕ್ಸ್ ಬಗ್ಗೆ ಹೇಳುತ್ತೇನೆ. ಇದರ ಬಗ್ಗೆ ಶ್ರೀ ಎಸ್. ಭೂತಲಿಂಗಂ ಅವರ ಅಧ್ಯಕ್ಷತೆಯಲ್ಲಿ ನೇಮಕ ಮಾಡಿದ್ದ ಸಮಿತಿಯವರ ವರದಿಯಿಂದ ವ್ಯಾಪಾರಸ್ಥರ ತೊಂದರೆಹೋಗಿ ಅವರ ಉತ್ಪತ್ತಿ ಜಾಸ್ತಿಯಾಗುವುದಕ್ಕೆ ಅವಕಾಶವಾಗುತ್ತದೆಂದು ನಾನು ಆಶೆ ಇಟ್ಟುಕೊಂಡಿದ್ದೆ. ಅವರ ವರದಿ ನೋಡಿದ ಮೇಲೆ ನನ್ನ ಆಶೆ ನಿರಾಶದಾಯಕವಾಗಿದೆ. ಇವರ ವರದಿಯನ್ನು ಸರ್ಕಾರ ದವರು ಅಲ್ಪಸ್ವಲ್ಪ ಮಾರ್ಪಾಡುಗಳೊಂದಿಗೆ ಒಪ್ಪಿಕೊಂಡಿದ್ದೇವೆಂದು ಹೇಳಿದ್ದಾರೆ. ಚೆಕ್‌ಪೋಸ್ಟ್ ವಿಚಾರದಲ್ಲಿ ಅವರು ತಮ್ಮ ವರದಿಯಲ್ಲಿ ಈ ರೀತಿ ಹೇಳಿದ್ದಾರೆ :

> " They say the introduction of check-posts is a very complicated matter and they would consider it later."

ನಾನು ಪ್ರತಿವರ್ಷವೂ ಕೂಡ ಇದೇ ಬಡ್ಜೆಟ್ ಭಾಷಣದ ಸಮಯದಲ್ಲಿ ಹುಬ್ಬಳ್ಳಿ ಮತ್ತು ಧಾರವಾಡದ ಹತ್ತಿರ ಚೆಕ್‌ಪೋಸ್ಟ್‌ಗಳನ್ನು ಇಡಬೇಕೆಂದು ಹೇಳುತ್ತಲೇ ಇದ್ದೇನೆ. ಆದರೆ ಸರ್ಕಾರದವರು ಗಮನ ಕೊಟ್ಟಿಲ್ಲ. ಇದರಲ್ಲಿಯೂ ಕೂಡ ರಾಜಕೀಯ ಇದೆಯೆಂದು ಕಾಣುತ್ತದೆ. ಈ ಭಾಗದಿಂದ ಬಂದಿರುವ ಮಂತ್ರಿಗಳಿಗೆ ತೊಂದರೆಯಾಗುತ್ತದೆಂದು ಚೆಕ್‌ಪೋಸ್ಟ್‌ಗಳನ್ನು ಇಟ್ಟಿಲ್ಲ. ಹುಬ್ಬಳ್ಳಿ ಮತ್ತು ಧಾರವಾಡದ ಬಳಿ ನೂರಾರು ರಸ್ತೆಗಳು ಬಂದು ಸೇರುವುದರಿಂದ ಅಲ್ಲಿ ಚೆಕ್ ಪೋಸ್ಟ್ ಇಟ್ಟರೆ ಸರ್ಕಾರಕ್ಕೆ ಸುಮಾರು 10 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ವರಮಾನ ಬರುತ್ತದೆ. ಇವತ್ತು ತೆರಿಗೆ ಬಗ್ಗೆ ಮಾಡಿರುವ ಮಾರ್ಪಾಡುಗಳಿಂದ ಸರ್ಕಾರಕ್ಕೆ ಬರುವ ಹೆಚ್ಚಿನ ವರಮಾನ ಎಂದರೆ ಕೇವಲ ಎರಡು ಕೋಟಿ ರೂಪಾಯಿಗಳು. ಅದೇ ಮುಂಬೈಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದ ಕೆಲವು ಭಾಗಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಇಟ್ಟರೆ 10 ಕೋಟಿ ರೂಪಾಯಿಗಳ ವರಮಾನ ಬರುತ್ತದೆಂಬ ಗ್ಯಾರಂಟಿ ಕೊಡುತ್ತೇನೆ. ಬೇಕಾದರೆ ಅಂಕಿಅಂಶಗಳ ಮೂಲಕ ವಿವರಗಳನ್ನು ಕೊಡುತ್ತೇನೆ. ಇವತ್ತು ದಾವಣಗೆರೆ ಮತ್ತು ಹೊಸಪೇಟೆ ಬಳಿ ಒಂದೊಂದ ಚೆಕ್‌ಪೋಸ್ಟ್‌ಗಳನ್ನು ಇಟಿದ್ದಾರೆ. ಬೇರೆ ಆದಾಯ ಬರುವ ಕಡೆ ಇಟ್ಟಿಲ್ಲ. ಇನ್ನು ಕೇವಲ ಎರಡು ವರ್ಷ ಅಧಿಕಾರದಲ್ಲಿರುತ್ತೇವೆಂದುಕೊಂಡು ಆ ಭಾಗಗಳಲ್ಲಿ ಚೆಕ್‌ಪೋಸ್ಟ್ ಇಟ್ಟಿಲ್ಲವೆಂದು ಕಾಣುತ್ತದೆ. ಅಥವಾ ಈ ಸರ್ಕಾರ ಇರುವವರೆಗೂ ಆ ಭಾಗಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಇಡುವುದಿಲ್ಲವೆಂದು ಕಾಣುತ್ತದೆ. ಈಗ ವಿನಾಯಿತಿಗಾಗಿ ವಹಿವಾಟಿನ ಕನಿಷ್ಠ ಮಿತಿಯನ್ನು 10,000 ರೂಪಾಯಿಗಳಿಂದ 25 ಸಾವಿರ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ ಎಂದು ಹೇಳಿದ್ದಾರೆ. ಈ ರೀತಿ ಹೆಚ್ಚಿಸಿರುವುದಕ್ಕಾಗಿ ಭೂತಲಿಂಗಂ ಸಮಿತಿಯವರನ್ನು ಅಭಿನಂದಿಸಬೇಕಾಗಿದೆ. ಹೆಚ್ಚಿಸಿದ್ದರೂ ಕೂಡ ಒಂದು ತೊಂದರೆ ಮಾಡಿದ್ದಾರೆ. ಏನೆಂದರೆ 10,000 ರೂಪಾಯಿಗಳಿಗೂ ಮೇಲ್ಪಟ್ಟ ವಹಿವಾಟಿನ ವ್ಯಾಪಾರಿಗಳು ರಿಜಿಸ್ಟರ್ ಮಾಡಿಸಬೇಕೆಂದು ಹೇಳಿದ್ದಾರೆ. ವ್ಯಾಪಾರಸ್ಥರ ಒಂದು

(ಶ್ರೀ ಪಿ. ವಿ. ಐತಾಳ)

ಕೈಯನ್ನು ತಮ್ಮ ಗಾಣನೊಳಗೇ ಇಟ್ಟುಕೊಂಡಿದ್ದಾರೆ. ಒಬ್ಬ ವ್ಯಾಪಾರಿ ಒಂದು ಸಲ ರಿಜಿಸ್ಟರ್ ಮಾಡಿಸಿಬಿಟ್ಟರೆ ಆತನ ಕೈಗೆ ಬೇಡಿ ಹಾಕಿದಂತೆ. ಇಲ್ಲಿ ರಿಯಾಯಿತಿ ತೋರಿಸಿದ್ದೇವೆಂದು ಹೇಳಿರುವುದು ಕನಸಿನ ಮಂಡಿಗೆಯಂತಿದೆ. ಈ ರಿಯಾಯಿತಿ ತೋರಿಸಿರುವುದರಿಂದ ವ್ಯಾಪಾರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಒಂದು ಸಲ ರಿಜಿಸ್ಟರ್ ಮಾಡಿಸಿದಮೇಲೆ ತೆರಿಗೆ ಅಧಿಕಾರಿಗಳು ಆತನ ಮೇಲೆ ನಾನಾ ರೀತಿಯ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. Under the Act once a dealer is registered there are other liabilities, He must maintain the accounts and if the accounts are not acceptable he is liable to be assessed for his best judgment. ಈ ತೊಂದರೆಯನ್ನು ತಪ್ಪಿಸಲು ಏನು ಮಾಡಬೇಕೆಂದರೆ 10 ಸಾವಿರದಿಂದ 25 ಸಾವಿರ ರೂಪಾಯಿನೊಳಗೆ ಟರ್ನ್ ಓವರ್ ಇರುವವರಿಗೆ ಬೆಸ್ಟ್ ಆಫ್ ಜಡ್ಜ್‌ಮೆಂಟ್ ಇರಬೇಕು ಎಂದು ಸೇರಿಸಿದರೆ ಅಂತಹವರಿಗೆ ಪ್ರೊಟೆಕ್ಷನ್ ಸಿಗುತ್ತದೆ. ಇಲ್ಲದಿದ್ದರೆ ಪ್ರೊಟೆಕ್ಷನ್ ಸಿಗುವುದು ಕಷ್ಟವಾಗುತ್ತದೆ.

ಉಪಾಧ್ಯಕ್ಷರು.—ತಾವು ಸೇಲ್ಸ್‌ಟ್ಯಾಕ್ಸ್ ಡಿಮ್ಯಾಂಡ್ ಬಂದಾಗ ಇದನ್ನೆಲ್ಲಾ ವಿವರವಾಗಿ ಹೇಳಬಹುದು.

ಶ್ರೀ ಪಿ. ವಿ. ಐತಾಳ.—ಆಗಬಹುದು.

Mr. DEPUTY SPEAKER.—The House will now rise to meet again at 3-00 P.M.

The House rose for Lunch at One of the Clock and reassembled at Fifteen Minutes past Three of the Clock.

[MR. SPEAKER in the Chair]

ಶ್ರೀ ಕೆ. ಸಿಂಗಾರಿಗೌಡ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ಆಯವ್ಯಯ ಪಟ್ಟಿಯನು ಸ್ವಾಗತ ಮಾಡುತ್ತಾ ಒಂದೆರಡು ಮಾತುಗಳನ್ನು ಹೇಳಲು ಆಶಿಸಿದ್ದೇನೆ. ಮಾನ್ಯ ಸಚಿವರು ಆಯವ್ಯಯ ಪತ್ರವನ್ನು ಮಂಡಿಸುತ್ತ ಒಂದು ಮಾತನ್ನು ಹೇಳಿದ್ದಾರೆ. ವಿವಿಧ ಪಂಗಡಗಳು ನಮ್ಮ ಸಮಾಜದಲ್ಲಿವೆ ಮತ್ತು ಅವುಗಳು ಭಿನ್ನ ಭಿನ್ನ ವೃತ್ತಿಯನ್ನು ಅವಲಂಬಿಸಿಕೊಂಡಿವೆ ಎಂದು. ಎಲ್ಲರೂ ಮುಂದಕ್ಕೆ ಬರತಕ್ಕ ಅವಕಾಶವನ್ನು ಈ ವರ್ಷದ ಆಯವ್ಯಯ ಪತ್ರದಲ್ಲಿ ತೋರಿಸಿ ಎಲ್ಲರಿಗೂ ಕೂಡ ಸರಿಸಮಾನವಾದ ಒಂದು ಬಜೆಟ್ಟನ್ನು ಈ ವರ್ಷ ಇಟ್ಟಿದ್ದಾರೆ. ಇದನ್ನು ನಾವೆಲ್ಲರೂ ಸ್ವಾಗತ ಮಾಡುವಂತಹ ರೀತಿಯಲ್ಲಿ ಮಾಡಿದ್ದಾರೆ. ನಮ್ಮ ಅರ್ಥಿಕ ವ್ಯವಸ್ಥೆಯಲ್ಲಿ ಕೃಷಿ ಪ್ರಧಾನವಾದುದೆಂಬುದನ್ನು ನಾವು ಮರೆಯುವ ಹಾಗೆ ಇಲ್ಲ. ಸುಮಾರು 100ಕ್ಕೆ 75 ಮಂದಿ ಜನರು ಈ ವ್ಯವಸಾಯವನ್ನು ಅವಲಂಬಿಸಿಕೊಂಡಿದ್ದಾರೆ. ಈ ಸಮಯದಲ್ಲಿ ಸರ್ಕಾರದವರು ಇದಕ್ಕೆ ಬಹಳ ಆದ್ಯತೆಯನ್ನು ಕೊಟ್ಟು, ಇನ್ನೂ ಹೆಚ್ಚಿನ ಕೆಲಸಗಳಾಗುವಂತಹ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಇಂಥದ್ದರಲ್ಲಿ ಒಂದು ನೀರಾವರಿ ಯೋಜನೆ ಈ ದಿವಸ ಇದಕ್ಕೆ ಒದಗಿಸಿರ ತಕ್ಕ ಹಣ 16 ಕೋಟಿ ರೂಪಾಯಿಗಳು. ಈ ಲೆಕ್ಕವನ್ನು ತೆಗೆದುಕೊಂಡರೆ, ಸ್ಪಿಲ್ ಓವರ್ ಕೆಲಸಗಳು ಏನಿವೆ, ಅದಕ್ಕೇನೆ ಸಾಧಾರಣ 170 ಕೋಟಿ ರೂಪಾಯಿವರೆಗೆ ಹಣ ಬೇಕಾಗುತ್ತದೆ. ಕೆಲವು ಎಸ್ಟಿಮೇಟುಗಳಲ್ಲಿ ಕೊನೆಯ ಪಕ್ಷ ವರ್ಷಕ್ಕೆ 10 ಪರ್‌ಸೆಂಟಾದರೂ ಪುನರ್‌ವಿಮರ್ಶೆ ಮಾಡಿದರೂ ಕೂಡ ಈ ಹಣ ಏನೂ ಸಾಲುವುದಿಲ್ಲ. ಇದರ ಬಗ್ಗೆ ವಿಪುಲವಾದ ಚರ್ಚೆ ಇಲ್ಲಿ ನಡೆದಿದೆ. ಅದರ ಬಗ್ಗೆ ಹೆಚ್ಚು ಹೇಳುವುದಿಲ್ಲ. ನಮಗೆ ಹೆಚ್ಚು ಹೆಚ್ಚು ನೀರಾವರಿಬೇಕು ಎನ್ನುವಾಗ ಜಟಿಲವಾದ ಸಮಸ್ಯೆ ಉದ್ಭವಿಸುತ್ತದೆ. ಇದರಲ್ಲಿರುವ ತೊಂದರೆಗಳನ್ನು ತಪ್ಪಿಸಿ ಮುಂದೆ ಹೋಗತಕ್ಕ ಕಾರ್ಯವನ್ನು ನಾವು ಮಾಡಬೇಕು, ಮತ್ತು ಅದಕ್ಕೆ ತಕ್ಕ ಗಮನವನ್ನು ಕೊಡಬೇಕು. ಪ್ರಧಾನವಾಗಿ ಈ ದಿವಸ ದುಡ್ಡನ್ನು ಹಾಕಿದ ತಕ್ಷಣ ಪ್ರತಿಫಲ ಕೊಡುವುದು ಸಣ್ಣ ನೀರಾವರಿ ಕಾಮಗಾರಿಗಳು. ಇದಕ್ಕೆ ಸರ್ಕಾರದವರು ಹೆಚ್ಚಿಗೆ ಪ್ರಾಶಸ್ತ್ಯವನ್ನು ಕೊಡಬೇಕೆಂದು

ಕೇಳುತ್ತಿದ್ದೇವೆ. ಈ ದಿವಸ ಆಯವ್ಯಯ ಪಟ್ಟಿಯನ್ನು ನೋಡಿದರೆ ಆ ಬಾಬಿಗೆ 3.80 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಪ್ಲಾನ್ ಪೀರಿಯಡ್‌ನಲ್ಲಿ ಸುಮಾರು 17 ಕೋಟಿ ರೂಪಾಯಿಗಳನ್ನು ಒದಗಿಸಿದ್ದರೂ 5 ವರ್ಷಗಳ ಅವಧಿಯಲ್ಲಿ ಮೂರುವರೆ ಕೋಟಿ ರೂಪಾಯಿಗಳನ್ನು ಖರ್ಚುಮಾಡಬಹುದು. ಆದ್ದರಿಂದ ಸ್ಪಿಲ್ಲೋವರ್ ವರ್ಕ್ಸ್‌ನ್ನು ಜಾಗ್ರತೆ ಮಾಡಬೇಕೆಂದು ನಾನು ಹೇಳುತ್ತೇನೆ. ಸುಮಾರು 17 ಕೋಟಿ ರೂಪಾಯಿಗಳನ್ನು ಅರ್ಧಂಬರ್ಧವಾಗಿ ಉಳಿದಿರುವ ಕೆಲಸಗಳಿಗೇ ಉಪಯೋಗಿಸಬೇಕಾಗಿದೆ. ಈ ದಿವಸ ಸರ್ಕಾರದವರು ಇತರ ಬಾಬುಗಳಿಗೆ ಎಷ್ಟೋ ಹಣವನ್ನು ಖರ್ಚುಮಾಡಿದ್ದರೂ ಕೂಡ ರೈತರ ಅಭಿವೃದ್ಧಿ ಕೆಲಸಕಾರ್ಯಗಳಾಗಿರುವ ಸಣ್ಣ ನೀರಾವರಿ ಯೋಜನೆಯ ಕೆಲಸಗಳಿಗೆ ಪ್ರಾಶಸ್ತ್ಯ ಕೊಡಬೇಕೆಂದು ನಾನು ಮನವಿಮಾಡುತ್ತೇನೆ. ಸಣ್ಣ ನೀರಾವರಿ ಕೆಲಸಗಳಿಗೆ ಪ್ರಾಶಸ್ತ್ಯವನ್ನು ಕೊಡುವಾಗ ನಾನು ಎರಡು ಮೂರು ಸಲಹೆಗಳನ್ನು ಹೇಳಲಿಚ್ಛಿಸುತ್ತೇನೆ. ಈ ದಿವಸ ಸುಖೀರಾಜ್ಯ ನಿರ್ಮಾಣ ಮಾಡುವಾಗ ಇಂಥಾದ್ದಕ್ಕೆ ಸ್ವಲ್ಪ ದುಡ್ಡನ್ನು ಹೆಚ್ಚಿಗೆ ತೆಗೆದುಕೊಳ್ಳಬೇಕು. ಈ ದೃಷ್ಟಿಯಿಂದ ಈಗ ಸೀಲಿಂಗ್ ಲಿಮಿಟ್ಟನ್ನು ಹೆಚ್ಚಿಸಿ 1,500 ರೂಪಾಯಿಗಳವರೆಗೆ ಖರ್ಚುಮಾಡುವುದಕ್ಕೆ ಮಂಜೂರಾತಿ ಕೊಡಬೇಕೆಂದು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಆದ್ದರಿಂದ ಸೀಲಿಂಗ್ ಲಿಮಿಟ್ಟನ್ನು ರದ್ದುಪಡಿಸುವ ವ್ಯವಸ್ಥೆಯನ್ನು ಸರ್ಕಾರದವರು ತೆಗೆದುಕೊಂಡರೆ ಹೆಚ್ಚಿಗೆ ಸಣ್ಣ ನೀರಾವರಿ ಯೋಜನೆಗಳಿಗೆ ಪ್ರಾಶಸ್ತ್ಯವನ್ನು ಕೊಡುವುದಕ್ಕೆ ಸಾಧ್ಯ.

ಎರಡನೆಯದಾಗಿ ರೂರಲ್ ಮ್ಯಾನ್ ಪವರ್ ಪ್ರಾಜೆಕ್ಟ್ ಎಂದು ಕೇಂದ್ರಸರ್ಕಾರದವರ ಒಂದು ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಈ ಯೋಜನೆಯ ಪ್ರಕಾರ ಕೆಲವು ತಾಲ್ಲೂಕುಗಳಲ್ಲಿ ಮೈಸೂರು ದೇಶದಲ್ಲಿ ಸಾಮೂಹಿಕ ಬಾವಿಗಳನ್ನು ತೆಗೆಯುವುದಕ್ಕೆ ಹಿಂದೆ ಏರ್ಪಾಡು ಮಾಡಿದ್ದರು. ಇದರಿಂದ ಬಹಳ ಉತ್ತೇಜನ ಸಿಗುತ್ತಿತ್ತು. ಹರಿದು ಹಂಚಿಹೋಗಿರುವ ಜಮೀನುಗಳಲ್ಲಿ 20—30 ಜನಗಳು ಸೇರಿ ಒಂದು ದೊಡ್ಡ ಬಾವಿಯನ್ನು ತೋಡಿಕೊಡುವ ಪ್ರಯತ್ನ ಇತ್ತು. ಆದ್ದರಿಂದ ಈ ಯೋಜನೆಯನ್ನೂ ಸಣ್ಣ ನೀರಾವರಿ ಯೋಜನೆಗಳಲ್ಲಿ ಸೇರಿಸಿಕೊಂಡರೆ ಮುಂದಿನ ಜನಗಳಿಗೆ ಉಪಯೋಗವಾಗುತ್ತದೆಂದು ನಾನು ಆಶಿಸಿದ್ದೇನೆ.

ಇನ್ನು ಸಹಕಾರ ಸಂಘಗಳ ಬಗ್ಗೆ ಈ ಸಭೆಯಲ್ಲಿ ಆಗಾಗ್ಗೆ ಸುಮಾರು 3 ವರ್ಷಗಳಿಂದಲೂ ಸತತವಾಗಿ ಟೀಕೆಗಳು ಬಹಳ ಜಾಸ್ತಿಯಾಗುತ್ತಿವೆ. ಸಮಾಜ ವ್ಯವಸ್ಥೆಯನ್ನು ಸರಿಯಾದ ರೂಪದಲ್ಲಿ ತರಬೇಕೆಂದು ಹೇಳಿದರೆ ಬಹುಶಃ ಸಹಕಾರ ಸಂಘದ ತಳಹದಿಯಮೇಲೆ ನಿರ್ಮಾಣಮಾಡುವ ಯೋಜನೆಯನ್ನು ಕಲ್ಪಿಸಿಕೊಡದೇ ಹೋದರೆ ಸುಖೀರಾಜ್ಯದ ಕನಸು ನನಸಾಗುತ್ತದೆಂದು ನಾನು ತಿಳಿದಿದ್ದೇನೆ. ಈ ಒಂದು ಒಡಕು ಶಬ್ದ ಈ ಸಭೆಯಲ್ಲಿ ಯಾವಾಗಲೂ ಆಡುತ್ತಿದ್ದಾರೆ ಇದು ಜನರ ಮನಸ್ಸಿನ ಮೇಲೆ ಒಂದು ಪರಿಣಾಮವನ್ನುಂಟುಮಾಡುವುದರಿಂದ ಅವರಲ್ಲಿ ಕೆಟ್ಟ ವಾತಾವರಣವನ್ನುಂಟುಮಾಡಬಾರದು. ಅದನ್ನು ಸರಿಪಡಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕು. ಈ ಯೋಜನೆಯನ್ನು ಟೀಕೆಮಾಡುವುದು ಬೇಡ.

ಶ್ರೀ ಬಿ. ದೊಡ್ಡಬೋರೇಗೌಡ.—ಈ ಅವ್ಯವಸ್ಥೆ ಎಷ್ಟು ದಿವಸಗಳಲ್ಲಿ ನಿವಾರಣೆಯಾಗುತ್ತದೆ? ಇದು ಅಲ್ಲಿನ ರಾಜಕೀಯ ಮುಖಂಡರ ಕೆಲಸವಲ್ಲವೇ?

ಶ್ರೀ ಕೆ. ಸಿಂಗಾರಿಗೌಡ.—ನಾವು ನೀವು ಎಲ್ಲ ಸೇರಿ ಆ ಕೆಲಸ ಮಾಡಿದಾಗ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸಹಕಾರ ಸಂಘಗಳಲ್ಲಿ ರಾಜಕಾರಣಿಗಳು ಸೇರಿಕೊಂಡರೆ ಈ ರೀತಿಯಾಗಿ ಆಗುತ್ತದಲ್ಲವೇ?

ಶ್ರೀ ಕೆ. ಸಿಂಗಾರಿಗೌಡ.—ಅದು ಮಾನ್ಯ ಸದಸ್ಯರ ಅಭಿಪ್ರಾಯ. ಒಂದು ಮಾತು. ನಿರುದ್ಯೋಗ ಸಮಸ್ಯೆ ಇದ್ದೇ ಇರುತ್ತದೆ. ಅದು ಪೂರ್ತಿಯಾಗಿ ಹೋಗುತ್ತದೆಂದು ನಾನು ಈಗಾಗಲೇ ಹೇಳುವುದಿಲ್ಲ. ಸಹಕಾರ ಯೋಜನೆಯಲ್ಲಿ ಸ್ವಲ್ಪಮಟ್ಟಿಗೆ ಬದಲಾಯಿಸಬೇಕೆಂದು ನಾನು ಪ್ರಾರ್ಥನೆಮಾಡುತ್ತೇನೆ.

ಇನ್ನು ಸರ್ವಿಸ್ ಕೋ-ಆಪರೇಟಿವ್ ಸಂಘಗಳು ತಮ್ಮ ಕಾಲಿನ ಮೇಲೆಯೇ ನಿಂತುಕೊಳ್ಳುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಇದನ್ನು ತಪ್ಪಿಸಿ. ಮೂರು ನಾಲ್ಕು ಪಂಚಾಯಿತಿಗಳು ಏನಾದರೂ ಒಂದು ದೊಡ್ಡ ಸಂಘವನ್ನು ಮಾಡಿಕೊಂಡರೆ ಬಹುಶಃ ಇವುಗಳ ಆಡಳಿತ ಬಹಳ ಚೆನ್ನಾಗಿ ನಡೆಯುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ಪರಿಶೀಲನೆಮಾಡಬೇಕು.

ಮೂರನೆಯದಾಗಿ, ಸಾಲದ ಸೌಲಭ್ಯ. ನಮ್ಮಲ್ಲಿ ಬಹಳ ಜನ ಬಡವರು ಇದ್ದಾರೆ. ಅವರಿಗೆ ಸಾಕಷ್ಟು ತಿಳುವಳಿಕೆ ಇಲ್ಲ. ಸಾಲದ ಸೌಲಭ್ಯ ಕೊಡುವ ಹವ್ಯಾಸದ ನಾನಾ ಏಜೆನ್ಸಿಗಳ

(ಶ್ರೀ ಕೆ. ಸಿಂಗಾರಿಗೌಡ)

ಮೂಲಕ ಇದು ಈ ದೇಶದಲ್ಲಿ ಈಗ ನಡೆಯುತ್ತಿದೆ. ನಮ್ಮಲ್ಲಿ ಪ್ರಾಮಾಣಿಕತೆ ಕಡಿಮೆಯಾಗಿ ಇರುವುದರಿಂದ ರೈತ ತೆಗೆದುಕೊಂಡ ದುಡ್ಡು ಅಪವ್ಯಯ ಮಾಡಿಕೊಳ್ಳದೇ ಇರುವ ರೀತಿಯಲ್ಲಿ ನೋಡಿಕೊಳ್ಳುವುದು ಸಂಘಗಳ ಕಾರ್ತವ್ಯ. ಆದ್ದರಿಂದ ಒಂದೇ ಏಜೆನ್ಸಿ ಮೂಲಕ ರೈತರಿಗೆ ಸಾಲದ ಸೌಲಭ್ಯವನ್ನು ಕೊಡುವುದು ಒಳ್ಳೆಯದು. ಈ ರೀತಿಯಾಗಿ ಇದನ್ನು ರೂಪಿಸಿಕೊಂಡಲ್ಲಿ ಬಹುಶಃ ಟೀಕೆ ಟಿಪ್ಪಣಿಗಳಿಗೆ ಅವಕಾಶ ಇರುವುದಿಲ್ಲ. ಈಗ ಮಳೆ ಬೆಳೆ ಸರಿಯಾಗಿ ಆಗದೆ ರೈತರಿಗೆ ಸರ್ಕಾರದಲ್ಲಿ ತೆಗೆದುಕೊಂಡು ಸಾಲವನ್ನು ತೀರಿಸುವ ವ್ಯವಸ್ಥೆಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ರಿಜರ್ವ್ ಬ್ಯಾಂಕಿನಿಂದ ನೇರವಾಗಿ ಅಪೆಕ್ಸ್ ಬ್ಯಾಂಕ್ ಪಡೆದುಕೊಂಡು ಸಾಲವನ್ನು ಸಹಕಾರ ಸಂಘಗಳ ಮೂಲಕ ರೈತರಿಗೆ ಕೊಡುವುದರಲ್ಲಿ ಬಹಳ ಕಷ್ಟ ಪರಿಸ್ಥಿತಿ ಇದ್ದಹಾಗೆ ಇದೆ. ಅದು ಈಗ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಿಂದ ಕೊಡುವ ಷಾರ್ಟ ಟರ್ಮ, ಮೀಡಿಯಂ ಟರ್ಮ ಲೋನು ಗಳಿಗೆ ಅನ್ವಯಿಸುತ್ತದೆ. ಆದ್ದರಿಂದ ಸರ್ಕಾರದವರು ಇಂತಿಂಥ ತಾಲ್ಲೂಕಿನಲ್ಲಿ ಅಭಾವ ಪರಿಸ್ಥಿತಿ ಇದೆಯೆಂದು ಯಾವಾಗ ಸಾರುತ್ತಾರೋ ಅಂತಹ ಕಡೆಗಳಲ್ಲಿ ರೈತರು ಮರುಪಾವತಿ ಮಾಡುವ ಹಣವನ್ನು ಅಪೆಕ್ಸ್ ಬ್ಯಾಂಕಿಗೆ ಕೊಡಬೇಕು. ಈ ರೀತಿ ಸರ್ಕಾರದ ಮಟ್ಟದಲ್ಲಿ ಒಂದು ನಿಧಿಯನ್ನು ಇಡಬೇಕೆಂದು ಹೇಳುತ್ತೇನೆ. ಅಭಿವೃದ್ಧಿಕೆಲಸಗಳಿಗೆ ಪ್ರೋತ್ಸಾಹ ಈಗ ಕುಂಠಿತ ಮಾಡಿದರೀತಿಯಲ್ಲಿ ಅದರಲ್ಲಿಯೂ ಜನಗಳಿಗೆ ಜಿಗುಪ್ಸೆ ಉಂಟಾಗದ ರೀತಿಯಲ್ಲಿ ಏರ್ಪಾಡುಮಾಡಿ ಸಕಾಲದಲ್ಲ ಅವರಿಗೆ ನೆರವು ಬರಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಇನ್ನು ಆಡಿಟ್ ವ್ಯವಸ್ಥೆ ವಿಷಯ. ಎಲ್ಲಿಯವರೆಗೆ ಆಡಿಟ್ ವ್ಯವಸ್ಥೆಯನ್ನು ಸಹಕಾರ ಸಂಘ ಗಳಲ್ಲಿ ಇಟ್ಟುಕೊಂಡಿರುತ್ತಾರೋ ಅಲ್ಲಿಯವರೆಗೆ ಅದರ ಆಡಳಿತ ಸರಿಹೋಗುವುದಿಲ್ಲ. ಸಹಕಾರ ಸಂಘಗಳವರೇನೋ ಅಡಿಟರ್ ಅವರಿಗೆ ಅವರ ಫೀಸನ್ನು ಕೊಡುತ್ತಾರೆ. ಆಡಿಟ್ ಮಾಡುವುದನ್ನು ಆಡಿಟ್ ಇಲಾಖೆಗೆ ವರ್ಗಾಯಿಸಿದರೆ ಅಲ್ಲಿ ಏನೇನು ನ್ಯೂನತೆಗಳು, ಟೀಕೆ ಟಿಪ್ಪಣಿಗಳು ಬರುತ್ತವೋ ಅವನ್ನು ಜಾಗ್ರತೆಯಾಗಿ ನಿವಾರಣೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಇನ್ನು ರಸ್ತೆ ಸಾರಿಗೆ ಸಂಪರ್ಕಗಳ ವಿಚಾರ. ಇದನ್ನು ಜಾಸ್ತಿ ಮಾಡಬೇಕೆಂಬುದು ಸರ್ಕಾರದ ಆಶಯ. ಇದರ ಬಗ್ಗೆ ಸುಮಾರು 8—10 ವರ್ಷಗಳ ಕೆಳಗೆ R. C. ರಸ್ತೆಗಳನ್ನು ನಿರ್ಮಾಣ ಮಾಡಿದ್ದರು ಆದರೆ ಅದನ್ನು ತಾಲ್ಲೂಕ್‌ಬೋರ್ಡಿಗೆ ವಹಿಸಿರತಕ್ಕ ನಿರೂಪಣೆಯನ್ನು ಈಗ ಹೊರಡಿಸಿದ್ದಾರೆ. ನನ್ನ ಕ್ಷೇತ್ರದಲ್ಲಿ 173 ಮೈಲಿಗಳವರೆಗೂ ಆರ್. ಸಿ. ರಸ್ತೆಯನ್ನು ಮಾಡಿದ್ದಾರೆ. ಆದರೆ ತಾಲ್ಲೂಕ್ ಅಭಿವೃದ್ಧಿ ಸಂಸ್ಥೆಯಲ್ಲಿ ದುಡ್ಡು ಇಲ್ಲವೆಂದು ಗೊತ್ತಿದ್ದರೂ ಈ ಸಂಸ್ಥೆಗಳಿಗೆ ವಹಿಸುವುದು ಉಚಿತವಲ್ಲ. ಇವರು ಕ್ರಮವನ್ನು ತೋರಿಸುವ ವ್ಯವಸ್ಥೆ ಏನಿದೆಯೋ ಅದು ಸರಿಯಾದುದಲ್ಲ. ಅವರ ವಶದಲ್ಲಿರುವ ಸಾರಿಗೆ ಸಂಪರ್ಕವನ್ನು ಸುರಕ್ಷಿತವಾಗಿ ತಾಲ್ಲೂಕ್ ಬೋರ್ಡಿನವರು ಇಟ್ಟುಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ತಾಲ್ಲೂಕ್ ಬೋರ್ಡ್ ಆದಾಯ ಬಹಳ ಕಡಿಮೆಯಾಗುತ್ತಿದೆ. ಆದ್ದರಿಂದ ಈ ಆರ್. ಸಿ. ರಸ್ತೆಗಳನ್ನು ಅವರಿಗೆ ಸೇರಿಸಿದರೆ ಬಹಳ ಕಷ್ಟವಾಗುತ್ತದೆ. ಸರ್ಕಾರ ಒಂದು ದೃಷ್ಟಿಯಿಂದ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳಬೇಕೆಂದು ಇರುವುದು ನನಗೆ ಅರ್ಥವಾಗುತ್ತಾ ಇಲ್ಲ. ಇದನ್ನು ಸರ್ಕಾರದವರು ಪುನರ್ಪರಿಶೀಲನೆಮಾಡಬೇಕು. ಈ ಸಭೆಯ ಮುಂದೆ ಸ್ಥಳೀಯ ಸಂಸ್ಥೆಗಳ ಬಿಲ್ ಬರುತ್ತದೆಂದು ಬೇರೆ ಹೇಳುತ್ತಿದ್ದಾರೆ. ಅದುವರೆಗೂ ಇದನ್ನು ತಡೆ ಹಿಡಿಯಬೇಕೆಂದು ಹೇಳುತ್ತೇನೆ.

ಇನ್ನು ಕುಡಿಯುವ ನೀರಿನ ಭಾವಿಗಳ ಬಗ್ಗೆ ಸರ್ಕಾರದವರು ಆದೇಶ ಕೊಟ್ಟಿದ್ದಾರೆ ಒಂದು ಭಾವಿ ಇರುವಕಡೆ ಅಲ್ಲಿ ಮತ್ತೊಂದು ಬಾವಿಯನ್ನು ತೆಗೆಯುವ ಅವಕಾಶವಿಲ್ಲ. ಕಾರಣಾಂತರದಿಂದ ಬಾವಿಯನ್ನು ಆಳಗೊಳಿಸುವ ವ್ಯವಸ್ಥೆ ಇಲ್ಲ. ಕುಡಿಯುವ ನೀರಿನ ಭಾವಿ ಇದ್ದರೂ, ನೀರು ಇಲ್ಲದಿದ್ದಲ್ಲಿ ಎರಡನೇ ಅಥವಾ ಮೂರನೆ ಬಾವಿ ತೆಗೆಯುವ ವ್ಯವಸ್ಥೆಗೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಗಾಂಧಿ ಶತಾಬ್ದಿ ವರ್ಷದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಪ್ರಾಶಸ್ತ್ಯ ಕೊಡಬೇಕೆಂದು ಹೇಳಿರುವ ಪ್ರಕಾರ ಎಲ್ಲಾ ಗ್ರಾಮಗಳಲ್ಲಿಯೂ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಅದರ ಬಗ್ಗೆ ಈ ದಿವಸ ಏನು ಕಾರ್ಯಕ್ರಮವನ್ನ ಹಾಕಿಕೊಂಡಿದ್ದೀರೋ ಅದೇ ರೀತಿಯಲ್ಲಿ ಪ್ರತಿವರ್ಷವೂ ದೊಡ್ಡ ದೊಡ್ಡ ಗ್ರಾಮಗಳಿಗೂ ಈ ಯೋಜನೆಯನ್ನು ಅಳವಡಿಸಬೇಕೆಂದೂ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ಎಲ್ಲಾ ಕಡೆಗಳಿಗೂ ಒದಗಿಸಿಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಈ ದಿವಸ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳಬೇಕು ಎನ್ನುವ ಉದ್ದೇಶದಿಂದ ಕೆಲವೊಂದು ತೆರಿಗೆ ಹಾಕಬೇಕು ಎಂದು ಹಣಕಾಸಿನ ಸಚಿವರು ತಿಳಿಸಿದ್ದಾರೆ. ಪಂಪು ಸೆಟ್ಟುಗಳ ಮೇಲೆ ತೆರಿಗೆ ಹಾಕಬೇಕೆಂದು ಹೋಗುತ್ತಿದ್ದಾರೆ. ಸ್ವಲ್ಪ ದಿವಸಗಳವರೆಗೆ ಅವುಗಳಿಗೆ ತೆರಿಗೆ ಹಾಕುವುದನ್ನು ನಿಲ್ಲಿಸಿದರೆ ರೈತರು ಅದನ್ನು ಹೆಚ್ಚು ಹೆಚ್ಚು ಉಪಯೋಗಪಡಿಸಿಕೊಂಡು ತಮ್ಮ ವರಮಾನ ಹೆಚ್ಚಿಸಿಕೊಂಡು ಜೀವನ ಕಲ್ಪಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಪಂಪುಸೆಟ್ಟುಗಳ ಮೇಲೆ ತೆರಿಗೆ ಹಾಕುವುದನ್ನು ಪುನರ್‌ವಿಮರ್ಶಿಸಬೇಕೆಂದು ಸರಕಾರದವರನ್ನು ಪ್ರಾರ್ಥನೆ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

3-30 P.M.

† ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಸ್ವಾಮಿ, 1970-71ನೇ ಸಾಲಿನ ಆಯವ್ಯಯ ಪತ್ರವನ್ನು ನಾವು ವಿವೇಚಿಸುವಾಗ ಸಾಹಿತ್ಯದ ಜೋಡಣೆ ಮತ್ತು ಅಂಕಿ ಅಂಶಗಳ ಜೋಡಣೆ ಅದರ ಜೊತೆಗೆ ಸುಮಾರು ಹಿಂದಿನ ಹತ್ತು ವರ್ಷಗಳ ಮತ್ತು ಮುಂದಿನ ಹತ್ತು ವರ್ಷಗಳ ಮಧ್ಯೆ ಉಯ್ಯಾಲೆಯಲ್ಲಿ ಅರ್ಥಿಕ ಮಂತ್ರಿಗಳು ತೂಗಾಡಿದ್ದಾರೆ. ಅವರು ಮುಂದುವರಿಸುತ್ತಾ 15 ಕೋಟಿ ರೂಪಾಯಿಗಳ ಖೋತ ಆಗುತ್ತದೆ ಎಂದು ಐದನೇ ಆಯವ್ಯಯ ಪಟ್ಟಿಯನ್ನು ಇಡುತ್ತಿದ್ದೇನೆ ಎಂದು ಹೇಳಿದ್ದಾರೆ. ಆದರೆ ಮುಂಚೆ 1966-67ರಲ್ಲಿ ಇಟ್ಟಿರತಕ್ಕ ಆಯವ್ಯಯದಲ್ಲಿ ನಾಲ್ಕು ಕೋಟಿ 96 ಲಕ್ಷ ನಿವ್ವಳ ಆದಾಯ ತೋರಿಸಿದ್ದರೂ ಇಂತಹುದರಲ್ಲಿ ಕೊನೆಗೆ 25 ಕೋಟಿ 41 ಲಕ್ಷ ರೂಪಾಯಿ ಆದಾಯ ಜಾಸ್ತಿ ಆಗಿ ಉಳಿಯಿತು. ಅಂತಹ ಸಂದರ್ಭ ಇರುವಾಗ 1970-71ರಲ್ಲಿ ಸುಮಾರು 15 ಕೋಟಿ 48 ಲಕ್ಷ ನಷ್ಟದ ಆಯವ್ಯಯವನ್ನು ನಮ್ಮ ಮುಂದೆ ಇಟ್ಟಿದ್ದಾರೆ.

ಶ್ರೀ ಎಂ. ನಾಗಪ್ಪ (ರಾಯಚೂರು).—ಪಿ.ಡಬ್ಲ್ಯು.ಡಿ. ಬಾಬಿಗೆ ಅಮೌಂಟ್ ಕೊಡುತ್ತಾರೆ. ಆದರೆ ಕಾನಫಿಡೆನ್‌ಷಿಯಲ್ಲಾಗಿ ಖರ್ಚುಮಾಡಬೇಡಿ ಎಂದು ಕಾನ್‌ಫಿಡೆನ್‌ಷಿಯಲ್ ಆರ್ಡರ್ ಕೊಟ್ಟು ದುಡ್ಡು ಉಳಿಸಿ ಹೆಚ್ಚಿನ ಆದಾಯ ತೋರಿಸುತ್ತಾರೆ.

ಶ್ರೀ ವಿ. ಎಲ್. ಶಿವಪ್ಪ.—ಇದರಲ್ಲಿ ತಾತ್ಪೂರ್ತಿಕವಾಗಿ ಕೇಂದ್ರದಿಂದ ಬರತಕ್ಕ 20 ಕೋಟಿ ರೂಪಾಯಿ ಸೇರಿದೆ ಎಂದು ಹೇಳುತ್ತಾರೆ. ಇದು ಬರುತ್ತದೆಯೋ ಇಲ್ಲವೋ ಎಂದು ಸಂಶಯದಿಂದ ತೋರಿಸಿದ ಹಾಗೆ ಕಾಣುತ್ತದೆ. ಕೇಂದ್ರಕ್ಕೂ ಇವರಿಗೂ ಇರುವ ಸಂಬಂಧದ ದೆಸೆಯಿಂದ ಅವರಿಗೆ ತಾತ್ಪೂರ್ತಿಕವಾಗಿ ಪಡೆಯತಕ್ಕ ಸಂಶಯ ಇರುವ ಹಾಗೆ ಕಾಣುತ್ತದೆ. ಆದ್ದರಿಂದ ಈ 20 ಕೋಟಿ ನಷ್ಟವಾಗುವ ಸಂದರ್ಭ ಇದೆ. ಈಗ 12-13 ವರ್ಷಗಳಿಂದ ನಿಜಲಿಂಗಪ್ಪನವರ ಆಡಳಿತಕ್ಕೆ ಸಿಕ್ಕಿದ ಮೇಲೆ, ಅವರ ಕರ್ಣಾಟಕ ಟ್ರೇಡರ್ಸ್ ಅಂಥ ಕಂಪನಿಗಳು ಕೆಲಸ ಶುರುಮಾಡಿದ ಮೇಲೆ, ದೇಶದ ಹಣ ಸೋರಿಹೋಗುವ ಸನ್ನಿವೇಶ ಬಂದಾಗ ಹೆಚ್ಚು ಖೋತಾ ಅಗುತ್ತದೆ ಎನ್ನುವುದು ಅಲ್ಲ. ದೊಡ್ಡ ನೀರಾವರಿ, ಮೈನರ್ ಇರಿಗೇಷನ್, ಪಬ್ಲಿಕ್ ವರ್ಕ್ಸ್ ಪ್ರಾಜೆಕ್ಟ್ಸ್ ಬಿಲ್ಡಿಂಗ್ಸ್ ಇವುಗಳಿಗೆ ಹಣವನ್ನು ಒದಗಿಸಿ 20-25 ಕೋಟಿ ರೂಪಾಯಿಗಳ ಕೆಲಸ ಮಾಡುವಾಗ ಅವರಿಗೆ ಬಹುಭಾಗದ ಹಣ ಹೋಗುತ್ತದೆ ಎಂದು ಕಾಣುತ್ತದೆ. ಅವರಿಗೆ ಕೊಟ್ಟಿರತಕ್ಕ ಕಂಟ್ರಾಕ್ಟುಗಳಲ್ಲಿ ನಷ್ಟವಾಗಿರತಕ್ಕದ್ದು ನೋಡಿದ್ದೇವೆ. ಕೆಲಸಗಳು ಅನ್ಯಾಯವಾಗಿರುವುದನ್ನು ನೋಡಿದ್ದೇವೆ. ರಾಜಕೀಯ ಸಂತ್ರಸ್ತರಿಗೆ ಸಹಾಯ ಮಾಡಬೇಕು, ನಿಜಲಿಂಗಪ್ಪನವರ ಸಂತತಿಯವರಿಗೆ ಸಹಾಯ ಮಾಡಬೇಕು ಅಂತ ಇಚ್ಛೆ ಇದ್ದ ಪಕ್ಷದಲ್ಲಿ, ಅವರಿಗೆ ಇಷ್ಟು ಕೋಟಿ ರೂಪಾಯಿಗಳು ಅಂತ ಕೊಟ್ಟುಬಿಡಿ. ಆಮೇಲೆ ದೇಶದ ಕೆಲಸ ಕಾರ್ಯಗಳನ್ನು ವ್ಯವಸ್ಥಿತ ರೀತಿಯಲ್ಲಿ ಮಾಡಿಸಿದರೆ ಆಗ ದೇಶದ ಸಂಪತ್ತು ಉಳಿಯುತ್ತದೆ. ಅದು ಬಿಟ್ಟು ಅಂತಹವರಿಗೆ ಕೆಲಸಕಾರ್ಯಗಳನ್ನು ಕೊಟ್ಟು ದೇಶದ ಹಣವನ್ನು ಖರ್ಚುಮಾಡಿದರೆ ಅದರಿಂದ ಅನ್ಯಾಯವಾಗುತ್ತದೆ. ಒಟ್ಟಿಗೆ ತೆಗೆದುಕೊಂಡರೆ ಬಂಡವಾಳ ಮತ್ತು ರೆವಿನ್ಯೂ ಲೆಕ್ಕಗಳ ಒಟ್ಟು ಸ್ಥಿತಿ ಮುಂದೆಯೂ ಕೊರತೆಯನ್ನೇ ತೋರಿಸುತ್ತದೆ. ಪರಿಸ್ಥಿತಿಯನ್ನು ಇದಿರಿಸಲು ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸುವುದಕ್ಕಾಗಿ ಭೀಮಸಾಹಸ ಆಗತ್ಯವಾಗುತ್ತದೆ. ಯಾರು ಭೀಮ ಸಾಹಸ ಮಾಡುತ್ತಾರೆ? ಶಾಪಗ್ರಸ್ತ ಶಿಶುವಾದ ವೀರೇಂದ್ರ ಪಾಟೀಲರ ನಾಯಕತ್ವದಲ್ಲಿ ಎಂದೆಂದೂ ಭೀಮ ಸಾಹಸ ಮಾಡುವುದಕ್ಕೆ ಸಾಧ್ಯವಿಲ್ಲ. ಅವರಲ್ಲಿ ಭೀಮಸಾಹಸ ಕಾಣುವುದಿಲ್ಲ. ಸಮತಾವಾದದ ನಿರೂಪಣೆ ಮಾಡತಕ್ಕ ಸಂಸ್ಥೆ ಒಂದೇ ಭೀಮ ಸಾಹಸ ಮಾಡಬೇಕು. ಆದರೆ ಭೀಮ ಸಾಹಸ ಮಾಡುವ ಶಕ್ತಿಯನ್ನು ನಾವು ಪಡೆದಿಲ್ಲ. ಭೀಮ ಸಾಹಸ ಮಾಡತಕ್ಕ ಶಕ್ತಿ ಯಾರಿಗೂ ಇಲ್ಲ, ಅದನ್ನು ಪಡೆದುಕೊಳ್ಳತಕ್ಕಂಥ ಅವಕಾಶ ಕಲ್ಪಿಸಿಕೊಡಬೇಕಾಗಿದೆ. ಆದುದರಿಂದ ನಮ್ಮ ಆರ್ಥಿಕ ಮಂತ್ರಿ

(ಶ್ರೀ ವಿ. ಎಲ್. ಶಿವಪ್ಪ)

ಗಳಿಗೆ ದೇಶದ ದೃಷ್ಟಿ ಗೊತ್ತಿಲ್ಲ. ದೇಶದಲ್ಲಿ ಬಡತನ ಏನಾಗಿದೆ, ಎಲ್ಲಿ ಬಡತನ ಜಾಸ್ತಿ ಇದೆ, ಅದನ್ನು ವಿಮರ್ಶೆ ಮಾಡುವುದಕ್ಕೆ ಹೋಗಿಲ್ಲ. ಗ್ರಾಮಗಳ ಕಡೆ ದೃಷ್ಟಿ ಹೆಚ್ಚಾದ ಹಾಗೆ ಕಾಣುತ್ತದೆ. ಗ್ರಾಮಾಂತರದಲ್ಲಿ ಸಂಪತ್ತೆಲ್ಲಾ ಸೇರಿಹೋಗಿದೆ ಎಂದು ಹೇಳುತ್ತಾರೆ. ಈಗ ಹೆಚ್ಚಿದ ಸಂಪತ್ತಿನ ಹಂಚಿಗೆ ಅಸಮವಾಗಿರಬಹುದಾದರೂ ಅದರ ಗಮನಾರ್ಹ ಅಂಶವು ಗ್ರಾಮ ಪ್ರದೇಶಗಳಿಗೆ ಹೋಗಿವೆ. ಆದಾಯದ ಹಂಚಿಕೆ ಮತ್ತು ಈಗಿನ ಕರಭಾರ—ಇವುಗಳಿಗೆ ತಕ್ಕಂತೆ ಗ್ರಾಮವಲಯದಿಂದ ಸಂಪನ್ಮೂಲಗಳನ್ನು ಎಷ್ಟು ಮಟ್ಟಿಗೆ ಒದಗಿಸಿಕೊಳ್ಳಬಹುದೆಂಬ ವಿಚಾರ ವನ್ನು ಪರಿಶೀಲಿಸಬಯಸುತ್ತೇನೆ. ದೇಶದಲ್ಲಿ ಇರತಕ್ಕ ರೈತಾಪಿ ಜನರ ಕಷ್ಟ ಸುಖ ಗೊತ್ತಿಲ್ಲ. ನಿಮ್ಮ ಆಫೀಸಿನಲ್ಲಿ 55 ರೂಪಾಯಿ ಸಂಬಳ ಪಡೆಯುತಕ್ಕ ಜವಾನನ ಸ್ಥಿತಿಯನ್ನು ನೋಡಿದರೆ 15 ಎಕರೆ ಜಮೀನು ಇರುವ ರೈತನೂ ಸಹ ಇಷ್ಟು ಸುಖವಾಗಿ ಇರುವುದಕ್ಕೆ ಸಾಧ್ಯವಿಲ್ಲ. ನಿಮಗೆ ಬಡತನ ಗೊತ್ತಿಲ್ಲ. ರೈತರಿಗೆ ತೆರಿಗೆ ಹಾಕಿ ಅವರು ಮೂರ್ಖರಾಗಿ ಕೊಡುವುದರಿಂದ ಮತ್ತು ಅವರಲ್ಲಿ ಸಂಘಟನಾ ಶಕ್ತಿ ಇಲ್ಲದೆ ಇರುವುದರಿಂದ ನಿಮ್ಮ ಮೇಲೆ ಅವರು ಭಾರವಾಗಿಲ್ಲ. ನಿಮ್ಮ ಜಿಲ್ಲೆಯಿಂದ ನೀವು ಒಬ್ಬರು ಚುನಾವಣೆಯಲ್ಲಿ ಗೆದ್ದಿರಬಹುದು. ನೀವು ಮಂತ್ರಿಗಳಾಗಿದ್ದೀರಿ, ನೀವು ಸೌಲಭ್ಯ ಒದಗಿಸಬಹುದೆಂದು ನಿಮ್ಮನ್ನು ಚುನಾಯಿಸಿರಬಹುದು. ಆದರೆ ನಿಮ್ಮ ಜಿಲ್ಲೆ ಯಲ್ಲಿ ಬಾಕಿಯವರು ಸೋತಿದ್ದ ಪಕ್ಷಕ್ಕೆ ನಿಮ್ಮ ಸರಕಾರ ಬೇಡ ನೀವು ಇರತಕ್ಕ ರೀತಿ ನೀತಿ ಸರಿಯಿಲ್ಲ ಎಂದು ಚುನಾವಣೆಯಲ್ಲಿ ಅಪೋಜಿಷನ್ ಸದಸ್ಯರು ಚುನಾಯಿತರಾಗಿ ಬಂದಿರಬಹುದು. ನಿಜವಾಗಿಯೂ ಕಾಂಗ್ರೆಸ್ ಸಂಸ್ಥೆಗೆ ಓಟು ಮಾಡುವುದನ್ನು ಬಿಟ್ಟು ನಿಮ್ಮನ್ನು ಮಾತ್ರ ಚುನಾಯಿಸಿ ದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಇರತಕ್ಕ ಬಡತನ ಹೆಚ್ಚಾಗಿ ನಿರುದ್ಯೋಗ ಸಮಸ್ಯೆ ಬಹಳ ಕಟುವಾದ ಸಮಸ್ಯೆ. ಬಡತನ ಹಿಂದೆಯೂ ಹೆಚ್ಚಾಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಬಡತನ ಇರಲಿಲ್ಲ ಎಂದು ಹೇಳುವುದಿಲ್ಲ. ಊಟ ಇರಲಿ, ಇಲ್ಲದೆ ಇರಲಿ, ಸುಮ್ಮನೆ ಇರುತ್ತಿದ್ದರು. ಇವೊತ್ತಿನ ದಿವಸ ನಾವು ಬೇಕಾದಷ್ಟು ಪ್ರೌಢ ಶಾಲೆಗಳನ್ನು ಸ್ಥಾಪನೆ ಮಾಡಿದ್ದೇವೆ, ಕಾಲೇಜು ಗಳನ್ನು ಸ್ಥಾಪನೆ ಮಾಡಿದ್ದೇವೆ, ಬಡತನ ಇದ್ದರೂ ಅವರು ಅಕ್ಷರಸ್ಥರಾಗಿದ್ದಾರೆ ಮತ್ತು ಪ್ರಪಂಚದ ವಿಷಯಗಳನ್ನು ತಿಳಿದು ವಿವೇಚನೆಯಿಂದ ವರ್ತಿಸತಕ್ಕವರಾಗಿದ್ದಾರೆ, ತಮಗೂ ಇತರರಿಗೂ ಇರತಕ್ಕಂಥ ಅಂತರವನ್ನು ಕಲ್ಪನಮಾಡತಕ್ಕ ಜನ ಆಗಿದ್ದಾರೆ. ಅವರು ಈಗ ನಿರುದ್ಯೋಗಿಗಳಾಗಿದ್ದಾರೆ. ಇಷ್ಟು ನಿರುದ್ಯೋಗ ಸಮಸ್ಯೆ ಇರುವಾಗ, ಎಲ್ಲಾ ಸಂಪನ್ಮೂಲ ಗಳೂ ಗ್ರಾಮಾಂತರದಿಂದ ಹರಿದು ಪಟ್ಟಣದಲ್ಲಿ ಬಂದು ಸೇರಿ ಕೋಟಿಗಟ್ಟಲೆ ಬೆಲೆ ಬಾಳುವ ಮನೆಗಳು ಪಟ್ಟಣಗಳಲ್ಲಿ ಇರುವುದನ್ನು ನೋಡುತ್ತಿದ್ದೇವೆ. ಅಷ್ಟು ಸಂಪತ್ತು ಪಟ್ಟಣದಲ್ಲಿ ಹೇಗೆ ಸೇರಿತು ಎಂದು ಯೋಚನೆಮಾಡುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಬಡತನವನ್ನು ಪುನರ್‌ವಿಮರ್ಶೆಮಾಡುವ ನೈಜವಾದ ಶಕ್ತಿ ಮತ್ತು ಸಾಮರ್ಥ್ಯ ಅವರಿಗೆ ಇದೆ. ಯಾವ ರೀತಿ ಹಣ ಯೋಗ್ಯ ಜನರಿಗೆ ತಲಪಿ ಅವರ ಬಡತನ ಹೋಗಲಾಡಿಸಬಹುದು ಎನ್ನುವ ಮಾರ್ಗವನ್ನು ಕಂಡುಹಿಡಿಯಬೇಕೇ ವಿನಹ ಗ್ರಾಮಾಂತರ ಪ್ರದೇಶದಿಂದ ತೆರಿಗೆಗಳ ಮೂಲಕ ಸಂಪನ್ಮೂಲ ಗಳನ್ನು ಒದಗಿಸಿಕೊಳ್ಳುತ್ತೇವೆ ಎಂದು ಹೇಳಿದರೆ ಕಷ್ಟವಾಗುತ್ತದೆ.

ಸ್ವಾಭಾವಿಕವಾಗಿ ರೈತಾಪಿಜನರ ಕಷ್ಟಸುಖಗಳನ್ನು ವಿಮರ್ಶೆ ಮಾಡುತ್ತಾ ಹೋದರೆ ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯಲ್ಲಿ ಮಾಡಬೇಕಾಗುತ್ತದೆ. ಒಂದು ಕಡೆ ಸಣ್ಣ ನೀರಾ ವರಿ ಮಾಡಬೇಕಾಗುತ್ತದೆ. ಬಾವಿಯ ಅನುಕೂಲತೆ ಇರುವುದಿಲ್ಲ. ತಿಪಟೂರು ತಾಲ್ಲೂಕಿನಲ್ಲಿ ಶೇಕಡ ಮೂರರಷ್ಟೂ ಸಹ ನೀರಾವರಿ ಸೌಲಭ್ಯ ಮಾಡಿ ಕೊಟ್ಟಿಲ್ಲ. ತೆಂಗಿನ ತೋಟ ಬೆಳೆಯುತಕ್ಕ ಪ್ರದೇಶ ಅಲ್ಲಿ ಬಹಳವಾಗಿದೆ. ಅಲ್ಲಿನ 5—6 ತಾಲ್ಲೂಕುಗಳಿಗೆ ನೀರಿನ ಸೌಕರ್ಯ ಒದಗಿಸಿಕೊಡವುದು ಬಹಳ ಅವಶ್ಯಕವಾಗಿದೆ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ನಾಗಪ್ಪ (ಮಂಡ್ಯ).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಸಚಿವರು ಮಂಡಿಸಿರುವ 1970–71ನೇ ಇಸವಿಯ ಆಯವ್ಯಯಪಟ್ಟಿಯನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಮುಖ್ಯವಾಗಿ ರಸ್ತೆಗಳ ವಿಷಯ. ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಷುಗರ್ ಕೇನ್ ಸೆಸ್ ಫಂಡ್‌ನಿಂದ ಹತ್ತಾರು ವರ್ಷಗಳಿಂದ ರಸ್ತೆಗಳನ್ನು ಮಾಡಿ ಕೊಂಡು ಬಂದಿದ್ದಾರೆ. ಸುಮಾರು 1600 ಮೈಲಿ ಉದ್ದದ ರಸ್ತೆ ಆಗಿದೆ. ಇದಕ್ಕಾಗಿ ಒಂದು ಆಕ್ಟನ್ನು ಕೂಡ ತಂದು ಯಾವ ಪ್ರಾಂತ್ಯದಿಂದ ಸಕ್ಕರೆ ಕಂಪನಿಗೆ ಕಬ್ಬು ಒದಗಿಸಲ್ಪಡುತ್ತದೆಯೋ ಆ ಪ್ರಾಂತ್ಯದ ರಸ್ತೆ ಸರಿಯಾಗಿರಬೇಕೆಂಬ ಉದ್ದೇಶದಿಂದ ಆ ಪ್ರಾಂತ್ಯದವರಿಗೆ ಒಂದು ಟನ್ ಕಬ್ಬಿಗೆ

6 ರೂಪಾಯಿ ಸೆಸ್ ತೆಗೆದುಕೊಂಡು ರಸ್ತೆಗಳನ್ನು ಮಾಡಿಸಿದ್ದಾರೆ. ಅದಕ್ಕೆ ಸಪರೇಟ್ ಸಬ್‌ಡಿವಿಜನ್ ಕೂಡ ಇತ್ತು. ಅದನ್ನು ಈಚೆಗೆ ಪರ್ಚೇಸ್ ಟ್ಯಾಕ್ಸ್ ಅಂತ ಹೇಳಿ ಬದಲಾಯಿಸಿ ಒಂದು ಟನ್ ಕಬ್ಬಿಗೆ 10 ರೂಪಾಯಿ ತೆಗೆದುಕೊಳ್ಳುತ್ತಾ ಇದ್ದಾರೆ. ಮೈಸೂರು ಜಿಲ್ಲೆಯನ್ನು ತೆಗೆದುಕೊಳ್ಳುವುದಾದರೆ, ಮಂಡ್ಯ ಷುಗರ್ ಕಂಪನಿಯಲ್ಲಿ ವರ್ಷಕ್ಕೆ 5 ಲಕ್ಷ ಟನ್ ಕಬ್ಬನ್ನು ಅರೆಯುತ್ತಾರೆ. ಪಾಂಡವಪುರ ಷುಗರ್ ಕಂಪನಿಯಲ್ಲಿ 4 ಲಕ್ಷ ಟನ್ ಕಬ್ಬನ್ನು ಅರೆಯುತ್ತಾರೆ. ಒಟ್ಟಿನಲ್ಲಿ 9 ಲಕ್ಷ ಟನ್ ಕಬ್ಬನ್ನು ಈ ಎರಡು ಕಂಪನಿಗಳು ತೆಗೆದುಕೊಂಡು ಸಕ್ಕರೆಯನ್ನು ತಯಾರು ಮಾಡುತ್ತವೆ. ಒಂದು ವರ್ಷಕ್ಕೆ 90 ಲಕ್ಷ ರೂಪಾಯಿ ಪರ್ಚೇಸ್ ಟ್ಯಾಕ್ಸ್ ರೂಪದಲ್ಲಿ ಸರ್ಕಾರಕ್ಕೆ ಬರುತ್ತದೆ. ಇವತ್ತು ಅಲ್ಲಿನ ರಸ್ತೆಗಳ ಪರಿಸ್ಥಿತಿಯನ್ನು ನೋಡುವುದಕ್ಕಾಗುವುದಿಲ್ಲ. ಈಗಲಾದರೂ ಮಾನ್ಯ ಸರ್ಕಾರದವರು ಈ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಮಾರಿ ಕಣ್ಣು ಹೋತನ ಮೇಲೆ ಅಂತ ಅನ್ನುವ ಹಾಗೆ ಈಚೆಗೆ 4-5 ವರ್ಷಗಳಿಂದ ಅದರಲ್ಲೂ ಈ 3 ವರ್ಷದಿಂದ ಕೃಷ್ಣರಾಜಸಾಗರದ ನೀರಿನ ಮೇಲೆ ಎಲ್ಲರ ಕಣ್ಣೂ ಬಿದ್ದಿದೆ. ಕೃಷ್ಣರಾಜಸಾಗರ ನಿರ್ಮಿಸಿದಾಗ ಯಾವ ಪ್ರದೇಶಕ್ಕೆ ನೀರು ಕೊಡಬೇಕು, ವರ್ಷದಲ್ಲಿ ಎಷ್ಟು ನೀರು ಅಲ್ಲಿ ಶೇಖರ ವಾಗುತ್ತದೆ ಎಂಬುದನ್ನು 1921ನೇ ಇಸವಿಯಲ್ಲಿ ಶ್ರೀಮಾನ್ ಶೇಷಾಚಾರ್ ಅನ್ನುವ ಚೀಫ್ ಇಂಜನಿಯರು ಮತ್ತು ಸರ್ ಎಂ. ವಿಶ್ವೇಶ್ವರಯ್ಯನವರು ಪರಿಶೀಲನೆ ಮಾಡಿ ಒಂದು ತೀರ್ಮಾನ ವನ್ನು ತೆಗೆದುಕೊಂಡಿದ್ದಾರೆ, ಅದರ ಒಂದು ನಕ್ಷೆ ಇದೆ. ಅದರಲ್ಲಿ ಚೀಫ್ ಇಂಜನಿಯರ ರುಜು ಇದೆ. ಕೃಷ್ಣರಾಜಸಾಗರದಲ್ಲಿ ಇಷ್ಟು ನೀರು ಸಂಗ್ರಹವಾಗುತ್ತದೆ, ಇಂತಿಂತಹ ಪ್ರದೇಶಕ್ಕೆ ಇಷ್ಟಿಷ್ಟು ನೀರು ಕೊಡಬೇಕು ಎಂದು ನಿಗದಿ ಮಾಡಿದ್ದಾರೆ. ಕಾಲಕ್ರಮೇಣ ಆ ಪ್ರದೇಶದ ಅಚ್ಚುಕಟ್ಟುದಾರರಿಗೆ ತೊಂದರೆಯಾದಾಗ ಕಬಿನಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂಬ ಪ್ರಶ್ನೆ ಬಂತು. ಕೃಷ್ಣರಾಜಸಾಗರದಲ್ಲಿ ಬೇಸಿಗೆಯಲ್ಲಿ ಪವರ್ ಸ್ಟೇಷನ್‌ಗೆ 900 ಕ್ಯೂಸೆಕ್ಸ್ ಕೊಡ ಬೇಕಾಗುತ್ತದೆ. ನಿಡುಘಟ್ಟ ಮತ್ತು ತುರುಗನೂರು ಬ್ರಾಂಚ್‌ಗೆ ನೀರನ್ನು ಕೊಡಬೇಕು, ಇದರ ಬಗ್ಗೆ ಯಾವ ಮಾರ್ಪಾಡೂ ಮಾಡುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ತೀವ್ರ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಈ ತಿಂಗಳ 9ನೇ ತಾರೀಖು ಶ್ರೀರಂಗಪಟ್ಟಣ ತಾಲ್ಲೂಕು ಅರಕೆರೆ ಹೋಬಳಿ ರೈತರ ಸಂಘದವರು ಕೃಷ್ಣರಾಜಸಾಗರ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಕೊಡಬೇಕೆಂದು ಕೇಳಿಕೊಂಡು ಮಾನ್ಯ ಮಂತ್ರಿಗಳನ್ನು ಆಹ್ವಾನಿಸಿದ್ದಾರೆ ಎಂದು ಸುದ್ದಿ ಬಂದಿದೆ. ಮಾನ್ಯ ಮಂತ್ರಿಗಳು ಅವರ ಆಹ್ವಾನವನ್ನು ಒಪ್ಪಿಕೊಳ್ಳಬೇಕಾದರೆ ಅವರು ಕೇಳುವುದು ನ್ಯಾಯವೇ, ಸಾಧುವೇ, ಕಾನೂನು ಪ್ರಕಾರ ಆ ಕೆಲಸವನ್ನು ಮಾಡುವುದಕ್ಕಾಗುತ್ತದೆಯೇ ಎಂಬುದನ್ನು ತಿಳಿದುಕೊಂಡು ಒಪ್ಪಿಕೊಳ್ಳಬೇಕಾಗಿತ್ತು. ಅದೇ ರೀತಿ ಮೈಸೂರು ತಾಲ್ಲೂಕಿನ ಕೆಲವು ಮಹನೀಯರು ಒಂದು ಎಕರೆಗೆ 5-6 ರೂಪಾಯಿಯಂತೆ ವಸೂಲು ಮಾಡಿ ಕೃಷ್ಣರಾಜ ಸಾಗರದಿಂದ ನೀರು ಕೊಡಿಸುತ್ತೇವೆ ಎಂದು ಹೇಳುತ್ತಾ ಇದ್ದಾರಂತೆ, ಇದಕ್ಕಾಗಿ ಮಾನ್ಯ ಮಂತ್ರಿಗಳನ್ನು ಆಹ್ವಾನ ಮಾಡಬೇಕೆಂದು ಇದ್ದಾರೆ ಎಂದು ತಿಳಿದು ಬಂದಿದೆ. ಮಾನ್ಯ ಮಂತ್ರಿ ಗಳು ಕೂಲಂಕಷವಾಗಿ ವಿಚಾರ ಮಾಡಿ ಇಂತಹ ಆಹ್ವಾನಗಳನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

ಮೊದಲು ವಿಶ್ವೇಶ್ವರಯ್ಯ ಕೆನಾಲ್ ಬೋರ್ಡ್ ಅಂತ ಹೇಳಿ ಇತ್ತು. ಅದನ್ನು ರಿಸರ್ವಾ ಯರ್ ಅಡ್ವೈಸರಿ ಕಮಿಟಿ ಅಂತ ಮಾಡಿದರು, ಈಗ ಕನ್‌ಸರ್ವೇಟೀವ್ ಕಮಿಟಿ ಅಂತ ಮಾಡಿದ್ದಾರೆ. ಯಾವುದೇ ಆಗಲಿ ಕೃಷ್ಣರಾಜಸಾಗರದಲ್ಲಿರತಕ್ಕ ಅಚ್ಚುಕಟ್ಟುದಾರರ ಪ್ರತಿನಿಧಿಗಳನ್ನು ಅದರಲ್ಲಿ ಸೇರಿಸಿಕೊಂಡು ಯಾವ ರೀತಿ ನೀರನ್ನು ಉಪಯೋಗ ಮಾಡಿಕೊಳ್ಳಬೇಕೆಂಬುದನ್ನು ನಿರ್ಧಾರ ಮಾಡಬೇಕೆಂದು ಹೇಳುತ್ತೇನೆ.

ಈಗ ತುಂಗಭದ್ರ ಬೋರ್ಡ್ ಇದೆ, ಅಲ್ಲಿಗೆ ಅದಕ್ಕೆ ಸಂಬಂಧಪಟ್ಟವರನ್ನೇ ಹಾಕುವರು, ಯಾವ ಅಚ್ಚುಕಟ್ಟು ಅದಕ್ಕೆ ಸೇರಿದೆಯೋ ಆ ಪ್ರದೇಶದವರನ್ನೇ ಅದಕ್ಕೆ ಸಂಬಂಧಪಟ್ಟ ಸಮಿತಿಗೆ ಹಾಕ ಬೇಕು. ಅಲ್ಲಿಯವರೆಗೆ ಆ ಪ್ರದೇಶದ ವಿಚಾರ ಗೊತ್ತಿರುವುದು. ಅದೇ ರೀತಿಯಲ್ಲಿ ಕೆ. ಆರ್. ಎಸ್. ಕನ್‌ಸರ್ವೇಟಿವ್ ಕಮಿಟಿಗೆ ಆ ಪ್ರದೇಶದ ಜನರನ್ನು, ಆ ನೀರನ್ನು ಉಪಯೋಗಿಸುವವರನ್ನು ಹಾಕುವುದು ಸೂಕ್ತ. ಇದನ್ನು ಹೇಳುವುದಕ್ಕೆ ಕಾರಣ ವರುಣಾನಾಲೆಗೆ ಸಂಬಂಧಪಟ್ಟ ಅನೇಕ ಮಾಹಿತಿ ನನ್ನಲ್ಲಿದೆ. ಕೆಲವರು ತಾವೂ ಕೂಡ ನೀರಿನ ಹಕ್ಕನ್ನು ಪಡೆಯಬೇಕೆಂದು ಸಂಬಂಧಪಟ್ಟ ಎಂಜಿನಿಯರುಗಳಿಗೆ ಹೇಳಿ ಅದನ್ನು ಪಡೆಯಲು ಅನುವಾಗಲೆಂಬ ಉದ್ದೇಶದಿಂದಲೋ ಏನೋ ಸಮಿತಿಗಳಿಗೆ ಸೇರಿಕೊಳ್ಳುವರು. ಅದು ಸರಿಯಲ್ಲ,

ಶ್ರೀ ಎಚ್. ಎನ್. ನಂಜೇಗೌಡ.—ಅದರಲ್ಲಿ ತಪ್ಪೇನ ? ಹೇಮಾವತಿಗೆ ಸಂಬಂಧಪಟ್ಟ ಸಮಿತಿಗೂ ಹಾಗೆಯೇ ಮಾಡಿದ್ದಾರೆ.

ಶ್ರೀ ನಾಗಪ್ಪ.—ನಾನು ಯಾವಾಗಲೂ ಒಂದು ಸ್ವಭಾವದ ಮನುಷ್ಯ. ನಾನು ಒಂದು ಕ್ಷೇತ್ರದ ಪ್ರತಿನಿಧಿ, ನನ್ನ ಜಿಲ್ಲೆಗೆ ಸಂಬಂಧಪಟ್ಟ ವಿಷಯ ಹೇಳಬಹುದು. ಅವರು ಸ್ಟೇಟ್ ಲೀಡರ್, ಎಲ್ಲಾ ಕ್ಷೇತ್ರಗಳ ಬಗ್ಗೆ ಕೂಡ ಮಾತನಾಡಬಹುದು. ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಮಾತ್ರ ಮಾತನಾಡಬೇಕಾದ್ದು ನನ್ನ ಕರ್ತವ್ಯ. ಸಮಿತಿ ಮಾಡುವಾಗ ಸ್ವಲ್ಪ ವಿವೇಚನೆ ಉಪಯೋಗಿಸಿ ನೇಮಕಮಾಡಬೇಕಾದ್ದು ಅವಶ್ಯಕ. ಅವಕಾಶ ಹೆಚ್ಚಿಲ್ಲದ್ದರಿಂದ ಇಲ್ಲಿಗೆ ನನ್ನ ಭಾಷಣವನ್ನು ಮುಗಿಸಿ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

† ಶ್ರೀ ಭೋಳಾ ರಘುರಾಮಶೆಟ್ಟಿ (ಕಾರ್ಕಳ).—ಮಾನ್ಯ ಸಭಾಪತಿಗಳೇ, ಮಾನ್ಯ ಆರ್ಥಿಕ ಮಂತ್ರಿಗಳು ನಮ್ಮ ರಾಜ್ಯದ ಕೊರತೆಯ ಆಯವ್ಯಯ ವರದಿಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಶ್ರೀ ರಾಮಕೃಷ್ಣ ಹೆಗಡೆಯವರು ವಿಚಾರವಂತರು, ಒಳ್ಳೆಯ ಮುಂದಾಲೋಚನೆಯುಳ್ಳವರು ಮತ್ತು ವಾಸ್ತವಿಕತೆಯನ್ನು ತಿಳಿಯುವ ಶಕ್ತಿಯುಳ್ಳವರು. ಅವರು ರಾಜ್ಯದ ಅಭಿವೃದ್ಧಿಯಾಗ ಬೇಕೆಂದು ಒಂದು ಕಾರ್ಯಕ್ರಮವನ್ನು ಇಟ್ಟಿದ್ದಾರೆ. ನಮ್ಮ ದೇಶದ ಆರ್ಥಿಕಸ್ಥಿತಿ ನೋಡುವು ದಾದರೆ ಇದು ಬೆಳೆಯುವ ದೇಶ, ಇಲ್ಲಿಯ ಜನ ವಿಪರೀತವಾಗಿ ಕೆಲಸ ಮಾಡಿದರೂ ಕೂಡ ಮತ್ತು ಇಲ್ಲಿ ನ್ಯಾಚುರಲ್ ರಿಸೋರ್ಸಸ್ ಇದ್ದರೂ ಕೂಡ ಇಲ್ಲಿ ಸಂಪತ್ತನ್ನು ಒಳ್ಳೆಯ ರೀತಿಯಲ್ಲಿ ಉತ್ಪತ್ತಿ ಮಾಡದೆಹೋದರೆ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ಆರ್ಥಿಕ ಸಮಸ್ಯೆ, ಗೃಹ ಸಮಸ್ಯೆ. ಔದ್ಯೋಗಿಕ ಸಮಸ್ಯೆ, ನಿರುದ್ಯೋಗ ಸಮಸ್ಯೆ ಮುಂತಾದುವನ್ನು ಹಾಗೆ ಮಾಡಿದರೆ ಪರಿಹಾರ ಮಾಡ ಬಹುದು. ಕಳೆದ 20 ವರ್ಷಗಳಲ್ಲಿ ಈ ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಒಂದೇ ಪಕ್ಷದ ಸರಕಾರವಿತ್ತು ಮೂರು ಪಂಚವಾರ್ಷಿಕ ಯೋಜನೆಗಳು ಮುಗಿದು ಈಗ ನಾಲ್ಕನೆಯ ಪಂಚವಾರ್ಷಿಕ ಯೋಜನೆ ನಡೆಯುತ್ತಿದೆ. ಈಗ ಒಂದು ವಿಷಯ ಸ್ಪಷ್ಟವಾಗಿದೆ. ಇಂದು ಜನರ ಜೀವನಾವಶ್ಯಕ ವಸ್ತುಗಳ ಬೆಲೆ ದಿವಸ ದಿವಸಕ್ಕೂ ಹೆಚ್ಚುತ್ತಾ ಇದೆ. ಕಳೆದ 1969 ರ ಸೆಪ್ಟಂಬರು, ಅಕ್ಟೋಬರುಗಳಲ್ಲಿ ಬೆಲೆ ಕೆಲವುಮಟ್ಟಿಗೆ ಕಡಮೆಯಾದರೂ ಈಗ ಅದು ಹೆಚ್ಚುತ್ತಾ ಇದೆ. ಕೇಂದ್ರ ಸರಕಾರದ ಬಜೆಟ್ಟು ಮತ್ತು ರಾಜ್ಯ ಸರಕಾರದ ಬಜೆಟ್ಟು ಜೀವನಾವಶ್ಯಕ ವಸ್ತುಗಳ ಬೆಲೆ ಏರುವಂತೆ ಮಾಡಿವೆ. ಜನರಿಗೆ ಬೇಕಾದ ಮನೆ ಸಮಸ್ಯೆ ಕೂಡ ದೊಡ್ಡದೊಡ್ಡ ನಗರಗಳಲ್ಲಲ್ಲದೆ ಹಳ್ಳಿಗಳಲ್ಲೂ ಕೂಡ ಪ್ರಬಲವಾಗಿದೆ. ಹಳ್ಳಿಗಳಲ್ಲಿ ಎಷ್ಟೋ ಜನರಿಗೆ ವಾಸಕ್ಕೆ ಮನೆಯಿಲ್ಲ. ನಿರುದ್ಯೋಗ ಕೂಡ ಹೆಚ್ಚಿದೆ. ಹತ್ತು ವರ್ಷದ ಹಿಂದೆ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಅರವತ್ತೆಂಟೂವರೆ ಸಾವಿರ ಇತ್ತು, ಇಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಅಂಕಿಯ ಪ್ರಕಾರ 2 ಲಕ್ಷ ಹದಿಮೂರೂವರೆ ಸಾವಿರ ಇದೆ. ಆದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ಎಲ್ಲರೂ ಹೆಸರನ್ನು ರಿಜಿಸ್ಟರು ಮಾಡಿಸುವುದಿಲ್ಲ, ಕೇವಲ ಸೇಕಡ 60 ಮಂದಿ ಕೂಡ ರಿಜಿಸ್ಟರು ಮಾಡಿಸುವುದಿಲ್ಲ. ಇದನ್ನು ಸರಿಯಾಗಿ ಲೆಕ್ಕ ಮಾಡುವುದಾದರೆ ನಮ್ಮ ರಾಜ್ಯದ ನಿರುದ್ಯೋಗಿಗಳ ಸಂಖ್ಯೆ ಅದರಲ್ಲೂ ವಿದ್ಯಾವಂತ ನಿರುದ್ಯೋಗಿ ಗಳ ಸಂಖ್ಯೆ ಮತ್ತು ಅವರ ಸಮಸ್ಯೆ ಹೆಚ್ಚಾಗಿದೆ, ಬಹಳ ಗಂಭೀರವಾಗಿದೆ. ಇಂಥ ಪರಿಸ್ಥಿತಿ ಯಲ್ಲಿ ನಮ್ಮ ದೇಶದಲ್ಲಿರುವ ಕೆಲವು ವ್ಯಕ್ತಿಗಳು ಇದನ್ನು ದುರುಪಯೋಗಮಾಡಿಕೊಳ್ಳುತ್ತಿದ್ದಾರೆ. ಇಂದು ಕಲಿಯುವ ವಿದ್ಯಾರ್ಥಿಗಳು ಬುದ್ಧಿಶಕ್ತಿಯನ್ನು ಹೆಚ್ಚಿಸಿಕೊಂಡು ಅದರ ಉಪಯೋಗ-ಪಡೆಯುವ ಭರವಸೆ ಇಲ್ಲದೆ ಅವರಾದರೂ ಕೂಡ ದೇಶದಲ್ಲಿ ನಡೆಯುವ ಸತ್ಯಾಗ್ರಹ ಮತ್ತು ಚಳವಳಿಗಳಿಗೆ ಸುಲಭವಾಗಿ ಬಲಿ ಬೀಳುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಗ್ರಾಮಾಂತರಗಳಲ್ಲಿ ಸುಮಾರು 18.3 ಮಿಲಿಯನ್ ಜನರಿದ್ದಾರೆ. ಅದರಲ್ಲಿ ಸೇಕಡ 50 ರಷ್ಟು ಕೆಲಸಗಾರರಿದ್ದಾರೆ, ಹಳ್ಳಿಗಳಲ್ಲಿ ಸಾಗುವಳಿ ಸಮಯವಲ್ಲದೆ ಬೇರೆ ಸಮಯಗಳಲ್ಲಿ ಅವರಿಗೆ ಉದ್ಯೋಗವಿರುವುದಿಲ್ಲ ಮತ್ತು ಅವರಿಗೆ ದಿವಸಕ್ಕೆ 50 ಪೈಸೆ ಸಂಪಾದನೆ ಕೂಡ ಇಲ್ಲ. ಇಂಥ ಜನರ ನಿರುದ್ಯೋಗ ಸಮಸ್ಯೆಯನ್ನು ಕೂಡ ಪರಿಹಾರ ಮಾಡಬೇಕು. ಏಕೆಂದರೆ ಹಳ್ಳಿಗಳಲ್ಲಿರುವ ಲಕ್ಷಗಟ್ಟಲೆ ಜನರ ಜೀವನ ಉತ್ತಮವಾಗದಿದ್ದರೆ ಯಾವ ಔದ್ಯೋಗಿಕರಣದ ಉತ್ತಮ ಫಲಿತಾಂಶ ಬರುವುದಿಲ್ಲ. ಇಂದು ಬಹಳ ಮಟ್ಟಿಗೆ ಹಳ್ಳಿಗಳಲ್ಲೂ ಕನ್‌ಸ್ಯೂಮರ್ಸ್ ಅನೇಕವಾಗಿದ್ದಾರೆ. ಅವರ ಜೀವನ ಉತ್ತಮವಾಗಿ ಕೊಂಡುಕೊಳ್ಳುವ ಶಕ್ತಿ ಅವರಿಗೆ ಬಾರದಿದ್ದರೆ ಉತ್ಪತ್ತಿ ಮಾಡುವುದನ್ನು ಕೂಡ ನಿಲ್ಲಿಸಬೇಕಾಗುವುದು. ಇಂದು ನಮ್ಮ ದೇಶದಲ್ಲಿ ಸರಕಾರಿ ನೌಕರರು ಕಳೆದ ಹತ್ತು ವರ್ಷ ಗಳಿಂದ ನಾಲ್ಕು ಪಾಲು ಹೆಚ್ಚಿದ್ದಾರೆ, ಅವರಿಗಾಗಿ, ನಮ್ಮ ಬೊಕ್ಕಸದ 50 ಭಾಗಕ್ಕಿಂತ ಮೇಲ್ಪಟ್ಟ ಅಂಶ ಕೇವಲ ಸೇಕಡ ಎರಡಕ್ಕಿಂತ ಕಡಮೆಯಿರುವ ನೌಕರರಿಗಾಗಿ ಖರ್ಚಾಗುತ್ತಿದೆ. ತುಕೋಳ್ ವರದಿಯನ್ನು ಸರಕಾರ ಬಹಳಮಟ್ಟಿಗೆ ಒಪ್ಪಿದೆ, ಸಂತೋಷ. ನಮ್ಮ ರಾಜ್ಯದ ಆರ್ಥಿಕ ಸ್ಥಿತಿ ಯನ್ನು ನೋಡಿಕೊಂಡು ಮುಂದುವರೆಯಬೇಕು. ಈಗ ಕೇವಲ ಸಂಬಳದ ವಿಷಯವನ್ನು ಮಾತ್ರ ಒಪ್ಪಲಾಗಿದೆ, ಬೇರೆ ವಿಷಯಗಳನ್ನು ಕೂಡ ಒಪ್ಪಬೇಕು. ಅನೇಕ ಆಫೀಸುಗಳಲ್ಲಿ ಬೇಕಾದ್ದಕ್ಕಿಂತ ಹೆಚ್ಚು ನೌಕರರಿದ್ದಾರೆ. ಇದಲ್ಲದೆ ಮಾನ್ಯ ಮಂತ್ರಿಗಳು ನೌಕರರ ವಿಷಯ ಹೇಳಿದ್ದಾರೆ. ಅವರು

ಒಂದು ದಿವಸದಲ್ಲಿ 2-3 ತಾಸುಗಳಿಗಿಂತ ಹೆಚ್ಚಾಗಿ ಮನಃಪೂರ್ವಕವಾಗಿ ಕೆಲಸ ಮಾಡುವುದಿಲ್ಲ ವೆಂದು ಹೇಳಿದ್ದಾರೆ. ಇಂದು ಯಾವ ಆಫೀಸಿಗೆ ಹೋದರೂ ವರ್ಷವಾದರೂ ಯಾವ ರಿಕಾರ್ಡೂ ಫೈಸಲಾಗುವುದಿಲ್ಲ. ನೌಕರರಿಗೆ ಸರಿಯಾದ ಸಂಬಳ ಕೊಡುವುದು ನ್ಯಾಯವಾದರೂ ಅವರಿಂದ ನ್ಯಾಯವಾಗಿ ಸಲ್ಲಬೇಕಾದ ಸೇವೆಯನ್ನು ಪಡೆಯುವ ಜವಾಬ್ದಾರಿ ಕೂಡ ಮಂತ್ರಿಗಳಿಗಿದೆ. ಮಂತ್ರಿಗಳು ಕೆಲಸಮಾಡಿದರೆ ಸೆಕ್ರೆಟೇರಿಯಟ್ಟಿನಲ್ಲಿರುವ ನೌಕರರೂ ಒಳ್ಳೆಯ ಕೆಲಸ ಮಾಡುವವರು ಮತ್ತು ಸೆಕ್ರೆಟೇರಿಯಟ್ ಒಳ್ಳೆಯ ಕೆಲಸ ಮಾಡಿದರೆ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ, ಗ್ರಾಮ ಮಟ್ಟದಲ್ಲಿ ಒಳ್ಳೆಯ ಕೆಲಸವಾಗುವುದು. ಅದುದರಿಂದ ಒಳ್ಳೆಯ ಕೆಲಸವನ್ನು ಪಡೆಯುವಂಥ ಜವಾಬ್ದಾರಿ ಮಂತ್ರಿಗಳ ಕಾರ್ಯ ನಿರ್ವಹಣೆಯಲ್ಲಿದೆ.

4-00 P.M.

ವಿದ್ಯಾ ಕ್ಷೇತ್ರದಲ್ಲಿ ಬಹಳ ಹಣ ಖರ್ಚು ಮಾಡುತ್ತಿದ್ದಾರೆ. ಲೆಕ್ಕಕ್ಕೆ ನಮ್ಮ ರಾಜ್ಯದಲ್ಲಿ ಅನೇಕ ಕಾಲೇಜುಗಳಾಗಿವೆ, ಹೈಸ್ಕೂಲುಗಳಾಗಿವೆ. ಅಲ್ಲಿ ಬೇಕಾದಷ್ಟು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಆದರೆ ಎಲ್ಲರೂ ಒಪ್ಪುವಂಥ ರೀತಿಯ ವಿದ್ಯಾಭ್ಯಾಸ ನಡೆಯುತ್ತಿಲ್ಲ. ಈ ಹೊತ್ತು ವಿದ್ಯಾಭ್ಯಾಸದ ಮಟ್ಟ, ನಮ್ಮ ದೇಶದಲ್ಲಿ ಕೆಲವು ವರ್ಷಗಳ ಹಿಂದೆ ಇದ್ದಂಥ ಮಟ್ಟಕ್ಕಿಂತ ಬಹಳ ಕಡಮೆಯಾಗಿದೆ. ಈ ರೀತಿ ವಿದ್ಯಾವಂತರಾದಮೇಲೆ ಅವರಿಗೆ ತಮ್ಮ ಜೀವನದಲ್ಲಿ ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳತಕ್ಕ ಸಾಮರ್ಥ್ಯವಿಲ್ಲದೆ ಇದ್ದರೆ ಅದು ರಾಜಕೀಯ ಸಮಸ್ಯೆಯಾಗುತ್ತದೆ. ವಿದ್ಯಾವಂತರಾದ ಮೇಲೆ ಸರಿಯಾದ ಹುದ್ದೆಗಳನ್ನು ರಾಜ್ಯ ಸರ್ಕಾರ ಅವರಿಗೆ ಒದಗಿಸಿಕೊಡದೆ ಇದ್ದರೆ ಅವರು ತಪ್ಪು ದಾರಿಗೆ ಹೊಗುವುದಲ್ಲದೆ ನಾವು ಖರ್ಚು ಮಾಡುವಂಥ ಹೇರಳವಾದ ಹಣವನ್ನು ಸದುಪಯೋಗ ಮಾಡಿದ ಹಾಗೆ ಆಗುವುದಿಲ್ಲ.

ಗ್ರಾಮಾಂತರ ಪ್ರದೇಶದಲ್ಲಿರುವಂಥ ವಿದ್ಯೆಯ ಮಟ್ಟ ಕೂಡ ಬಹಳ ಕೆಳಗೆ ಇದೆ. ಅಲ್ಲಿ ಒಬ್ಬ ಉಪಾಧ್ಯಾಯರಿರುವ ಶಾಲೆಗಳನ್ನು ತೆರೆದಿದ್ದಾರೆ; ಮೂರು ನಾಲ್ಕು ತರಗತಿಗಳಲ್ಲಿರುವ ಮಕ್ಕಳಿಗೆ ಒಬ್ಬರೇ ಉಪಾಧ್ಯಾಯರು ಶಿಕ್ಷಣ ಕೊಡಬೇಕಾಗುತ್ತದೆ. ನಿಜವಾಗಿಯೂ ಇಂಥ ಶಿಕ್ಷಣ ಯಾವ ಮಟ್ಟದಲ್ಲಿರಬಹುದು, ಅಂಥ ಶಾಲೆಗಳಲ್ಲಿ ಕಲಿತ ಮಕ್ಕಳು ಪೇಟೆಯ ಶಾಲೆಗಳಲ್ಲಿ ಕಲಿತ ಮಕ್ಕಳೊಟ್ಟಿಗೆ ಸ್ಪರ್ಧೆ ಪೋಟಿ ಮಾಡಿ, ಮೇಲಿನ ತರಗತಿಗಳಿಗೆ ಹೋಗುವುದು ಎಷ್ಟು ಕಷ್ಟವಾದೀತು ಎನ್ನುವುದು ಗಮನಾರ್ಹವಾದ ವಿಷಯ.

ಈ ಬಜೆಟ್ಟಿನಲ್ಲಿ ಮಾಡಲ್ ಪ್ರೈಮರಿ ಸ್ಕೂಲುಗಳ ವಿಚಾರ ಹೇಳಿದ್ದಾರೆ, ಪದವೀಧರ ಉಪಾಧ್ಯಾಯರನ್ನು ಎಲಿಮೆಂಟರಿ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರಾಗಿ ಮಾಡುವಂಥದು ನಿಜವಾಗಿಯೂ ಸ್ವಾಗತಾರ್ಹವಾದುದು.

ನೀರಾವರಿ ವಿಷಯದಲ್ಲಿ ಕೂಡ, ಇಷ್ಟು ವರ್ಷದಲ್ಲಿ, ನಮ್ಮ ರಾಜ್ಯದಲ್ಲಿ ಬೆಳೆಯಾಗುವಂಥ ಪ್ರದೇಶದಲ್ಲಿ ಕೇವಲ 10 ಪರ್ಸೆಂಟ್ ನೀರಾವರಿ ಸಿಕ್ಕುವ ಕಾರ್ಯಕ್ರಮವನ್ನು ಕೂಡ ಸರ್ಕಾರ ಮಾಡಿಲ್ಲ. ದೊಡ್ಡ ದೊಡ್ಡ ಸ್ಕೀಮುಗಳನ್ನು ಹಾಕಿದ್ದಾರೆ, ಹೇರಳ ಹಣವನ್ನು ಇಟ್ಟಿದ್ದಾರೆ. ಆದರೆ ದೊಡ್ಡ ಸ್ಕೀಮುಗಳನ್ನು ಯಾವುದನ್ನೂ ಮುಗಿಸಿಲ್ಲ ಮತ್ತು ಸಾಮಾನ್ಯ ರೈತನ ಜೀವನ ಮಟ್ಟ ಅಭಿವೃದ್ಧಿ ಮಾಡಿಲ್ಲ, ಅವರಿಗೆ ನೀರು ಬೇಕಾದಷ್ಟು ಸಿಕ್ಕಿಲ್ಲ. ನೀರಿನಿಂದ ಉತ್ಪತ್ತಿ ಜಾಸ್ತಿ ಮಾಡಲಿಕ್ಕೆ ಬೇಕಾದಂಥ ಕೆರೆ, ಬಾವಿ ಕೆಲವುಮಟ್ಟಿಗೆ ಮಾಡಿದ್ದರೂ, ನಮ್ಮ ಅವಶ್ಯಕತೆ ಎಷ್ಟು ಉಂಟು, ನಮ್ಮ ಜನರ ಬೇಡಿಕೆ ಎಷ್ಟು ಉಂಟು, ಅದಕ್ಕೆ ಸರಿಯಾಗಿ ನಿರ್ವಹಣೆ ಮಾಡಿಲ್ಲ. ನಮ್ಮ ರಾಜ್ಯದ ಆಹಾರ ಉತ್ಪತ್ತಿಯನ್ನು ಹೆಚ್ಚಿಸಬೇಕಾದರೆ ಅಥವಾ ಆಹಾರ ಧಾನ್ಯ ಬೆಳೆಯುವಂಥ ಗ್ರಾಮಾಂತರ ಜನರ ಜೀವನ ಮಟ್ಟವನ್ನು ಹೆಚ್ಚಿಸಬೇಕಾದರೆ ಬಹಳ ಮುಖ್ಯವಾಗಿ ಬೇಕಾದುದು ನೀರಾವರಿ ಸೌಕರ್ಯ. ನೀರಾವರಿಯಿಂದ ಉತ್ಪತ್ತಿಯನ್ನು ಮಾಡುವುದಕ್ಕೆ ವಿದ್ಯುಚ್ಛಕ್ತಿ ಎಷ್ಟು ಅಗತ್ಯವಿದೆಯೋ ಅಷ್ಟರಮಟ್ಟಿಗೆ ನಾವು ಒದಗಿಸಿಕೊಡಬೇಕಾಗಿದೆ. ಪುಣ್ಯದಿಂದ ನಮ್ಮ ರಾಜ್ಯದಲ್ಲಿ ಸಾಕಾದಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಿದ್ದೇವೆ. ಆದರೆ ಅದನ್ನು ಬಳಸುವುದಕ್ಕೆ ತಯಾರಾಗದ್ದರಿಂದ ನೆರೆ ರಾಜ್ಯಗಳಿಗೆ ಕೊಡುವಂಥ ಸಂದರ್ಭ ಬಂದಿದೆ.

ಮಾನ್ಯ ಆರ್ಥಿಕ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಕಡೆಗೆ ಒಂದು ವಿಷಯವನ್ನು ಹೇಳಿದ್ದಾರೆ. ನಮ್ಮ ದೇಶದ ಆರ್ಥಿಕ ಪ್ರಗತಿ ಮಾಡಬೇಕಾದರೆ ನಾವು ಸಾರ್ವಜನಿಕ ಕ್ಷೇತ್ರದಲ್ಲಿ ಮಾತ್ರವಲ್ಲ, ಖಾಸಗಿ ಕ್ಷೇತ್ರದಲ್ಲಿ ಕೂಡ ಬೇಕಾದ ಪ್ರೋತ್ಸಾಹ ಕೊಡಬೇಕೆಂದು ಹೇಳಿದ್ದಾರೆ. ಹೋದ ಬಜೆಟ್ಟಿನಲ್ಲಿ ಕೂಡ ಅದರ ಸೂಚನೆ ಕೊಟ್ಟಿದ್ದಾರೆ. ಈ ಹೊತ್ತಿನ ದಿವಸ ಸರ್ಕಾರಿ ಕ್ಷೇತ್ರದಲ್ಲಿ 18 ಕಾರ್ಖಾನೆಗಳು ಮತ್ತು ನಾಲ್ಕು ಸ್ಟ್ಯಾಚ್ಯೂಟರಿ ಕಾರ್ಪೊರೇಷನ್‌ಗಳಿವೆ. ಈ ಸಭೆಯ ಸಮಿತಿಯನ್ನು ಮಾಡಿ

(ಶ್ರೀ ಬೋಳಾ ರಘುರಾಮ ಶೆಟ್ಟಿ)

ಯಾವ ರೀತಿಯಲ್ಲಿ ಅವುಗಳಿಂದ ಹೆಚ್ಚಿನ ಉತ್ಪತ್ತಿ ಬರುವ ಹಾಗೆ, ದಕ್ಷತೆಯಿಂದ ಕೆಲಸ ಮಾಡುವ ಹಾಗೆ ಮಾಡಬೇಕು ಎಂದು ಹೇಳಿದ್ದಾರೆ. ಈ ಸಾರಿಯ ಬಜೆಟ್ಟಿನಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಹೇಳಿದ್ದಾರೆ. ನಮ್ಮ ದೇಶದ ಅರ್ಥಿಕಾಭಿವೃದ್ಧಿ ಮಾಡುವುದಕ್ಕೆ ಸಾರ್ವಜನಿಕ ಕ್ಷೇತ್ರ, ಹಾಗೂ ಖಾಸಗಿ ಕ್ಷೇತ್ರ ಎಂದು ವಿಭಜನೆ ಮಾಡುವುದಕ್ಕಿಂತ ಯಾರು ಬಂಡವಾಳ ಹಾಕುವುದಕ್ಕೆ ತಯಾರಿದ್ದಾರೆ ಅಂಥವರಿಗೆ ಸರ್ವತೋಮುಖವಾದ ಸಹಕಾರ ಸರ್ಕಾರದಿಂದ ಸಿಕ್ಕಬೇಕು, ಪ್ರೋತ್ಸಾಹ ಕೊಡಬೇಕು, ಅಂಥವರು ಮುಂದೆ ಬರಬೇಕು, ಅದರಿಂದ ನಮ್ಮ ಸಮಸ್ಯೆ ಪರಿಹಾರವಾಗುತ್ತದೆ ಎಂದು ಹೇಳಿದ್ದಾರೆ. ಇದು ಬರೀ ಭಾಷಣವಾಗದೆ ಕೃತಿಯಾಗಲಿ ಎಂದು ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸೋಲೂರು ಸಿದ್ದಪ್ಪ (ಕುದೂರು).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕ ಆಯವ್ಯಯ ಪಟ್ಟಿಯನ್ನು ನಾನು ಅನುಮೋದಿಸುತ್ತ ಕಲವು ಕೊರತೆಗಳನ್ನು ತಮ್ಮ ಮುಂದೆ ಇಡಲು ಎದ್ದಿದ್ದೇನೆ. ಮೈಸೂರು ಸಂಸ್ಥಾನದಲ್ಲಿ ಪಂಚವಾರ್ಷಿಕ ಯೋಜನೆಗಳು ಆಗಿದ್ದರೂ ಅದರ ಪೂರ್ಣ ಪರಿಣಾಮವಾಗಿಲ್ಲ ಮೂರು ಯೋಜನೆಗಳು ಮುಗಿದು ನಾಲ್ಕನೆ ಯೋಜನೆ ಪ್ರಾರಂಭವಾಗಬೇಕಾಗಿದೆ. ಮೊದಲ ಮೂರು ಯೋಜನೆಗಳ ಕಾರ್ಯಕ್ರಮ ಪಟ್ಟಿಯನ್ನು ನಾವು ಪರಿಶೀಲನೆ ಮಾಡುವಾಗ ಅದಕ್ಕೋಸ್ಕರವಾಗಿ ವೆಚ್ಚವಾದಂಥ ಹಣ, ಅದರಿಂದ ಬಂದಂಥ ಲಾಭ ಇವನ್ನೆಲ್ಲ ಗಮನಿಸಿದರೆ ಯಾವ ಉದ್ದೇಶದಿಂದ ಸರ್ಕಾರ ಈ ಯೋಜನೆಗಳನ್ನು ಕಾರ್ಯಗತ ಮಾಡಿತೋ ಅದರ ಪ್ರಯೋಜನವನ್ನು ಪಡೆಯತಕ್ಕ ಜನತೆಗೆ ಸಂತೃಪ್ತಿಯಾಗಿಲ್ಲ, ಲಾಭವಾಗಿಲ್ಲ. ಯೋಜನೆಗಳನ್ನು ಮಾಡತಕ್ಕ ಸರ್ಕಾರ ವ್ಯಾಪ್ತಿ, ಅದರ ಪ್ರಯೋಜನ ಜನಗಳಿಗೆ ಲಾಭವಾಗಿದೆಯೋ ಇಲ್ಲವೋ ಎನ್ನುವುದರ ಕಡೆಗೆ ಗಮನಿಸಬೇಕಾದ್ದು ಅತ್ಯಾವಶ್ಯಕ. ಮಹಾರಾಜರ ಕಾಲದಲ್ಲಿ ಸರ್ಕಾರದಲ್ಲಿ ಯಾವ ಪದ್ಧತಿ ಇತ್ತೊ ಆ ಪದ್ಧತಿಯನ್ನು ಮಾರ್ಪಾಟು ಮಾಡಿ ಕೆರೆಗಳನ್ನು ಕಟ್ಟುವುದಕ್ಕೆ, ಬಾವಿಗಳನ್ನು ತೋಡುವುದಕ್ಕೆ, ರಸ್ತೆಗಳನ್ನು ಮಾಡುವುದಕ್ಕೆ ಪ್ರತ್ಯೇಕ ಇಲಾಖೆಗಳನ್ನು ಮಾಡಿದ್ದಾರೆಯೇ ಹೊರತು ಸರ್ಕಾರದಿಂದ ಯಾವರೀತಿಯ ಪ್ರಯೋಜನ ಲಭ್ಯವಾಗಬೇಕಾಗಿತ್ತೋ ಅದು ತಹಲ್‌ವರೆಗೂ ಆಗಿಲ್ಲ. ಯೋಜನೆಗಳನ್ನು ಕಾರ್ಯಗತ ಮಾಡುವ ಶಕ್ತಿ ಕಡಮೆ ಇದ್ದರೆ, ಈಗಿರುವ ಪದ್ಧತಿಯನ್ನು ಬದಲಾವಣೆ ಮಾಡಿ ಆಯಾ ತಾಲ್ಲೂಕುಗಳಿಗೆ ಅದರ ರೂಪ ರೇಖೆಗಳನ್ನು ಬದಲಾಯಿಸುವುದರ ಮೂಲಕ, ಪೋಲಾಗತಕ್ಕ ಹಣವನ್ನು ಶೇಖರಿಸಿ ಕೆಲಸಕಾರ್ಯಗಳಿಗೆ ಉಪಯೋಗಿಸತಕ್ಕದು ನ್ಯಾಯವಾಗಿದೆ. ರೆವಿನ್ಯೂ ಸಬ್ ಡಿವಿಜನ್ ಆಫೀಸರುಗಳ ಅಗತ್ಯವಿಲ್ಲ, ಅದು ಬರೀ ಟಪ್ಪಾಲು ಆಫೀಸಾಗಿದೆ, ಸಂಸ್ಥಾನಾಮಳೆ ಅದನ್ನು ತೆಗೆದುಹಾಕಿ ಎಂದು ಅನೇಕ ಸಲ ಈ ವೇದಿಕೆಯಿಂದ ನಾನು ಮತ್ತು ನನ್ನ ಸ್ನೇಹಿತರನೇಕರು ಹೇಳಿದ್ದೇವೆ. ಇದರಿಂದ ಲಾಭ ಅಥವಾ ಪ್ರಯೋಜನ ಎಷ್ಟರಮಟ್ಟಿಗೆ ಆಗಿದೆ ಎನ್ನುವುದನ್ನು ಮಾನ್ಯ ರೆವೆನ್ಯೂ ಮಂತ್ರಿಗಳು ಪರಿಶೀಲನೆ ಮಾಡಿ ಇನ್ನು ಮುಂದಾದರೂ ಆ ಹುದ್ದೆಗಳನ್ನು ತೆಗೆದುಹಾಗಿ, ಅನಾವಶ್ಯಕವಾಗಿ ಕಾಗದ ಪತ್ರಗಳ ವಿಲೇವಾರಿಯಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸಬೇಕು. ಸರ್ಕಾರ ಈ ಬಗ್ಗೆ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ.

ಅದೇ ರೀತಿಯಲ್ಲಿ ಡಿವಿಜನಲ್ ಕಮಿಷನರ ಹುದ್ದೆಗಳ ವಿಷಯದಲ್ಲಿಯೂ ಹೋದ ಸಾರಿ ಕೂಡ ಹೇಳಿದೆವು. ಮೊದಲು ಇದ್ದ ಪದ್ಧತಿಯನ್ನು ಪುನಃ ಜಾರಿಗೆ ತರಬೇಕು, ಡಿವಿಜನಲ್ ಕಮಿಷನರ ವ್ಯಾಪ್ತಿಯಲ್ಲಿ ನಾಲ್ಕು ಅಥವಾ ಐದು ಜಿಲ್ಲೆಗಳಿರುತ್ತವೆ. ಅವರಿಗೆ ಕೊಡತಕ್ಕ ಹಣ ಸರಿಯಾಗಿ ವಿನಿಯೋಗವಾಗುವುದಿಲ್ಲ ಎನ್ನುವುದನ್ನು ನಾನು ಮನಗಂಡಿದ್ದೇನೆ. ನನ್ನ ಮಾನ್ಯ ಸ್ನೇಹಿತರು ಅನೇಕರು ಈ ಸಭೆಯಲ್ಲಿ ಈ ಬಗ್ಗೆ ಹೇಳಿರಬಹುದು ಎಂದು ಭಾವಿಸುತ್ತೇನೆ. ಇನ್ನು ಮೇಲಾದರೂ ಈಗಿರುವ ಡಿವಿಜಿನಲ್ ಕಮಿಷನರ ಆಫೀಸುಗಳನ್ನು ತೆಗೆದು ಹಾಕಿ ಮೊದಲು ಇದ್ದ ರೀತಿಯಲ್ಲಿ ಮಾಡಿದರೆ ಜನತೆಗೆ ಲಾಭವಾಗುತ್ತದೆ.

ಸ್ವಾಮಿ, ಯೋಜನೆಗಳನ್ನು ಮಾಡಿ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸಿ ಸರ್ಕಾರಕ್ಕೆ ಅನಾವಶ್ಯಕವಾಗಿ ಹಣ ವೆಚ್ಚವಾಗುತ್ತಿದೆಯೇ ಹೊರತು ಕಾರ್ಯ ಮಾತ್ರ ಮೊದಲು ಇದ್ದ ಹಾಗೆಯೇ ಇದೆ. ನಾನು ಸುಮಾರು 30–40 ವರ್ಷಗಳಿಂದಲೂ ಶಾಸಕನಾಗಿ, ಪ್ರಜಾಪ್ರತಿನಿಧಿ ಸಭೆಯ ಸದಸ್ಯನಾಗಿ, ಕೆಲಸ ಮಾಡಿ ಜನತೆಯ ಜೊತೆಗೆ ಮತ್ತು ಸರ್ಕಾರದಿಂದ ಪ್ರಯೋಜನವಾಗತಕ್ಕ ಅನೇಕ ಇಲಾಖೆಗಳ ಜೊತೆಯಲ್ಲಿ ಇದ್ದು, ಅದರ ಲಾಭ ಜನತೆಗೆ, ಆಗಬೇಕು ಎನ್ನುವ ಪ್ರಯತ್ನ ಮಾಡಿದರೂ, ಸರ್ಕಾರ ಎಷ್ಟು ಕಷ್ಟಪಟ್ಟರೂ ಲಾಭ ಮಾತ್ರ ಜನತೆಗೆ ಆಗಿಲ್ಲ. ಡಿವಿಜಿನಲ್ ಕಮಿಷನರ ಹುದ್ದೆ, ಸಬ್ ಡಿವಿಜಿನಲ್ ಕಮಿಷನರ ಹುದ್ದೆ ಮತ್ತು ರಾಷ್ಟ್ರೀಯ ವಿಸ್ತರಣಾ

ಯೋಜನೆ ಎಂದು ಏನು ಮಾಡಿದ್ದಾರೆ ಅದನ್ನು ತೆಗೆದುಹಾಕಬೇಕೆಂದು ಹೇಳಿದ್ದರೂ ಅವೆಲ್ಲ ಹಾಗೆಯೇ ಉಳಿದಿವೆ. ಬಾವಿ ತೋಡತಕ್ಕ ಕೆಲಸ, ರಸ್ತೆ ಮಾಡತಕ್ಕ ಕೆಲಸ ಇಂಥವನ್ನೆಲ್ಲ ತಾಲ್ಲೂಕು ಬೋರ್ಡಿಗೆ ಒಪ್ಪಿಸಿದ್ದಾರೆ. ಹೀಗಿರುವಾಗ ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ ಆಗಬೇಕಾದ ಕಾರ್ಯಗಳು ಯಾವುವು, ಅದರ ಬಗ್ಗೆ ಎಷ್ಟು ಹಣ ಖರ್ಚಾಗಿದೆ, ಏನೇನು ಕೆಲಸಕಾರ್ಯಗಳಾಗಿವೆ ಎನ್ನುವುದನ್ನು ನೋಡುವುದಾದರೆ ಖರ್ಚು ಮಾತ್ರ ಹೆಚ್ಚಾಗಿ ಆಗಿದೆಯೇ ಹೊರತು ಜನತೆಗೆ ಲಾಭ ಮಾತ್ರ ಆಗಿಲ್ಲ ಎಂದು ಹೇಳಬಯಸುತ್ತೇನೆ. ಇಂಥಾ ಅನಾವಶ್ಯಕವಾದ ಇಲಾಖೆಗಳನ್ನು ಮತ್ತು ನೌಕರರನ್ನು ಇಟ್ಟುಕೊಂಡು ಸಂಬಳ ರೂಪದಲ್ಲಿ ವಿಶೇಷವಾಗಿ ಹಣವನ್ನು ಖರ್ಚುಮಾಡುವುದರಲ್ಲಿ ನಾವು ಮಗ್ನರಾಗಿದ್ದೇವೆ. ಇನ್ನಾದರೂ ಸರ್ಕಾರದವರು ಇದನ್ನೆಲ್ಲಾ ಕೂಲಂಕಷವಾಗಿ ವಿಚಾರ ಮಾಡಿ ಅನಾವಶ್ಯಕವಾದ ಇಲಾಖೆಗಳ ಹಾಗೂ ನೌಕರರ ಸಂಖ್ಯೆಗಳನ್ನು ರದ್ದುಮಾಡಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯಾ ಇಲಾಖೆಗೆ ಬಂದರೆ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿ ಪದವೀಧರರಾಗಿ ರುವಂಥ 4–5 ಸಾವಿರ ಜನರು ಕೆಲಸಗಳಿಲ್ಲದೆ ದೇಶದಲ್ಲಿ ಅಲೆಯುತ್ತಿದ್ದಾರೆ. ಅವರಿಗೆ ಮಾಡುವುದಕ್ಕೆ ಮನೆಯಲ್ಲೂ ಕೆಲಸವಿಲ್ಲ, ಸರ್ಕಾರದವರಲ್ಲೂ ಕೆಲಸಗಳಿಲ್ಲ. ಅಂದರೆ ಅವರು ಆ ಓದನ್ನು ಓದಿ ಏನು ಮಾಡಬೇಕು? ಅವರ ವಿದ್ಯಾಭ್ಯಾಸದ ಬಗ್ಗೆ ಅವರ ತಂದೆ ತಾಯಿಗಳು ಮಾಡಿದ ಸಾಲ ಸೋಲಗಳನ್ನು ಇವರು ತೀರಿಸುವುದಾದರೂ ಹೇಗೆ? ಇವರು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಹೇಳಿದ್ದಾರೆ. ಆದುದರಿಂದ ನಮ್ಮ ವಿದ್ಯಾಭ್ಯಾಸ ಪದ್ಧತಿಯನ್ನು ನಮ್ಮ ದೇಶಕ್ಕೆ ಅನುಕೂಲವಾಗತಕ್ಕ ರೀತಿಯಲ್ಲಿ ಮಾರ್ಪಾಡನ್ನು ಮಾಡಬೇಕಾದ್ದು ಅಗತ್ಯ. ನಮ್ಮ ದೇಶ ಮುಖ್ಯವಾಗಿ ವ್ಯವಸಾಯ ಪ್ರಧಾನವಾದದ್ದು. ನಮ್ಮ ದೇಶದ ಮಕ್ಕಳಿಗೆ ಈ ವಿಷಯದಲ್ಲಿ ಹೆಚ್ಚಿನ ಪರಿಶ್ರಮವಿರಬೇಕಾದ್ದು ಅಗತ್ಯ. ಆದುದರಿಂದ ಸರ್ಕಾರದವರು ನಮ್ಮ ದೇಶದ ಮಕ್ಕಳಿಗೆ ಯಾವ ಭೂಮಿಗೆ ಯಾವ ಗೊಬ್ಬರ ಬೇಕು, ಯಾವ ಬೆಳೆಯನ್ನು ಯಾವ ಭೂಮಿಯಲ್ಲಿ ಇಟ್ಟರೆ ಉತ್ತಮ ಬೆಳೆಯಾಗುತ್ತದೆ ಎಂಬ ವಿದ್ಯೆಯನ್ನು ಬೋಧಿಸಬೇಕಾದ್ದು ಅಗತ್ಯ; ಮತ್ತು ಸಾಧುವಾದದ್ದು.

ಇನ್ನು ಮೆಡಿಕಲ್ ವಿದ್ಯಾಭ್ಯಾಸಕ್ಕೆ ಬಂದರೆ—ಇಲ್ಲಿ ಸರ್ಕಾರದವರು ಕೊಡತಕ್ಕ ಉಚಿತ ವಿದ್ಯಾಭ್ಯಾಸವನ್ನು ಪಡೆದು ವೈದ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಕೂಡಲೆ ಪರದೇಶಕ್ಕೆ ಹೋಗಿ ಅಲ್ಲಿ ಹೆಚ್ಚಿನ ವ್ಯಾಸಂಗ ಮಾಡಿ ಅವರು ತಮ್ಮ ಆದಾಯವನ್ನು ಹೆಚ್ಚು ಮಾಡಿಕೊಳ್ಳುವ ಉದ್ದೇಶದಿಂದ ಪರದೇಶಗಳಲ್ಲೇ ಉಳಿದು ಬಿಡುತ್ತಾರೆ. ಇದರಿಂದ ರಾಜ್ಯಕ್ಕೆ ಬಹಳ ನಷ್ಟವಾಗುತ್ತಿದೆ. ಇಲ್ಲಿ ಸರ್ಕಾರದವರು ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿದಾಗ್ಯೂ ಅಲ್ಲಿ ಕೆಲಸ ಮಾಡುವುದಕ್ಕೆ ಡಾಕ್ಟರುಗಳೇ ಇರುವುದಿಲ್ಲ. ಇಂಥ ತೊಂದರೆಗಳನ್ನು ನಾವು ಸರ್ಕಾರದವರ ಗಮನಕ್ಕೆ ಪದೇ ಪದೇ ತರುತ್ತಲೇ ಇದ್ದೇವೆ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ತುಂಬಾ ಎಚ್ಚರಿಕೆಯನ್ನು ವಹಿಸಬೇಕೆಂದು ಸೂಚನೆ ಮಾಡುತ್ತೇನೆ.

ಇನ್ನು ರಾಜ್ಯದಲ್ಲಿ ಕೋರ್ಟುಗಳ ವಿಚಾರಕ್ಕೆ ಬಂದರೆ–ನಾವು ಮಾಗಡಿ ತಾಲ್ಲೂಕಿಗೆ ಒಂದು ಮುನಿಸಿಫ್ ಮ್ಯಾಜಿಸ್ಟ್ರೇಟರ ಕೋರ್ಟ್ ಬೇಕೆಂದು ಬಹಳ ಹಿಂದಿನಿಂದಲೂ ಸರ್ಕಾರಕ್ಕೆ ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಇದೇ ಸಂಬಂಧದಲ್ಲಿ ಹಿಂದೆ ಸರ್ಕಾರದವರು ಜಸ್ಟೀಸ್ ಮಲ್ಲಪ್ಪ ಕಮಿಟಿಯೊಂದನ್ನು ಮಾಡಿದ್ದರು. ಅದು ಸರ್ಕಾರಕ್ಕೆ ತನ್ನ ವರದಿಯನ್ನು ಒಪ್ಪಿಸಿ ಬಹಳ ಕಾಲ ವಾಯಿತು. ಆದರೆ ಆ ವರದಿಯ ಪ್ರಕಾರ ಮಾಗಡಿಗಿನ್ನೂ ಕೋರ್ಟು ಬರಲಿಲ್ಲ. ಆದರೆ ಅದರ ಪಕ್ಕದ ಕುಣಿಗಲ್ ತಾಲ್ಲೂಕಿಗೆ ಅಲ್ಲಿ ಅದರ ಅಗತ್ಯ ಇತ್ತೇ ಇಲ್ಲವೇ ಎಂಬುದನ್ನೂ ಕೂಡ ವಿಚಾರ ಮಾಡದೆ ಅಲ್ಲಿಗೆ ಕೋರ್ಟನ್ನು ಮಂಜೂರು ಮಾಡಿದ್ದಾರೆ. ಆ ವರದಿಯಲ್ಲಿ ನಿರ್ದಿಷ್ಟವಾಗಿ ಇಂಥಿಂಥ ಕಡೆಗಳಲ್ಲೇ ಕೋರ್ಟುಗಳನ್ನು ಸ್ಥಾಪಿಸಬೇಕೆಂದು ಹೇಳಿದ್ದರೂ ಸರ್ಕಾರದವರು ಅದಕ್ಕೆ ಗಮನ ಕೊಡದೆ ಕೆಲಸ ಮಾಡುತ್ತಿದ್ದಾರೆ. ಮಾಗಡಿ ತಾಲ್ಲೂಕಿನಲ್ಲಿ 2 ಲಕ್ಷ ಜನಸಂಖ್ಯೆ ಇವೆ. ಅಲ್ಲಿ 2 ಚುನಾವಣಾ ಕ್ಷೇತ್ರಗಳಿವೆ. ಆದರೆ ಈಗ ಆ ಮಾಗಡಿಯ ಜನರು ಕೆಲವು ಕೇಸುಗಳಿಗೆ ರಾಮ ನಗರಕ್ಕೂ ಇನ್ನು ಒಂದು ಬಗೆಯ ಕೇಸುಗಳಿಗೆ ಅಂದರೆ ಸಿವಿಲ್ ಸ್ವಭಾವದ ಕೇಸುಗಳಿಗೆ ಬೆಂಗಳೂರಿಗೂ ಬರಬೇಕಾಗಿದೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಸರ್ಕಾರದವರು ಈ ವಿಚಾರವನ್ನು ಪರಿಶೀಲನೆ ಮಾಡಿ ಮಾಗಡಿ ಜನರ ಬಹುದಿನಗಳ ಬೇಡಿಕೆಯನ್ನು ಈಡೇರಿಸುತ್ತಾರೆಂದು ನಾನು ನಂಬಿದ್ದೇನೆ.

ಅಧ್ಯಕ್ಷರು.—ನಿಮ್ಮ ವೇಳೆ ಮುಗಿಯುತ್ತಾ ಬಂದಿದೆ...............

ಶ್ರೀ ಸೋಲೂರು ಸಿದ್ದಪ್ಪ.—ನಾನು ಇಲ್ಲಿ ಕೆಳೆದ 12 ದಿನಗಳಿಂದಲೂ ತಪಸ್ಸನ್ನು ಮಾಡುತ್ತ ಕುಳಿತಿದ್ದೇನೆ. ನನಗೆ ಸಾಕಷ್ಟು ಅವಕಾಶವನ್ನು ತಾವು ಕೊಡಬೇಕು ಇಲ್ಲದಿದ್ದರೆ ನನ್ನ ತಪಸ್ಸಿನ ಫಲ ತಮಗೇ ಪ್ರೀತಿಯಾಗಬೇಕು.

ಈ ಕೋರ್ಟಿನ ವಿಚಾರದಲ್ಲಿ ಅನ್ಯಾಯ ಮಾಡಿದಂತೆ ಮಾರ್ಕೆಟಿಂಗ್ ವಿಚಾರದಲ್ಲೂ ಹಾಗೇ ಮಾಡಿದ್ದಾರೆ. ಮಾಗಡಿಗೆ ಕೊಡಬೇಕಾಗಿದ್ದ ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ಮತ್ತೆ ಕುಣಿಗಲಿಗೇ ಕೊಟ್ಟಿದ್ದಾರೆ. ಅದೇನೂ ಒಂದು ದೊಡ್ಡ ವ್ಯಾಪಾರ ಕೇಂದ್ರವಲ್ಲ. ನಮ್ಮ ತಾಲ್ಲೂಕ್ ಬೆಂಗಳೂರು ತಾಲ್ಲೂಕಿಗೆ ಬಹಳ ಸಮೀಪದಲ್ಲಿದೆ. ಬೆಂಗಳೂರು ನಗರಕ್ಕೆ 10 ಮೈಲಿ ಫಾಸಲೆಯಲ್ಲೇ ನಮ್ಮ ತಾಲ್ಲೂಕ್ ಗಡೀ ಪ್ರಾರಂಭವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲೂ ಸರ್ಕಾರದವರು ಪುನರ್ವಿಮರ್ಶೆ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ನಾನು ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದೆ. ಅದಕ್ಕೆ ಉತ್ತರವೇ ಬರಲಿಲ್ಲ.

ಇನ್ನು ಗ್ರಾಮಾಂತರ ಪ್ರದೇಶಕ್ಕೆ ವಿದ್ಯಾಭ್ಯಾಸದ ಬಗ್ಗೆ ಒದಗಿಸಿರತಕ್ಕ ಹಣ ಸಾಲದು. ಅನೇಕ ಗ್ರಾಮಗಳಲ್ಲಿ ಶಾಲಾಕಟ್ಟಡಗಳಿಲ್ಲ. ಆದ್ದರಿಂದ ಹೆಚ್ಚಿನ ಹಣವನ್ನು ಒದಗಿಸಬೇಕು.

ಇನ್ನು ಗ್ರಾಮಾಂತರ ಪ್ರದೇಶದ ಜನರಿಗೆ ಕುಡಿಯುವ ನೀರಿಗೂ ಬಹಳ ತೊಂದರೆ ಇದೆ. ಈ ತೊಂದರೆಯನ್ನು ಬರುವ ವರ್ಷದೊಳಗಾಗಿ ಪರಿಹರಿಸುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ. ಇದನ್ನು ಬೇಗ ಕಾರ್ಯಗತ ಮಾಡಬೇಕು. ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್.

† ಶ್ರೀ ಹಂಜಿ ಶಿವಣ್ಣ (ತರೀಕೆರೆ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥಮಂತ್ರಿಗಳು ಮಂಡಿಸಿರತಕ್ಕಂಥ ಆಯವ್ಯಯ ಪತ್ರವನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಮ್ಮ ದೇಶದಲ್ಲಿ 22 ವರ್ಷಗಳ ಕಾಲದಿಂದಲೂ ಕಾಂಗ್ರೆಸ್ಸಿನವರು ಆಡಳಿತ ನಡೆಸುತ್ತಾ ಇದ್ದಾರೆ. ಆದರೂ ಜನಸಾಮಾನ್ಯರಿಗೆ ಏನೂ ಪ್ರಯೋಜನವಾಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಕಾಂಗ್ರೆಸ್ಸಿನ ಆಡಳಿತ ಬಂದಾಗಿನಿಂದಲೂ ಜನಸಾಮಾನ್ಯರಿಗೆ ಯಾವಾಗಲೂ ಒಂದಲ್ಲ ಒಂದು ಸಮಸ್ಯೆಯನ್ನು ತಂದೊಡ್ಡುತ್ತಿದ್ದಾರೆಯೇ ಹೊರತು, ಅವರ ಕಷ್ಟ ಸುಖಗಳನ್ನು ನಿವಾರಿಸುವುದರಲ್ಲಿ, ಸುಧಾರಣೆ ಮಾಡುವುದರಲ್ಲಿ ಏನೂ ಪ್ರಯೋಜನವಾಗಿಲ್ಲ ಎಂದು ಹೇಳುತ್ತೇನೆ. ಅವರಲ್ಲಿ ಒಂದು ನೀತಿಯಿಲ್ಲ. ಅವರ ಮನೋಭಾವನೆ ಏನು ಇದೆ ಎಂದರೆ, ದೇಶವೇನಾದರೂ ಆಗಲಿ, ತಮ್ಮ ಅಧಿಕಾರವನ್ನು ಚಲಾಯಿಸಿಕೊಂಡು ಹೋಗಬೇಕು. ತಮ್ಮ ಅಧಿಕಾರ ಇರಬೇಕು ಎನ್ನುವ ಕಡೆಗೆ ಅವರ ಗಮನ ಹರಿದಿದೆ. ನಮ್ಮ ಇಂಡಿಯಾ ದೇಶದಲ್ಲಿ ಸಿಂಡಿಕೇಟ್ ಮತ್ತು ಇಂಡಿಕೇಟ್ ಎಂದು ಎರಡು ಭಾಗ ಮಾಡಿಕೊಂಡಿದ್ದಾರೆ. ಸಿಂಡಿಕೇಟ್‌ನವರನ್ನು ಕಂಡರೆ ಇಂಡಿಕೇಟ್‌ನವರಿಗೆ ಆಗುವುದಿಲ್ಲ. ದೇಶ ನಮ್ಮ ಸ್ವತ್ತು ಎಂದು ಬಿಟ್ಟುಕೊಡುವುದಿಲ್ಲ. ಅವರೆಲ್ಲ ಒಂದಲ್ಲ ಒಂದು ರೀತಿಯಲ್ಲಿ ನಾವು ಅಧಿಕಾರದಲ್ಲಿ ಅಂಟಿಕೊಂಡೇ ಇರಬೇಕು ಎನ್ನುವ ವಾದವನ್ನು ಹೂಡುತ್ತಿದ್ದಾರೆ. ಈ ರೀತಿಯಿಂದ ದೇಶ ಅಭಿವೃದ್ಧಿ ಕಡೆಗೆ ಗಮನ ಕೊಡುತ್ತಾ ಇಲ್ಲ.

ಇನ್ನೊಂದು ವಿಷಯ ಈಗತಾನೇ ಮಾನ್ಯ ಸೋಲೂರು ಸಿದ್ದಪ್ಪನವರು ಅಧಿಕಾರಿಗಳ ಸಂಬಳ ಸಾರಿಗೆಗಳ ಬಗ್ಗೆ ಹೇಳಿದ್ದಾರೆ. ಈ ಅಧಿಕಾರಿಗಳ ಸಂಬಳ ಸಾರಿಗೆಗಳನ್ನು ಹೆಚ್ಚುಮಾಡುವುದಕ್ಕೆ ಟ್ಯಾಕ್ಸ್‌ಗಳನ್ನು ಹೆಚ್ಚಿಸಿದ್ದಾರೆಯೇ ಹೊರತು ಅವರಿಗೆ ಸಂಬಳ ಕೊಟ್ಟಮೇಲೆ ಅದಕ್ಕೆ ತಕ್ಕ ಪ್ರತಿಫಲವಾದಂಥ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಶಕ್ತಿ ಇಲ್ಲ. ಆದ್ದರಿಂದ ದೇಶಕ್ಕೆ ಬೇಕಾದಷ್ಟು ಗಂಡಾಂತರ ಒದಗಿದೆ ಎಂದು ನಾನು ಹೇಳಬಯಸುತ್ತೇನೆ. ನಿಜವಾಗಿಯೂ ನಮ್ಮ ದೇಶವನ್ನು ಈ ಕಷ್ಟದಿಂದ ಉಳಿಸಬೇಕಾಗಿದ್ದರೆ ನಾವು ಆ ಅಧಿಕಾರಿಗಳಿಂದ ಏನು ಕೆಲಸವನ್ನು ನಿರೀಕ್ಷಿಸಿದ್ದೇವೆಯೋ ಅಷ್ಟು ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ತಿಳಿಸಬಯಸುತ್ತೇನೆ.

ಇನ್ನು ಹಿಂದುಳಿದವರ ಬಗ್ಗೆ ಅವರ ಅಭಿವೃದ್ಧಿಗಾಗಿ ಕೆಲವು ಅಂಶಗಳನ್ನು ತಿಳಿಸಿದ್ದಾರೆ. ಇದರ ಬಗ್ಗೆ ಒಂದು ವಿಚಾರ ನನ್ನ ತಾಲ್ಲೂಕಿನಲ್ಲಿ ನಡೆದಂಥಾದ್ದನ್ನು ಇಲ್ಲಿ ತಿಳಿಸುತ್ತೇನೆ. ಇನ್ನು ಇಡೀ ದೇಶದಲ್ಲಿ ಎಷ್ಟು ನಡೆಯುತ್ತಾ ಇದೆ ಎಂಬುದನ್ನು ತಾವೇ ಊಹಿಸಬೇಕು. ಹಿಂದುಳಿದ ಜನರಿಗೆ ಸರ್ಕಾರದವರೇ ಟಿಂಬರ್ ಕೊಡುತ್ತಿದ್ದಾರೆ. ಅದನ್ನು ತೆಗೆದುಕೊಂಡು ಹೋಗಿ ದಾರಿ ಮಧ್ಯದಲ್ಲೇ ಮಾರಿಕೊಂಡಿದ್ದಾರೆ. ಇದು ತರೀಕೆರೆ ತಾಲ್ಲೂಕಿನಲ್ಲಿ ನಡೆದ ವಿಚಾರ. ಇದರ ಬಗ್ಗೆ ಮಂತ್ರಿಗಳಿಗೆ ಅರ್ಜಿಯನ್ನೂ ಕೊಟ್ಟಿದ್ದೇನೆ. ಇದೇ ರೀತಿ ನಾಟಾಗಳನ್ನೂ ಪರಭಾರೆ ಮಾಡುತ್ತಿದ್ದಾರೆ. ಇವುಗಳ ಬಗ್ಗೆ ಏನೊಂದು ಕಾರ್ಯಕ್ರಮವನ್ನೂ ಇದುವರೆಗೆ ತೆಗೆದುಕೊಂಡಿಲ್ಲ. ಹಿಂದೆ ಮಲೆನಾಡಿ

ನಲ್ಲಿ ಮಾಫಿ ಪಾಸು ಕೊಡುತ್ತಾ ಇದ್ದರು, ಅದನ್ನೂ ಪರಭಾರೆ ಮಾಡುತ್ತಿದ್ದರೂ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಈ ಒಂದು ತಾಲ್ಲೂಕಿನಲ್ಲಿ ಈ ರೀತಿ ಅವ್ಯವಸ್ಥೆ ನಡೆದರೆ ಇನ್ನು ನಮ್ಮ ಇಡೀ ದೇಶದ ಆಡಳಿತ ಎಷ್ಟರಮಟ್ಟಿಗೆ ನಡೆಯುತ್ತದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಅಲ್ಲದೆ ಹಿಂದುಳಿದವರಿಗೆ ಭೂಮಿ ಬೇರೆ ಕೊಡುತ್ತಾ ಇದ್ದಾರೆ. ಅದನ್ನೂ ಬೇರೆಯವರಿಗೆ ಮಾರುತ್ತಾ ಇದ್ದಾರೆ. ಇದರ ಬಗ್ಗೆ ಮಾನ್ಯ ರೆವಿನ್ಯೂ ಸಚಿವರಿಗೆ ಬಹಳ ಸಾರಿ ಬರೆದುಕೊಟ್ಟಿದ್ದೇನೆ. ಹಿಂದೆ ಕೊಟ್ಟಿರತಕ್ಕಂಥ ಭೂಮಿಯಲ್ಲಿ 4 ಆಣೆ ಭಾಗವನ್ನು ಕೂಡ ಉಳಿಸಿಕೊಂಡಿಲ್ಲ. ಈ ರೀತಿ ನಡೆದರೂ ಅವರ ಮೇಲೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಈ ಜಮೀನುಗಳನ್ನು ಶ್ರೀಮಂತರೇ ತೆಗೆದುಕೊಂಡಿದ್ದಾರೆ. ಆದುದರಿಂದ ಇದನ್ನು ತನಿಖೆ ಮಾಡುವುದರಲ್ಲಿ ಉಪಯುಕ್ತತೆ ಇದೆ ಎಂದು ಹೇಳುತ್ತೇನೆ. ಇದನ್ನು ತನಿಖೆ ಮಾಡಬೇಕು. ತನಿಖೆ ಮಾಡದಿದ್ದರೆ ದೇಶಕ್ಕೆ ಹಾನಿ ಮಾಡಿದ ಹಾಗಾಗುತ್ತದೆ ಎಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಇನ್ನು ನೀರಾವರಿ ವಿಷಯದ ಬಗ್ಗೆ ಹೇಳುವುದಾದರೆ ದೇಶದಲ್ಲಿ ಅನ್ಯಾಯವಾಗುತ್ತಾ ಇದೆ ಎಂದು ಹೇಳುತ್ತೇನೆ. ಸುಮಾರು 10 ವರ್ಷದಿಂದಲೂ ಸಣ್ಣ ಪುಟ್ಟ ಕೆರೆ ಕಾಲುವೆಗಳನ್ನು ಮಾಡುತ್ತಾ ಇಲ್ಲ. ಎಸ್ಟಿಮೇಟ್ ಮಾಡಿ ಮಂಜೂರಾತಿ ಆದರೂ ಕೆಳಗಿನಿಂದ ಮೇಲಕ್ಕೆ, ಮೇಲಿನಿಂದ ಕೆಳಗಿನ ಆಫೀಸಿನವರಿಗೆ ಓಡಾಡುವ ಪತ್ರವ್ಯವಹಾರದಿಂದ ಯಾವ ಕೆಲಸವೂ ಕಾರ್ಯಗತವಾಗುವುದಿಲ್ಲ ಎಂದು ಹೇಳುತ್ತೇನೆ. ಆದುದರಿಂದ ಎಸ್ಟಿಮೇಟ್ ಆಗಿರುವ ಕೆರೆ, ಕಟ್ಟೆ, ಕಾಲುವೆಗಳ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಸೊಸೈಟಿಗಳ ವಿಷಯ ಹೇಳಬೇಕಾಗಿದೆ. ಈ ಸೊಸೈಟಿಗಳು ರಾಜಕೀಯ ವಿಷಯದಲ್ಲಿ ತಲೆಹಾಕಿ ಒಂದು ಗರಡಿ ಮನೆ ಹಾಗೆ ಮಾಡಿಕೊಂಡಿವೆ. ಆದುದರಿಂದ ಇದರಲ್ಲಿ ರಾಜಕೀಯ ತರದೆ, ರಾಜಕೀಯದಿಂದ ದೂರ ಇರಬೇಕೆಂದು ಹೇಳುತ್ತೇನೆ.

ಇನ್ನು ರೆವಿನ್ಯೂ ಅಧಿಕಾರಿಗಳು ಭೂಮಿಯನ್ನು ಹಂಚುವುದನ್ನು ನೋಡಿದರೆ ಅಧಿಕಾರಿಗಳಿಗೆ ಸಂಬಂಧಿಕರಿಗೆ ಮಾತ್ರ ಸಿಕ್ಕುತ್ತದೆ. ಬೇರೆ ಯಾರಿಗೂ ಸಿಕ್ಕುವುದಿಲ್ಲ. ಅಲ್ಲದೆ ಯಾರು ಸ್ವಲ್ಪ ಹೆಚ್ಚಿಗೆ ಲಂಚ ಕೊಡುತ್ತಾರೋ ಅಥವಾ ಒಳಗೊಳಗೆ ಏನೇನು ಬೇಕೋ ಅದನ್ನು ಸರಿಮಾಡಿಕೊಂಡವರಿಗೆ ಭೂಮಿ ಸಿಕ್ಕುತ್ತದೆ. ಆದುದರಿಂದ ಇದನ್ನು ಪರ್ಯಾಲೋಚನೆ ಮಾಡಬೇಕು ಎಂದು ಹೇಳುತ್ತೇನೆ. ಬೇಕಾದರೆ ಈ ರೀತಿ ನಡೆಯುವುದನ್ನು ತೋರಿಸುತ್ತೇನೆ. ಒಬ್ಬ ಮನುಷ್ಯ 10 ಎಕರೆ ಭೂಮಿಯನ್ನು ತೆಗೆದುಕೊಂಡು ಅನಂತರ ಅದನ್ನು 1 ಲಕ್ಷ 10 ಸಾವಿರ ರೂಪಾಯಿಗೆ ಮಾರಿಕೊಂಡು ಅದಕ್ಕೆ ಯಾವ ರೀತಿಯಾಗಿ ರಿಕಾರ್ಡ್ ಬಿಲ್ಟ್ ಅಪ್ ಆಗಬೇಕೋ ಆ ರೀತಿ ಮಾಡಿಸಿಕೊಂಡಿದ್ದಾನೆ. ದೇಶದಲ್ಲಿ ಈ ರೀತಿ ಅನ್ಯಾಯಗಳು ಹೆಚ್ಚುತ್ತಿದೆ. ಇದನ್ನು ನೋಡಿ ದಕ್ಷತೆಯಿಂದ ಕೆಲಸ ಮಾಡದೇ ಹೋದರೆ ದೇಶಕ್ಕೆ ಗಂಡಾಂತರವಾಗುತ್ತದೆ ಎಂದು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇದರಿಂದಾಗಿ ದೇಶದಲ್ಲಿ ಸೋಮಾರಿಗಳ ಸಂತೆ ಹೆಚ್ಚುತ್ತಿದೆ. ಕಷ್ಟಪಡತಕ್ಕಂಥ ಜನರಿಗೆ ಹೆಚ್ಚು ಸೌಕರ್ಯ ಸಿಕ್ಕುವುದಿಲ್ಲ. ಮೋಸ ಮಾಡತಕ್ಕಂಥವರಿಗೆ, ದಳ್ಳಾಳಿ ಕೆಲಸ ಮಾಡಿಕೊಂಡಿದ್ದವರಿಗೆ, ಹೆಚ್ಚು ಸಂಪಾದನೆ ಮಾಡಿಕೊಂಡಿದ್ದವರಿಗೆ ಬೆಂಗಳೂರಿನಲ್ಲಿ ಮನೆ ಕಟ್ಟಿಸಿಕೊಟ್ಟಿದ್ದಾರೆ. ಬೇಕಾದಷ್ಟು ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ.

ಇನ್ನೊಂದು ವಿಷಯ ಹೇಳುತ್ತೇನೆ. ನಮ್ಮ ಕೈಗಾರಿಕಾ ಮಂತ್ರಿಗಳು ಇಲ್ಲಿರುವುದರಿಂದ ಅವರ ಗಮನಕ್ಕೂ ತರಬಯಸುತ್ತೇನೆ. ಕಬ್ಬಿಣದ ಕಾರ್ಖಾನೆಯಿಂದ ದೇಶಕ್ಕೆ ಎಷ್ಟು ಕೋಟಿ ರೂಪಾಯಿಗಳು ಹಾಳಾಗುತ್ತದೆಯೋ ಗೊತ್ತಿಲ್ಲ. ಅದರಲ್ಲಿ ಒಂದೊಂದು ಅಂಶವನ್ನು ತೆಗೆದುಕೊಂಡರೆ ಬಹಳ ದುಃಖಕರವಾಗುತ್ತದೆ. ಪೈಪುಗಳನ್ನು ತರಿಸಬೇಕೆಂದು ಬರೀ ಲೆಕ್ಕ ತೋರಿಸುತ್ತಾರೆ. ಈ ರೀತಿಯಿಂದ ಒಬ್ಬನಿಗೆ 11 ಲಕ್ಷ ರೂಪಾಯಿಗೆ ಬೋಗಸ್ ರಶೀತಿ ಕೊಟ್ಟಿರುವುದನ್ನು ಇವೊತ್ತಿನವರೆಗೂ ಯಾರು ಏನು ಚಕ್ ಮಾಡಿಲ್ಲ. ಕೈಗಾರಿಕಾ ಮಂತ್ರಿಗಳಿಗೂ ಹೇಳಿದ್ದೇನೆ. ಮತ್ತೆ ಅಲ್ಲಿರುವ ಮ್ಯಾನೇಜಿಂಗ್ ಡೈರೆಕ್ಟರು ಯಾವಾಗಲೂ ಸೆಂಚುರಿ ಕಬ್ಲಿಗೆ ಹೊರಟುಹೋಗುತ್ತಾರೆ. ಯಾವಾಗಲೂ ಆಫೀಸಿನಲ್ಲಿ ಸಿಕ್ಕುವುದಿಲ್ಲ. ಏನು ಕೆಲಸ ಮಾಡಿಸಿಕೊಳ್ಳಬೇಕಾದರೂ ಸೆಂಚುರಿ ಕ್ಲಬ್‌ಗೆ ಹೋಗಬೇಕಾಗುತ್ತದೆ. ಅಲ್ಲದೆ ಆಫೀಸಿನಲ್ಲಿದ್ದರೆ ಇತರ ಕೆಲಸಗಾರರೂ ಕೂಡ ಸರಿಯಾಗಿ ಕೆಲಸ ಮಾಡುತ್ತಾರೆ. ಆಗ ಎಲ್ಲವೂ ಸರಿಹೋಗುತ್ತದೆ. ಆದುದರಿಂದ ಕಂಪನಿಯ ಪಕ್ಕದಲ್ಲೇ ಒಂದು ಸೆಂಚುರಿ ಕ್ಲಬ್‌ನ್ನು ಕಟ್ಟಿಸಿಕೊಟ್ಟುಬಿಟ್ಟರೆ ಎಲ್ಲವೂ ಸರಿಹೋಗುತ್ತದೆ. ಅವರಿಗೆ ಸರಿಯಾಗಿ ಹೊಂದಿಕೊಂಡು ಹೋಗಿ ಕೆಲಸ ಮಾಡಿಕೊಂಡು ಹೋಗಬೇಕಾಗುತ್ತದೆ. ಈ ವಿಷಯವನ್ನು 10 ವರ್ಷದಿಂದಲೂ ನೋಡುತ್ತಾ ಇದ್ದೇನೆ. ಮತ್ತು ಜನರಿಂದಲೂ ಕೇಳಿ ತಿಳಿದುಕೊಳ್ಳುತ್ತಿದ್ದೇನೆ. ಅಲ್ಲಿಯ ರೀತಿ ನೀತಿ ನೋಡಿದರೆ ಯಾವನು ಆನೆಸ್ಟ್ ಆಗಿ ಕೆಲಸ ಮಾಡುತ್ತಾನೋ

(ಶ್ರೀ ಹಂಜಿ ಶಿವಣ್ಣ)

ಅವನು ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಈಗ ಡ್ರೈರಕ್ಟರಿಗೆ ಬೇಕಾದ ಸೌಲಭ್ಯಗಳನ್ನು ಕೆಡುತ್ತಿದ್ದಾರೆ. ಯಾರು ಡ್ರೈರಕ್ಟರವರ ಸೇವೆಯನ್ನು ಮಾಡಿಕೊಂಡು ಹೋಗುತ್ತಾರೆ ಅವರಿಗೆ ಅನುಕೂಲವಾಗುತ್ತದೆ. ಸರಿಯಾಗಿ ಕಷ್ಟಪಟ್ಟು ಕೆಲಸಮಾಡುವವರು ತಲೆ ಎತ್ತುವುದಕ್ಕಾಗುವುದಿಲ್ಲ. ಈ ರೀತಿ ಆದರೆ ಇದನ್ನು ಸ್ಥಾಪನೆ ಮಾಡಿದಂಥ ನಮ್ಮ ಭಾರತರತ್ನರಾದಂಥ ಸರ್. ಎಂ. ವಿಶ್ವೇಶ್ವರಯ್ಯನವರ ಹೆಸರಿಗೆ ಒಂದು ಕಳಂಕವನ್ನು ತಂದಂತಾಗುತ್ತದೆ ಎಂದು ಹೇಳುತ್ತೇನೆ.

ಇನ್ನೊಂದು ವಿಷಯ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಮಾನ್ಯ ನಿಜಲಿಂಗಪ್ಪನವರು ಮೈಸೂರು ರಾಜ್ಯದಲ್ಲಿ ಒಂದು ಬೀಜವನ್ನು ಬಿತ್ತಿದ್ದಾರೆ. ಆ ಬೀಜದ ಮಾರ್ಗವೇ ಶ್ರೀಮಾನ್ ವೀರೇಂದ್ರ ಪಾಟೀಲರಿಗೂ ಬರುತ್ತದೆ ಎಂದು ಹೇಳಿದ್ದಾರೆ. ಈ ಒಂದು ಜಾತಿಯ ಮೂಲಬೀಜವನ್ನು ಬಿತ್ತಿರುವುದರಿಂದ ಶ್ರೀಮಾನ್ ವೀರೇಂದ್ರ ಪಾಟೀಲರು ದಕ್ಷವಂತರಾಗಿದ್ದಾರೆ. ಆದುದರಿಂದ ಅದನ್ನು ನಿರ್ಮೂಲ ಮಾಡಬೇಕು ಎಂದು ಹೇಳುತ್ತೇನೆ. ಅವರು ನೀತಿಯುತವಾಗಿ ಕೆಲಸ ಮಾಡಿದರೆ ಹೆಚ್ಚಿನ ಪ್ರಯೋಜನ ಬರುತ್ತದೆ ಎಂದು ನಾನು ಹೇಳುತ್ತೇನೆ. ಮೊನ್ನೆತಾನೆ ಉಜ್ಜಯನಿಯಲ್ಲಿ ನಡೆದಂಥ ಗಲಾಟೆ ಬಗ್ಗೆ ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ. ಅದಕ್ಕೆ ಉತ್ತರ ಹೇಳಿದ್ದಾರೆ. ಅದು ಗುಪ್ತ ರೀತಿಯಲ್ಲಿ ಘರ್ಷಣೆ ನಡೆದಿದೆ. ಈ ವಿಷಯದಲ್ಲಿ ಅವರು ನೀತಿವಂತರಾಗಿದ್ದರೆ ಸರಿಯಾದ ಒಂದು ವ್ಯವಸ್ಥೆಯನ್ನು ಮಾಡಿ ಇದನ್ನು ನಿರ್ಮೂಲ ಮಾಡಬೇಕು ಎಂದು ಹೇಳುತ್ತೇನೆ. ಮಾಡದಿದ್ದರೆ ನಿಜವಾಗಿಯೂ ಈ ಒಂದು ಪರಿಣಾಮ ಅಗಾಧವಾಗಿ ಆಗಬಹುದು ಎಂದು ತಿಳಿಸುತ್ತೇನೆ. ಮೊನ್ನೆ ಈ ಘಟನೆ ನಡೆದಾಗ ನಾನೂ ಅಲ್ಲಿ ಇದ್ದೆ. ಈ ಗಲಾಟೆಯಿಂದ ಅಲ್ಲಿ 2–3 ಸಾವಿರ ಜನಕ್ಕೆ ಅನಾಹುತವಾಗುತ್ತಿತ್ತು ಎಂದು ಹೇಳುತ್ತೇನೆ. ಅದನ್ನು ಒಪ್ಪುವುದಕ್ಕೆ ಕಾರಣವೂ ಇದೆ. ಇದೇತರಹ ನಡೆದರೆ ಇದು ಒಳ್ಳೆಯ ರೂಪದಲ್ಲಿರುವುದು ಹೋಗಿ ಕೊನೆಗೆ ಯಾವುದೋ ಒಂದು ಘಟ್ಟಕ್ಕೆ ಬಂದು ಮುಟ್ಟಬೇಕಾಗುತ್ತದೆ.

ಯಾರೂ ಕೂಡ ಹೇಡಿಗಳು ಎಂದು ಇಲ್ಲಿ ನಾನು ಹೇಳಲು ಇಷ್ಟಪಡುವುದಿಲ್ಲ. ಎಲ್ಲರಿಗೂ ನ್ಯಾಯ ದೊರೆಯುವಂತೆ ಮಾನ್ಯ ಶ್ರೀ ವೀರೇಂದ್ರ ಪಾಟೀಲರು ಕೆಲಸ ಮಾಡಲು ಪ್ರಯತ್ನ ಮಾಡುತ್ತಾರೆಂದು ನಾನು ಆಸೆಪಡುತ್ತೇನೆ. ನಾನು ಕೊಟ್ಟಿರುವ ಸೂಚನೆಗಳನ್ನು ಸರಕಾರದವರು ಗಮನಕ್ಕೆ ತೆಗೆದುಕೊಂಡು ಈ ದೇಶದಲ್ಲಿ ಜಾತೀಯತೆಯನ್ನು ನಿರ್ಮೂಲ ಮಾಡುವುದರಲ್ಲಿ ನಮ್ಮ ಮುಖ್ಯಮಂತ್ರಿಗಳು ಪ್ರಯತ್ನ ಮಾಡುತ್ತಾರೆ ಎಂದು ಹೇಳಿ ನನಗೆ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Statement of Chief Minister *re*: irrigation projects under Cauvery

Mr. SPEAKER.—The Hon. Chief Minister may now make the statement.

Sri VEERENDRA PATIL (Chief Minister).—I am fully aware that the minds of Hon'ble members of the House and of the people of the entire State of Mysore are agitated over the news appearing in today's papers stating that the Central Government has sought from the State Government an undertaking that it would not proceed with the Hemavathi, Harangi and Kabini projects in Mysore State, and also not to take up any fresh schemes not approved by the Planning Commission.

The first communication received in this connection from the Government of India was in September 1969. In this communication, the Government of India indicated thatr Pess reports have appeared to the effect that the Government of Mysore would not await clearance